ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ

**(ಪರಿಷ್ಕೃತ – 2022)**

# ೬

## ಆರನೆಯ ತರಗತಿ

©KTBS Not to be republished

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**

ನಂ. ೪, ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೇ ಹಂತ,
ಬೆಂಗಳೂರು – ೫೬೦೦೮೫

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು :**

ಡಾ|| ನಾ. ದಾಮೋದರ ಶೆಟ್ಟಿ, ನಿವೃತ್ತ ಪ್ರಾಧ್ಯಾಪಕರು, ಪ್ರಸಾಧನ, ಭಾರತೀ ನಗರ, ಬಿಜೈ, ಮಂಗಳೂರು–೦೪

**ಸದಸ್ಯರು :**

ಶ್ರೀ ಜೆ. ಸುರೇಶ್, ಸಿ.ಆರ್.ಪಿ. ನಲ್ಲೂರು ಕ್ಲಸ್ಟರ್, ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ

ಶ್ರೀ ವೀರೇಶ್‌ಕೌಲಗಿ, ಸ.ಶಿ. ಸರ್ಕಾರಿ ಪ್ರೌಢಶಾಲೆ, ಹಿರೇಗೌಜ, ಚಿಕ್ಕಮಗಳೂರು ತಾ.

ಶ್ರೀಮತಿ ಸುಶೀಲ, ಶಿಕ್ಷಣ ಸಂಯೋಜಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ

ಶ್ರೀ ಕೆ. ವೆಂಕಟರಾಜ ಯಳಚಿತ್ತಾಯ, ಸ.ಶಿ. ಸ್ವಾಮಿ ವಿವೇಕಾನಂದ ಪ.ಪೂ. ಕಾಲೇಜು (ಪ್ರೌಢಶಾಲಾ ವಿಭಾಗ) ಎಡಪದವು, ದ.ಕ.ಜಿಲ್ಲೆ

ಶ್ರೀ ಎಸ್.ಎಸ್.ಹಳ್ಳೂರ, ಸ.ಶಿ. ಮೋಹನ ರಾಮಣ್ಣ ಸೊನ್ನದ ಸರ್ಕಾರಿ ಪ್ರೌಢಶಾಲೆ, ಭಂಟನೂರ, ಮುಧೋಳ ತಾ, ಬಾಗಲಕೋಟೆ ಜಿಲ್ಲೆ

ಶ್ರೀ ಜಾನ್‌ಚಂದ್ರನ್, ಚಿತ್ರಕಲಾ ಶಿಕ್ಷಕರು, ಸೆಂಟ್ ಅಲೋಶಿಯಸ್ ಪ್ರೌಢಶಾಲೆ, ಕೊಡಿಯಾಲ ಬೈಲು, ಮಂಗಳೂರು

**ಪರಿಶೀಲಕರು :**

ಶ್ರೀ ಕಾ ತ ಚಿಕ್ಕಣ್ಣ, ಜಂಟಿ ನಿರ್ದೇಶಕರು, (ನಿವೃತ್ತ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

**ಸಂಪಾದಕ ಮಂಡಳಿ ಸದಸ್ಯರು :**

ಪ್ರೊ. ಚಂದ್ರಶೇಖರ ಪಾಟೀಲ್, ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ ನಗರ, ಬೆಂಗಳೂರು – ೭೮.

ಡಾ.ಕೆ. ಮರುಳಸಿದ್ದಪ್ಪ, ಸಾಹಿತಿಗಳು, ನಂ. ೧೩೭, ೧೨ ನೇ ಕ್ರಾಸ್, ಜೆ.ಪಿ. ನಗರ 2ನೇ ಹಂತ, ಬೆಂಗಳೂರು – ೭೮.

ಪ್ರೊ. ಸಾ.ಶಿ. ಮರುಳಯ್ಯ, ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.

ಪ್ರೊ. ಅ.ರಾ.ಮಿತ್ರ, ಸಾಹಿತಿಗಳು, ಕೆ.ಎಚ್. ಬಿ. ಕಾಲೋನಿ, ಯಲಹಂಕ, ಬೆಂಗಳೂರು.

ಡಾ. ವಿಷ್ಣು ಎಂ. ಶಿಂದೆ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**ಮುಖ್ಯ ಸಂಯೋಜಕರು :**

ಪ್ರೊ. ಜಿ.ಎಸ್. ಮುಡಂಬಡಿತ್ತಾಯ, ಸಂಯೋಜಕರು, ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫.

**ಸಲಹೆ ಮತ್ತು ಮಾರ್ಗದರ್ಶನ :**

ಶ್ರೀ ನಾಗೇಂದ್ರ ಕುಮಾರ್, ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫.

ಶ್ರೀಮತಿ ಸಿ. ನಾಗಮಣಿ, ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫.

**ಕಾರ್ಯಕ್ರಮ ಸಂಯೋಜಕರು :**

ಶ್ರೀ ಪಾಂಡುರಂಗ , ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು–೮೫.

©KTBS Not to be republished

# ಮುನ್ನುಡಿ

೨೦೦೫ ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೇ ಸಾಲಿನಿಂದ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೆಯ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು ೬ ರಿಂದ ೧೦ ನೆಯ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಆವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach), ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲ್ಯಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲ್ಯಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ ಸಂವರ್ಧನೆಯೇ ಕಲಿಕೆ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೮೫.

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೮೫.

©KTBS Not to be republished

## ಮುಂದುವರಿಯುವ ಮುನ್ನ......

ಪ್ರಿಯರೇ,

ಆರನೆಯ ತರಗತಿಯ ಕನ್ನಡ ಮಾಧ್ಯಮದ ಮಕ್ಕಳು ಯಾವ ಮಟ್ಟದ ಪಾಠಗಳನ್ನು ಓದಬೇಕು ಎಂಬುದರ ಬಗ್ಗೆ ಕರ್ನಾಟಕ ಸರಕಾರದ ಪಠ್ಯಪುಸ್ತಕ ರಚನಾ ಸಂಘವು ಕೊಟ್ಟ ಸ್ಥೂಲ ರೂಪುರೇಷೆಯನ್ನು ಆಧಾರವಾಗಿಟ್ಟುಕೊಂಡು ನಮ್ಮ ಸಮಿತಿಯು ಬಹಳ ಎಚ್ಚರಿಕೆಯಿಂದ ಈ ಪುಸ್ತಕವನ್ನು ಸಿದ್ಧಪಡಿಸಿದೆ. ಮಕ್ಕಳ ಸಾಮರ್ಥ್ಯಕ್ಕೆ ಅನುಗುಣವಾದ ಪಾಠವನ್ನು ಆಯ್ಕೆ ಮಾಡುವ ಬಹುದೊಡ್ಡ ಕಸರತ್ತನ್ನು ನಿಭಾಯಿಸಿ, ಅದಕ್ಕೆ ಬೇಕಾದ ಅಭ್ಯಾಸ, ವ್ಯಾಕರಣ ಇತ್ಯಾದಿಗಳನ್ನು ಪೋಣಿಸಿ ಈ 'ಸಿರಿ ಕನ್ನಡ' ವನ್ನು ಸಿದ್ಧಪಡಿಸಿದ್ದೇವೆ.

ಹಾಗೆ ಸಿದ್ಧಪಡಿಸುವಾಗ ಸಾಮರ್ಥ್ಯದ ಜೊತೆಜೊತೆಗೇ ಬದುಕಿಗೆ ನೇರ ಸಂಬಂಧ ಪಡುವ ಮೌಲ್ಯಗಳನ್ನು ಅಳವಡಿಸಿದ್ದೇವೆ. ಸಮಾಜದಲ್ಲಿ ಅತ್ಯುತ್ತಮ ಪ್ರಜೆಯಾಗಿ ರೂಪುಗೊಳ್ಳುವುದಕ್ಕೆ ಸಂಬಂಧಪಡುವ ಅನೇಕ ಅಂಶಗಳು ಇಲ್ಲಿವೆ. ಐದನೆಯ ತರಗತಿಯ ಪಠ್ಯಪುಸ್ತಕದ ಮುಂದುವರಿದ ರೂಪವಿದು.

ಪಾಠದ ಕೊನೆಯಲ್ಲಿ ಪೂರಕ ಪಾಠವನ್ನು ಕೊಡುವ ಕ್ರಮವನ್ನು ಇಲ್ಲೂ ಮುಂದುವರಿಸಿದ್ದೇವೆ. ಆದರೆ ಪಠ್ಯದ ಮಹತ್ತನ್ನೇ ಪೂರಕ ಪಠ್ಯಗಳಿಗೂ ನೀಡಿದ್ದೇವೆ ಎನ್ನಲಾಗುವುದಿಲ್ಲ. ಪೂರಕ ಪಾಠವೆಂದರೆ 'ಮುಂದುವರಿದ ಓದು' ಎಂದರ್ಥ. ಪಾಠ ಓದುವಾಗ ಒದಗಬಹುದಾದ ಕುತೂಹಲವನ್ನು ಅಲ್ಲಲ್ಲಿ ಕೊಟ್ಟಿರುವ ಪೂರಕ ಪಾಠಗಳು ತಣಿಸಬಹುದೆಂಬ ವಿಶ್ವಾಸ ನಮ್ಮದು. ಪರೀಕ್ಷೆಗೆ ಉತ್ತರಿಸದೆ ತಮ್ಮ ಖುಷಿಗೆ ಓದುವುದೆಂದರೆ ಮಕ್ಕಳಿಗೆ ಸಹಜವಾಗಿಯೇ ಪ್ರಿಯವೆನ್ನಿಸುತ್ತದೆ. ಪೂರಕಪಾಠವನ್ನು ಮಕ್ಕಳು ಓದಿರುವುದನ್ನು ಖಾತ್ರಿಪಡಿಸಲು ಆಯಾ ಪೂರಕ ಪಾಠಗಳ ಕೆಳಗೆ ಸರಳವಾದ ಕೆಲವು ಪ್ರಶ್ನೆಗಳನ್ನೂ ನೀಡಲಾಗಿದೆ. ಅಧ್ಯಾಪಕರು ಆ ಪ್ರಶ್ನೆಗಳನ್ನು ಕೇಳಿದರೆ ಮಕ್ಕಳು ಅವನ್ನು ಓದಿರುವುದು ಅಥವಾ ಓದದೇ ಇರುವುದು ಅರಿವಿಗೆ ಬರುತ್ತದೆ. ಮೇಲಾಗಿ ಸಣ್ಣದೊಂದು ಅಂಕ ಅವಕ್ಕೂ ಇದೆಯೆಂಬುದನ್ನು ವಿದ್ಯಾರ್ಥಿಗಳು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ವ್ಯಾಕರಣ ಮಾಹಿತಿ ಬಳಿಕ ಒಂದಷ್ಟು ಅಭ್ಯಾಸ ಭಾಗದ ಪ್ರಶ್ನೆಗಳನ್ನು ಇಲ್ಲಿ ನೀಡಲಾಗಿದೆ. ವಿದ್ಯಾರ್ಥಿಗಳು ಪ್ರತ್ಯೇಕವಾದ ಅಭ್ಯಾಸ ಪುಸ್ತಕದಲ್ಲಿ ಉತ್ತರ ಬರೆಯುವುದನ್ನು ರೂಢಿಸಿಕೊಳ್ಳಬೇಕು.

ವ್ಯಾಕರಣ ಭಾಗವನ್ನು ಬಹಳ ಸರಳಗೊಳಿಸಿದ್ದೇವೆ. ಉದಾಹರಣೆಗೆ ಸಂಧಿ, ಸಮಾಸಗಳ ಬಗ್ಗೆ ಸಮಗ್ರ ವಿವರ ಕೊಡದೆ ರುಚಿ ಹುಟ್ಟಿಸುವುದಕ್ಕೆ ಬೇಕಾದಷ್ಟನ್ನು ಮಾತ್ರ ಕೊಟ್ಟಿದ್ದೇವೆ. ಪ್ರಾಸದ ನಿರ್ದಿಷ್ಟವಾದ ಸೂತ್ರವನ್ನು ಕೊಟ್ಟು ಈ ಮಟ್ಟದ ವಿದ್ಯಾರ್ಥಿಗಳಿಗೆ ಹೆಚ್ಚು ತ್ರಾಸ ಕೊಡುವುದರ ಬದಲಿಗೆ ಸರಳವಾಗಿ ಪ್ರಾಸ ಎಂದರೇನು ಎಂಬುದನ್ನು ಮೇಲ್ನೋಟಕ್ಕೆ ತಿಳಿದುಕೊಳ್ಳಲು ಎಷ್ಟುಬೇಕು ಅಷ್ಟನ್ನೇ ಕೊಟ್ಟಿದ್ದೇವೆ. ಸೂತ್ರಗಳನ್ನು ಮುಂದೆ ಕಲಿತುಕೊಳ್ಳಲಿ. ಒಮ್ಮೆಲೆ ತಲೆತುಂಬಬೇಕೆಂಬ ಅವಸರ ನಮಗಿಲ್ಲ. ಆರನೆಯ ಕನ್ನಡ ಪ್ರಥಮ ಭಾಷೆಯ ಪಠ್ಯಪುಸ್ತಕವನ್ನು ಸಿದ್ಧಪಡಿಸುವ ಕೆಲಸದಲ್ಲಿ ಮನಸಾರೆ ಶ್ರಮಿಸಿದ ನನ್ನ ತಂಡದ ಎಲ್ಲ ಸದಸ್ಯರಿಗೂ ಪರಿಶೀಲಕರಾದ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೂ ನನ್ನ ಮನದುಂಬಿದ ಪ್ರಣಾಮಗಳು.

ಈ ಹೊತ್ತಗೆಯನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ನಮ್ಮ ಸಮಿತಿಗೆ ಒಪ್ಪಿಸಿಕೊಟ್ಟ ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರಿಗೆ, ಉಪನಿರ್ದೇಶಕರಿಗೆ, ಸಂಯೋಜಕರಾದ ಪ್ರೊ. ಜಿ.ಎಸ್. ಮುಡಂಬಡಿತ್ತಾಯರವರಿಗೆ, ಹಿರಿಯ ಸಹಾಯಕ ನಿರ್ದೇಶಕರಾದ ಶ್ರೀ ಪಾಂಡುರಂಗ ಮೊದಲಾದ ಎಲ್ಲರಿಗೂ ನನ್ನ ಹಾಗೂ ನಮ್ಮ ತಂಡದ ಗೌರವಪೂರ್ವಕ ನಮನಗಳು.

ಡಾ. ನಾ. ದಾಮೋದರ ಶೆಟ್ಟಿ
ಅಧ್ಯಕ್ಷರು
ಪಠ್ಯಪುಸ್ತಕ ರಚನಾ ಸಮಿತಿ
ಆರನೆಯ ಪ್ರಥಮ ಭಾಷೆಯ ಕನ್ನಡ

©KTBS Not to be republished

# ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ,** ರಾಜ್ಯಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ), ಬೆಂಗಳೂರು-೮೫

## ಪರಿಷ್ಕರಣ ಸಮಿತಿ

**ಅಧ್ಯಕ್ಷರು**

**ಡಾ. ರಾಜಪ್ಪ ದಳವಾಯಿ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕೋಲಾರ, ಬೆಂಗಳೂರು ವಿಶ್ವವಿದ್ಯಾಲಯ.

**ಸದಸ್ಯರು**

**ಡಾ. ಜಗನ್ನಾಥ್. ಹೆಬ್ಬಾಳೆ,** ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ, ವಾಣಿಜ್ಯ ಪ್ರಥಮ ದರ್ಜೆ ಕಾಲೇಜು, ಬೀದರ್.

**ಶ್ರೀ ಅಲ್ಲಮಪ್ರಭು ಬೆಟ್ಟದೂರು,** ನಿವೃತ್ತ ಪ್ರಾಂಶುಪಾಲರು, ಅಮರ ಚೇತನ, ತವಳಗೇರಿ ಕಾಲೋನಿ, ಕಲ್ಯಾಣನಗರ, ಕೊಪ್ಪಳ

**ಶ್ರೀ ವಿ.ರಂಗಪ್ಪಯ್ಯಹೊಳ್ಳ,** ನಿವೃತ್ತ ಕನ್ನಡ ಭಾಷಾ ಶಿಕ್ಷಕರು, ಶ್ರೀನಿವಾಸ ಚಿತ್ರಪಾಡಿ, ಸಾಲಿಗ್ರಾಮ, ಉಡುಪಿ ತಾ.

**ಶ್ರೀ ಬಿ. ರವೀಶ್‌ಕುಮಾರ್,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲ್ಲೂಕು.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು-೬೧

**ಶ್ರೀ ತಮ್ಮಣ್ಣಗೌಡ ಹೆಚ್.ಸಿ.,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾಲ್ಲೂಕು.

**ಶ್ರೀಮತಿ. ಸುಶೀಲ,** ಕನ್ನಡ ಅಧ್ಯಾಪಕಿ, (ಪ್ರೌಢಶಾಲಾ ವಿಭಾಗ), ಸರ್ಕಾರಿ ಪದವಿ ಪೂರ್ವ ಕಾಲೇಜು, ಮದ್ದೂರು ತಾಲ್ಲೂಕು.

**ಶ್ರೀ ಬಸವರಾಜಪ್ಪ, ಎಂ,** ಕನ್ನಡ ಅಧ್ಯಾಪಕರು (ಪ್ರೌಢಶಾಲಾ ವಿಭಾಗ), ಸರ್ಕಾರಿ.ಪ.ಪೂ.ಕಾಲೇಜು, ಹೊಸನಗರ ತಾ.

**ಶ್ರೀ ಎನ್.ಬಿ.ವೀರನಗೌಡ,** ಬಿ.ಅರ್.ಪಿ, ಕ್ಷೇತ್ರ ಸಮನ್ವಯಾಧಿಕಾರಿಗಳ ಕಛೇರಿ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

**ಕಲಾವಿದರು:**

**ಶ್ರೀ ವೆಂಕಟೇಶ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

## ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು-೭೮

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನಸಂಸ್ಥೆ, ಮಾನಸ ಗಂಗೋತ್ರಿ , ಮೈಸೂರು-೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ, ಎಚ್.ಎಸ್,** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-೮೫

**ಶ್ರೀ ಕೆ.ಜಿ. ರಂಗಯ್ಯ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-೮೫

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು-೮೫

©KTBS
Not to be republished

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು

©KTBS Not to be republished

ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯ ಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

©KTBS Not to be republished

**(ಎಂ.ಪಿ. ಮಾದೇಗೌಡ)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

# ಪುನರ್ ಪರಿಶೀಲನೆಯ ಕುರಿತು

೨೦೧೪ರ ಶೈಕ್ಷಣಿಕ ವರ್ಷದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳು ರಾಜಕೀಯ ಕಾರಣಗಳಿಗಾಗಿ ಅದೇ ವರ್ಷ ಪರಿಷ್ಕರಣೆಗೆ ಒಳಗಾದವು. ಪರಿಷ್ಕೃತ ಪಠ್ಯಪುಸ್ತಕಗಳು ೨೦೧೭-೧೮ರ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಕೈ ತಲುಪಿದವು. ಪರಿಷ್ಕೃತ ಪಠ್ಯಗಳಲ್ಲಾದ ಬದಲಾವಣೆಗಳ ಬಗ್ಗೆ ವ್ಯಾಪಕ ಟೀಕೆ, ವಿಮರ್ಶೆಗಳು ಬಂದವು. ಶಿಕ್ಷಣದ ಮೂಲ ಆಶಯಗಳನ್ನು ಬದಿಗಿಟ್ಟು ಸ್ವಹಿತಾಸಕ್ತಿಯ ಸಿದ್ಧಾಂತಗಳ ಪ್ರಚಾರಕ್ಕೆ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಯಿತೆಂಬ ಆಕ್ಷೇಪ ಎಲ್ಲೆಡೆಯಿಂದ ಕೇಳಿಬಂದ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರವು ೨೦೨೧ರಲ್ಲಿ ಈ ಪಠ್ಯಗಳ ಮರುಪರಿಶೀಲನೆ ನಡೆಸುವಂತೆ ಆದೇಶಿಸಿ ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯು ಆಪಾದನೆ ಕೇಳಿಬಂದ ನಿರ್ದಿಷ್ಟ ಪಠ್ಯಪುಸ್ತಕಗಳನ್ನು ಆಮೂಲಾಗ್ರ ಪರಿಶೀಲಿಸಿ ಬದಲಾವಣೆಗಳನ್ನು ಸೂಚಿಸಿದೆ.

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಮಾತಿದೆ. ಶಾಲೆಗಳಲ್ಲಿ ಓದುವ ಇಂದಿನ ಮಕ್ಕಳಿಗೆ ನಾವು ಎಂಥ ಪಠ್ಯಗಳನ್ನು ಬೋಧಿಸುತ್ತೇವೆಂಬುದರ ಮೇಲೆ ಸಮಾಜದ ಭವಿಷ್ಯ ನಿಂತಿದೆ. ವಿದ್ಯಾರ್ಥಿಗಳು ಓದುವ ಪಠ್ಯಗಳು ಆರೋಗ್ಯಕರ ಚಿಂತನೆಗಳನ್ನು ಒಳಗೊಂಡಿರಬೇಕು. ಸಮಾಜದ ವಿವಿಧ ವರ್ಗ-ಸಮುದಾಯಗಳಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಾತ್ಸಾರಗಳನ್ನು ಹರಡುವಂತಿರಬಾರದು. ಅವರಲ್ಲಿ ರಾಷ್ಟ್ರೀಯತೆಯನ್ನೂ ದೇಶಪ್ರೇಮವನ್ನೂ ಉದ್ದೀಪಿಸುವಂತಿರಬೇಕು. ರಾಜ್ಯ, ದೇಶಗಳಲ್ಲಿ ಆಗಿಹೋದ ಸಂಗತಿಗಳ ಬಗ್ಗೆ ನಿಖರವಾದ, ವಸ್ತುನಿಷ್ಠವಾದ ಮಾಹಿತಿ ದೊರೆಯುವಂತಿರಬೇಕು. ಅವರಿಗೆ ಸ್ಥಳೀಯ ಸಂಸ್ಕೃತಿ, ಭಾಷೆ, ಜನಪದಗಳ ಪರಿಚಯವಾಗುವಂತಿರಬೇಕು. ಒಟ್ಟಾರೆಯಾಗಿ ಪಠ್ಯಗಳು ವಿದ್ಯಾರ್ಥಿಗಳನ್ನು ಉತ್ತಮ, ಜವಾಬ್ದಾರಿಯುತ, ಪ್ರಜ್ಞಾವಂತ, ಮುಕ್ತ ಮನಸ್ಸಿನ, ಸಭ್ಯ ನಾಗರಿಕರನ್ನಾಗಿ ಮಾಡಬೇಕು. ಆ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ಪರಿಷ್ಕರಣೆ ಮಾಡಬೇಕಾಯಿತು.

©KTBS Not to be republished

೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾಗಿದ್ದ ಭಾಷಾ ಪಠ್ಯಗಳಲ್ಲಿ ನಮಗೆ ಅನೇಕ ಸಮಸ್ಯೆಗಳು ಕಂಡುಬಂದವು. ಅವುಗಳನ್ನು ಸರಿಪಡಿಸಲು ಪಠ್ಯಪುಸ್ತಕಗಳ ಪರಿಶೀಲನೆ, ಪರಿಷ್ಕರಣೆಗಳಲ್ಲಿ ನಾವು ನಮ್ಮದೇ ಆದ ಚೌಕಟ್ಟನ್ನು ನಿರ್ಮಿಸಿಕೊಂಡೆವು. ಭಾಷಾಪಠ್ಯವು ಇರುವುದು ವಿದ್ಯಾರ್ಥಿಯಲ್ಲಿ ಅಭಿವ್ಯಕ್ತಿಯ ಸಾಮರ್ಥ್ಯವನ್ನು ಉತ್ತಮಪಡಿಸುವುದಕ್ಕೆ. ಭಾಷಾಪಠ್ಯಗಳನ್ನು ಅಧ್ಯಯನ ಮಾಡಿದ ವಿದ್ಯಾರ್ಥಿಯಲ್ಲಿ ಭಾಷೆಯ ಬಗ್ಗೆ ಅಭಿಮಾನ ಮೂಡಬೇಕು; ಆತನ ಭಾಷಾಪ್ರೌಢಿಮೆ ಗಣನಾತ್ಮಕವಾಗಿ ಹೆಚ್ಚಬೇಕು. ಓದುವ, ಆಲಿಸುವ, ಮಾತಾಡುವ ಮತ್ತು ಬರೆಯುವ ಸಾಮರ್ಥ್ಯಗಳು ಸುಧಾರಿಸಬೇಕು. ಸ್ವತಂತ್ರವಾಗಿ ವಿದ್ಯಾರ್ಥಿಯು ತನ್ನ ಅಭಿಪ್ರಾಯ, ಅನಿಸಿಕೆಗಳನ್ನು ಅತ್ಯಂತ ಶಕ್ತಿಶಾಲಿಯಾಗಿ ಹೇಳುವುದಕ್ಕೆ ಸಾಧ್ಯವಾಗಬೇಕು. ೨೦೧೪ರಲ್ಲಿ ಪರಿಷ್ಕರಣೆಗೆ ಒಳಗಾದ ಪಠ್ಯಪುಸ್ತಕಗಳಲ್ಲಿ ಭಾಷೆಯ ಈ ಬಗೆಯ ಕಲಿಕೆಗೆ ಹಿನ್ನಡೆಯಾಗಿ ಕೇವಲ ಸಿದ್ಧಾಂತಪ್ರಚಾರವೇ ಮುನ್ನೆಲೆಗೆ ಬಂದಿದ್ದುದನ್ನು ಗಮನಿಸಿದೆವು. ಆ ಪಠ್ಯಗಳ ಮರುಪರಿಷ್ಕರಣೆಯ ಹೊತ್ತಿನಲ್ಲಿ ಈ ನಿಯಮಗಳನ್ನು ಹೇರಿಕೊಂಡೆವು: (೧) ಭಾಷಾಪಠ್ಯವಿರುವುದು ಅತ್ಯುತ್ತಮವಾದ ಪ್ರಾತಿನಿಧಿಕ ಪಠ್ಯವನ್ನು ಕೊಡುವುದಕ್ಕಾಗಿಯೇ ಹೊರತು ಸಾಮಾಜಿಕನ್ಯಾಯ, ಲಿಂಗಸಮಾನತೆ ಇತ್ಯಾದಿ ಅಂಶಗಳನ್ನು ತುರುಕುವುದಕ್ಕಲ್ಲ. ಹಾಗಾಗಿ ಭಾಷೆಯ ವೈವಿಧ್ಯ ಹಾಗೂ ವಿಶೇಷಗಳನ್ನು ಹೆಚ್ಚು ಕಾಣಿಸುವ ಗದ್ಯ/ಪದ್ಯ ಭಾಗಗಳನ್ನು ಆರಿಸಿಕೊಳ್ಳಬೇಕು. (೨) ಭಾಷೆಯ ಪಠ್ಯದ ಹೆಸರಿನಲ್ಲಿ ಸಿದ್ಧಾಂತಪ್ರಚಾರಕ್ಕೆ ಅವಕಾಶವಾಗಬಾರದು. (೩) ಗ್ರಾಂಥಿಕ ಭಾಷೆಯಲ್ಲದೆ ಮೌಖಿಕ ಪರಂಪರೆಯ ಹಾಗೂ ಹಲವು ಪ್ರಕಾರದ ಸಾಹಿತ್ಯಗಳಿಗೆ ಅವಕಾಶ ಕೊಡಬೇಕು. (೪) ಬಳಸಿದ ಭಾಷೆ, ಭಾಷಾಸೊಗಡು, ಪ್ರತಿಪಾದಿಸಿರುವ ವಿಚಾರ, ಹೊಸ ಚಿಂತನೆಗಳನ್ನು ಹುಟ್ಟಿಸುವ ಸಾಧ್ಯತೆ, ಸಾಹಿತ್ಯ

ಪ್ರಕಾರದ ವೈಶಿಷ್ಟ್ಯ ಇತ್ಯಾದಿ ಎಲ್ಲ ಬಗೆಯಲ್ಲೂ ಪಾಠಗಳ ಗುಣಮಟ್ಟ ಅತ್ಯುತ್ತಮವಾಗಿರಬೇಕು. (೫) ಕವಿ/ಲೇಖಕರ ಪುನರಾವರ್ತನೆಯನ್ನು ಕಡಿಮೆ ಮಾಡಿ ಹೊಸ ಕವಿ/ಲೇಖಕರ ಬರಹಗಳಿಗೆ ಅವಕಾಶ ಮಾಡಿಕೊಡಬೇಕು. (೬) ಭಾಷೆಯ ಸೊಬಗನ್ನು ಪರಿಚಯಿಸುವ ಭಾಗಗಳನ್ನು ಪ್ರತಿ ಅಧ್ಯಾಯದ ಜೊತೆ ಸೇರಿಸಬೇಕು.

ಅತ್ಯುತ್ತಮ ಪಠ್ಯಪುಸ್ತಕ ಎಂಬುದು ಒಂದು ಆದರ್ಶಸ್ಥಿತಿ. ಅದರತ್ತ ನಡೆಯುವುದು ನಮ್ಮ ಆಶಯವೇ ಹೊರತು ನೂರಕ್ಕೆ ನೂರು ಅತ್ಯುತ್ತಮವಾದ ಪಠ್ಯಪುಸ್ತಕವನ್ನು ರಚಿಸುವುದು ಸಾಧ್ಯವಿಲ್ಲ. ಆ ವಿನಯದಿಂದಲೇ ನಾವು ಈ ಪುನರ್ ಪರಿಶೀಲನೆಯ ಕಾರ್ಯವನ್ನು ಮುಗಿಸಿ ಪಠ್ಯಗಳನ್ನು ನಿಮ್ಮ ಕೈಗಿಡುತ್ತಿದ್ದೇವೆ. ಇದು ಕೇವಲ ಮರುಪರಿಷ್ಕರಣೆಯೇ ಹೊರತು ಸಮಗ್ರ ಪುನಾರಚನೆಯಲ್ಲ. ಈಗಾಗಲೇ (೨೦೧೪ರಲ್ಲಿ) ರಚಿತವಾಗಿದ್ದ ಪಠ್ಯಪುಸ್ತಕದ ಆಶಯ ಮತ್ತು ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಅದನ್ನನುಸರಿಸಿ ಬಂದ ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮುಂದಿಟ್ಟುಕೊಂಡೇ ಇಡಿಯ ಮರುಪರಿಷ್ಕರಣೆಯ ಕಾರ್ಯ ನಡೆದಿದೆ. ಜೊತೆಗೆ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲಾಗಿದೆ. ಪರಿಷ್ಕರಣೆಯ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿರುವ ಪರಿಶೀಲನಾ ಸಮಿತಿಯ ನನ್ನ ಎಲ್ಲ ಸಹೋದ್ಯೋಗಿಗಳಿಗೆ ನಾನು ಕೃತಜ್ಞ. ಅಂತೆಯೇ ಸಮಿತಿಯ ಕೆಲಸ ಸುಗಮವಾಗಿ ನಡೆಯಲು ಸಹಕರಿಸಿದ ಪಠ್ಯಪುಸ್ತಕ ಸಂಘದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೂ ಆಭಾರಿ. ಈ ಪರಿಷ್ಕರಣೆಯು ಈಗಷ್ಟೇ ಬಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳನ್ನು ಹೆಚ್ಚು ಪ್ರತಿಫಲಿಸುತ್ತ, ಮುಂದೆ ಬರಲಿರುವ ಸಮಗ್ರ ಪುನಾರಚಿತ ಪಠ್ಯಗಳಿಗೆ ಪ್ರವೇಶಿಕೆಯಾಗಲಿದೆ ಎಂಬ ಭರವಸೆ ನಮ್ಮದು.

**ಎಂ.ಪಿ. ಮಾದೇಗೌಡ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು–೮೫

**ರೋಹಿತ್ ಚಕ್ರತೀರ್ಥ**
ಅಧ್ಯಕ್ಷರು
ಕರ್ನಾಟಕ ಪಠ್ಯಪುಸ್ತಕಗಳ ಪರಿಶೀಲನಾ ಸಮಿತಿ

©KTBS Not to be republished

## ಪುನರ್ ಪರಿಷ್ಕರಣಾ ಸಮಿತಿ

**ಶ್ರೀ ರೋಹಿತ್ ಚಕ್ರತೀರ್ಥ,** ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.

**ಸದಸ್ಯರು :**

**ಡಾ. ರೋಹಿಣಾಕ್ಷ,** ಸಹಾಯಕ ಪ್ರಾಧ್ಯಾಪಕರು, ಜಾನಪದಶಾಸ್ತ್ರ ಮತ್ತು ಬುಡಕಟ್ಟು ಅಧ್ಯಯನ ವಿಭಾಗ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಡಗಂಚಿ, ಆಳಂದ ರಸ್ತೆ, ಕಲಬುರಗಿ.

**ಶ್ರೀ ಚಿಕ್ಕದೇವೇಗೌಡ,** ಕನ್ನಡ ಭಾಷಾ ಶಿಕ್ಷಕರು, ಕರ್ನಾಟಕ ಪಬ್ಲಿಕ್ ಶಾಲೆ, ಉತ್ತರಹಳ್ಳಿ, ಬೆಂಗಳೂರು, ದಕ್ಷಿಣ ವಲಯ–೧.

**ಸಲಹೆಗಾರರು :**

**ಶ್ರೀ ಎಂ.ಪಿ. ಮಾದೇಗೌಡ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫.

**ಶ್ರೀ ಕೆ.ಜಿ.ರಂಗಯ್ಯ** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫.

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ. ಎಂ.ಡಿ. ಉಷಾ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.), ಬೆಂಗಳೂರು–೮೫.

# ಪರಿವಿಡಿ

P1D1W4

## ಗದ್ಯಭಾಗ


| ಕ್ರಮ ಸಂಖ್ಯೆ | ಪಾಠದ ಶೀರ್ಷಿಕೆಗಳು | ಕೃತಿಕಾರರು | ಪುಟ ಸಂಖ್ಯೆ |
|---|---|---|---|
| ೧. | ದೊಡ್ಡವರ ದಾರಿ | ಜೆ.ಗೋ. ರಮೇಶ್ | ೦೧ |
| ೨. | ಗಂಧರ್ವಸೇನ ! | ಸಮಿತಿ ರಚನೆ | ೦೯ |
| ೩. | ಕೃಷ್ಣ – ಸುಧಾಮ (ನಾಟಕ) | ವಿ.ಎಸ್. ಶಿರಹಟ್ಟಿಮಠ | ೧೭ |
| ೪. | ಡಾ. ರಾಜಕುಮಾರ್ | ದೊಡ್ಡಹುಲ್ಲೂರು ರುಕ್ಕೋಜಿರಾವ್ | ೨೯ |
| ೫. | ಧನ್ಯವಾದ ಹೇಳಿದ ಕೊಕ್ಕರೆ | ಡಾ. ಅನುಪಮಾ ನಿರಂಜನ | ೩೫ |
| ೬. | ಸಿದ್ಧಾರೂಢರ ಜಾತ್ರೆ | ಸಮಿತಿ ರಚನೆ | ೪೦ |
| ೭. | ಯಾಣ ಕುರಿತೊಂದು ಪತ್ರ | ಸಮಿತಿ ರಚನೆ | ೪೮ |
| ೮. | ಕರ್ನಾಟಕ ಏಕೀಕರಣ | ಸಮಿತಿ ರಚನೆ | ೫೮ |
| | **ಪದ್ಯ ಭಾಗ** | | |
| ೯. | ಬೇಸಿಗೆ | ಬಿ. ಆರ್. ಲಕ್ಷ್ಮಣರಾವ್ | ೬೭ |
| ೧೦. | ಮಂಗಳ ಗ್ರಹದಲ್ಲಿ ಪುಟ್ಟಿ | ಸಿ.ಎಂ. ಗೋವಿಂದರೆಡ್ಡಿ | ೭೩ |
| ೧೧. | ನಮ್ಮದೇನಿದೆ ? | ನಿರ್ಮಲಾ ಸುರತ್ಕಲ್ | ೮೧ |
| ೧೨. | ಕಂಬಳಿಹುಳು ಮತ್ತು ಚಿಟ್ಟೆ | ಎನ್. ಶ್ರೀನಿವಾಸ ಉಡುಪ | ೮೫ |
| ೧೩. | ಹೊಸಬಾಳು | ಬಿ.ಎಸ್. ಕುರ್ಕಾಲ್ | ೯೦ |
| ೧೪. | ಗಂಗವ್ವ ತಾಯಿ | ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ | ೯೬ |
| ೧೫. | ಹೃದಯ ವಚನಗಳು | ಅಮೃತ ಸೋಮೇಶ್ವರ | ೧೦೩ |
| ೧೬. | ಕಿತ್ತೂರ ಕೇಸರಿ | ಪ.ಗು. ಸಿದ್ಧಾಪುರ | ೧೦೭ |
| | **ಪೂರಕ ಪಾಠಗಳು** | | |
| ೧. | ನಾಟ್ಯಕಲಾ ದುರಂಧರ ಮಹಮ್ಮದ್ ಪೀರ್ | ಸಮಿತಿ ರಚನೆ | ೧೧೩ |
| ೨. | ಅವ್ವ | ಲಲಿತಾ. ಕೆ. ಹೊಸಪ್ಯಾಟಿ | ೧೧೬ |
| ೩. | ಗಾಢ ಕತ್ತಲು ಮತ್ತು ಗುಮ್ಮಗಳು | ವಿಜಯಶ್ರೀ ಹಾಲಾಡಿ | ೧೧೮ |
| ೪. | ಹುಚ್ಚು ಹುರುಳು | ಬೀಚಿ | ೧೨೧ |
| ೫. | ಇರುವೆಯ ಪಯಣ | ಡಾ. ಎನ್. ಎಸ್. ಲಕ್ಷ್ಮೀ ನಾರಾಯಣ ಭಟ್ಟ | ೧೨೫ |


©KTBS Not to be republished

# ೧. ದೊಡ್ಡವರ ದಾರಿ

H9U3T2

– ಬೆ.ಗೋ. ರಮೇಶ್

**ಪ್ರವೇಶ :** ಪ್ರತಿಯೊಬ್ಬರ ಜೀವನದಲ್ಲಿಯೂ ಹಲವಾರು ಮರೆಯಲಾಗದ ಘಟನೆಗಳು ನಡೆಯುತ್ತವೆ. ಅವುಗಳ ಫಲ ಒಮ್ಮೆ ಸಿಹಿ, ಮತ್ತೊಮ್ಮೆ ಕಹಿ. ಕೆಲವು ಘಟನೆಗಳು ಇತರರಿಗೆ ಎಷ್ಟೋ ಅನುಭವ, ಜೀವನ ಪಾಠಗಳನ್ನು ಕಲಿಸಿದ್ದಿವೆ. ಅದರಿಂದ ಮನುಷ್ಯ ಎಚ್ಚರವಾದದ್ದೂ ಇದೆ. ದಾರ್ಶನಿಕರ ಜೀವನದಲ್ಲಿ ನಡೆದ ಘಟನೆಗಳು ದಾರಿದೀಪಗಳಾಗಿ ಇತರರಿಗೆ ಬೆಳಕು ನೀಡುತ್ತವೆ. ಅಂಥವರ ಜೀವನದಲ್ಲಿನ ಘಟನೆಗಳನ್ನು ನಮ್ಮ ಜೀವನದ ಬೆಳಕಿನ ಕಿರಣಗಳನ್ನಾಗಿಸಿಕೊಳ್ಳಬೇಕೆಂಬುದು ಇಲ್ಲಿನ ಆಶಯವಾಗಿದೆ.

## ಡಾ. ರಾಜೇಂದ್ರ ಪ್ರಸಾದ್



ಡಾ. ರಾಜೇಂದ್ರ ಪ್ರಸಾದರು ಭಾರತದ ಪ್ರಥಮ ರಾಷ್ಟ್ರಪತಿಗಳು. ಅತ್ಯಂತ ಉನ್ನತ ಸ್ಥಾನಕ್ಕೇರಿದರೂ ಸರಳ ಜೀವನ ನಡೆಸಿದವರು. ಜನಕ ಮಹಾರಾಜನಂತೆ ಅವರದು ಋಷಿಸದೃಶ ಜೀವನ. ಅವರು ಕೋಪವನ್ನು ಹತ್ತಿಕ್ಕಬಲ್ಲವರಾಗಿದ್ದರು. ಬಾಳಿನಲ್ಲಿ ಶಿಸ್ತು, ಸಂಯಮ, ಸಮಯಪಾಲನೆ ಇವುಗಳಿಗೆ ಭಾರಿ ಮಹತ್ವ ನೀಡುತ್ತಿದ್ದರು. ತಾವು ಜನರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು.

ಒಂದು ದಿನ ಕಚೇರಿಯ ಕೆಲಸ ಮುಗಿಸಿ ರಾಜೇಂದ್ರ ಪ್ರಸಾದರು ಮನೆಗೆ ಬಂದಾಗ ಅವರ ಒಂದು ಪುಸ್ತಕದ ಹಲವು ಪುಟಗಳು ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿ ಹರಿದು ಬಿದ್ದಿರುವುದನ್ನು ನೋಡಿದರು. ಇದೆಲ್ಲ ಮಕ್ಕಳ ಕೆಲಸ ಎಂಬುದು ಅವರಿಗೆ ಹೊಳೆಯಲು ಹೆಚ್ಚು ವೇಳೆ ಬೇಕಾಗಲಿಲ್ಲ. ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಗಬೇಕು ಎಂದೆನಿಸಿತು. ಆದರೆ ಆ ಮಕ್ಕಳನ್ನು ಅಪರಾಧಿಗಳಾಗಿಸಲು ಅವರ ಮನ ಒಪ್ಪಲಿಲ್ಲ. ಒಂದು ಉಪಾಯ ಹೂಡಿದರು.


ಪ್ರಸಾದರು ಮುಖ ಕೈಕಾಲು ತೊಳೆದು ಬಂದರು. ನಿಧಾನವಾಗಿ ಕೋಣೆಯಲ್ಲಿ ಹರಿದು ಬಿದ್ದಿದ್ದ ಪುಸ್ತಕದ ಪುಟಗಳನ್ನು ಒಂದೊಂದಾಗಿ ಎತ್ತಿ ಮೇಜಿನ ಮೇಲಿಟ್ಟರು. ಬಳಿಕ ಮಕ್ಕಳನ್ನೆಲ್ಲ ಬಳಿಗೆ ಕರೆದರು. ಮಕ್ಕಳು ಓಡೋಡಿ ಬಂದರು. ರಾಜೇಂದ್ರ ಪ್ರಸಾದರು "ಮಕ್ಕಳೇ, ನೋಡಿ ಇಲ್ಲಿ ಎಷ್ಟೊಂದು ಕಾಗದಗಳು ಹರಿದು ಹೋಗಿವೆ. ಇವೆಲ್ಲ ಪುಸ್ತಕದ ಪುಟಗಳು. ನಿಮ್ಮಲ್ಲಿ ಯಾರು ಯಾರು ಎಷ್ಟೆಷ್ಟು ಪುಟಗಳನ್ನು ಹರಿದಿದ್ದೀರೊ ಅವರಿಗೆ ಆ ಪುಟಗಳ ಸಂಖ್ಯೆಗನುಗುಣವಾಗಿ ಕಾಸು ಕೊಡುತ್ತೇನೆ. ಆಗಬಹುದೆ?" ಎಂದರು.

© KTBS Not to be republished

ಮಕ್ಕಳು ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಒಬ್ಬೊಬ್ಬರು ಕಾಸು ಸಿಗುವುದಲ್ಲ ಎಂಬ ಸಂತೋಷದಿಂದ ತಾವು ಹರಿದ ಪುಟಗಳ ಸಂಖ್ಯೆಯನ್ನು ತಿಳಿಸಿದರು. ಪ್ರಸಾದರು ಅವರಿಗೆಲ್ಲ ಅಷ್ಟಷ್ಟು ಕಾಸು ಕೊಟ್ಟರು. ಹುಡುಗರಿಗೆ ಖುಷಿಯೋ ಖುಷಿ! ಆಗ ಪ್ರಸಾದರು "ನೋಡಿ ಮಕ್ಕಳೇ, ಪುಸ್ತಕಗಳು ಜ್ಞಾನ ಭಂಡಾರ. ನಮ್ಮ ತಿಳಿವಳಿಕೆಯನ್ನು ಹೆಚ್ಚಿಸುವ ಆಕರಗಳು. ಪುಸ್ತಕದ ಪುಟಗಳನ್ನು ಹರಿದು ಹಾಕುವುದು ಒಳ್ಳೆಯ ಅಭ್ಯಾಸವಲ್ಲ. ತಿಳಿಯಿತೆ?" ಎಂದು ಮಕ್ಕಳಿಗೆ ತಿಳಿಯುವಂತೆ ಹೇಳಿದರು.

ಮಕ್ಕಳಿಗೆ ತಮ್ಮ ತಪ್ಪಿನ ಅರಿವಾಯಿತು. ಅವರೆಲ್ಲ ರಾಜೇಂದ್ರರಿಗೆ, "ತಾತಾ ನಾವು ಇನ್ನು ಮುಂದೆ ಎಂದೂ ಪುಸ್ತಕಗಳ ಪುಟಗಳನ್ನು ಹರಿಯುವುದಿಲ್ಲ. ಜೋಪಾನ ಮಾಡುತ್ತೇವೆ" ಎಂದು ಪ್ರಮಾಣಮಾಡಿ ಹೇಳಿದರು. ಪ್ರಸಾದರಿಗೆ ಸಮಾಧಾನವಾಯಿತು. ಮಕ್ಕಳಲ್ಲಿ ಅಪರಾಧಿ ಮನೋಭಾವ ಮೂಡಲಿಲ್ಲ. ದೊಡ್ಡ ವ್ಯಕ್ತಿಗಳೇ ಹಾಗೆ. ಕೋಪ, ಅಸಹನೆ, ತಾಳ್ಮೆಗೆಡುವುದು ಇವೆಲ್ಲ ಅವರಿಂದ ದೂರ. ಪ್ರಗತಿಯ ಗುಟ್ಟೇ ಅದು.

## ಡಾ. ಜಾಕಿರ್ ಹುಸೇನ್



ಡಾ. ಜಾಕಿರ್ ಹುಸೇನರು ಭಾರತೀಯ ಶಿಕ್ಷಣದ ಅಭಿವೃದ್ಧಿ ಹಾಗೂ ಸುಧಾರಣೆ ಕುರಿತಂತೆ ಹಲವು ಪುಸ್ತಕಗಳನ್ನು ಬರೆದವರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಬಿಹಾರದ ರಾಜ್ಯಪಾಲರಾಗಿ, ಭಾರತದ ಉಪರಾಷ್ಟ್ರಪತಿಗಳಾಗಿ, ಅನಂತರ ರಾಷ್ಟ್ರಪತಿಗಳಾಗಿ ದುಡಿದವರು. ಕೆಲಕಾಲ ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದರು. ಶಿಕ್ಷಣ ಅವರ ಪ್ರಮುಖ ಕಾರ್ಯಕ್ಷೇತ್ರವಾಗಿತ್ತು.

ದೆಹಲಿಯ ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯ ಉನ್ನತ ಶಿಕ್ಷಣಕ್ಕೆ ಹೆಸರಾದ ಸಂಸ್ಥೆ. ಅದರ ಸ್ಥಾಪಕರು ಡಾ. ಜಾಕಿರ್ ಹುಸೇನರು. ಅವರು ತಮ್ಮ ಜೀವನದ ಬಹುಭಾಗವನ್ನು ಆ ವಿಶ್ವವಿದ್ಯಾಲಯದಲ್ಲಿಯೇ ಕಳೆದರೆನ್ನಬಹುದು. ಅಲ್ಲಿನ ಒಂದು ಘಟನೆ ತುಂಬಾ ರೋಚಕವಾಗಿದೆ.

©KTBS Not to be republished

ಡಾ. ಜಾಕಿರ್ ಹುಸೇನರು ಶಿಸ್ತು ಮತ್ತು ಶುಚಿಗೆ ಅಪಾರ ಮಹತ್ವ ನೀಡುತ್ತಿದ್ದರು. ಎಲ್ಲ ವಿದ್ಯಾರ್ಥಿಗಳೂ ಪ್ರತಿನಿತ್ಯ ಶುಚಿಯಾದ ಬಟ್ಟೆಗಳನ್ನು ಧರಿಸಿ ಕಾಲೇಜಿಗೆ ಬರಬೇಕು ಹಾಗೂ ಕಾಲಿಗೆ ಹಾಕಿದ ಬೂಟುಗಳನ್ನು ಚೆನ್ನಾಗಿ ಪಾಲಿಶ್ ಮಾಡಿರಬೇಕು ಎಂದು ಹೇಳುತ್ತಿದ್ದರು. ಆದರೆ ಎಷ್ಟೋ ವಿದ್ಯಾರ್ಥಿಗಳು ಜಾಕಿರ್ ಹುಸೇನರು ಹೇಳಿದುದನ್ನು ಸರಿಯಾಗಿ ಪಾಲಿಸುತ್ತಿರಲಿಲ್ಲ. ಇದರಿಂದ ಶಿಸ್ತಿಗೆ ಭಂಗವಾಗುವುದೆಂದು ಹುಸೇನರು ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳಿಗೆ ಬುದ್ಧಿಕಲಿಸಲು ತಾವೇ ಒಂದು ದಾರಿ ಕಂಡುಕೊಂಡರು.

ಒಂದುದಿನ ವಿಶ್ವವಿದ್ಯಾಲಯದ ಪ್ರವೇಶದ್ವಾರದಲ್ಲಿ ಜಾಕಿರ್ ಹುಸೇನರು ಒಬ್ಬ ಬೂಟ್‌ಪಾಲಿಶ್ ಹಾಕುವವನ ವೇಷದಲ್ಲಿ ಕುಳಿತಿದ್ದು ವಿದ್ಯಾರ್ಥಿಗಳ ಗಮನಕ್ಕೆ ಬಂತು. ಕುಲಪತಿಗಳು ಕೈಯಲ್ಲಿ ಪಾಲಿಶ್ ಡಬ್ಬಿ, ಬ್ರಷ್ ಹಿಡಿದು ಕುಳಿತಿದ್ದ ದೃಶ್ಯ ಕಂಡ ವಿದ್ಯಾರ್ಥಿಗಳು ತಮ್ಮ ವರ್ತನೆಗೆ ನಾಚಿದರು. ಒಂದಿಬ್ಬರು ಪಾಲಿಶ್ ಹಾಕಿಸಿಕೊಂಡೂ ಆಗಿತ್ತು.

ಅಂದಿನಿಂದ ವಿದ್ಯಾರ್ಥಿಗಳು ನೀಟಾಗಿ ಬಟ್ಟೆ ಹಾಕಿಕೊಂಡು ಬೂಟುಗಳಿಗೆ ಪಾಲಿಶ್ ಹಾಕಿಕೊಂಡು ಕಾಲೇಜಿಗೆ ಬರತೊಡಗಿದರು. ಇದು ವಿದ್ಯಾರ್ಥಿಗಳ ಬಾಳಿನಲ್ಲಿ ಶಿಸ್ತು ಬೆಳೆಸಿಕೊಳ್ಳಲು ನೆರವಾಯಿತು.

"ಶಿಸ್ತು ಮೂಡಿಸಿಕೊಳ್ಳಿ" ಇದು ಜಾಕಿರ್ ಹುಸೇನರ ಆದೇಶವಾಗಿತ್ತು.

**ಕ್ಷೇತ್ರ : ಮಾತನಾಡುವುದು**
**ಸಾಮರ್ಥ್ಯ : ಸನ್ನಿವೇಶ ಮತ್ತು ಘಟನೆಗಳನ್ನು ಕುರಿತು ನಿಖರವಾಗಿ ಮಾತನಾಡುವುದು**

**ಕವಿ ಕೃತಿ ಪರಿಚಯ:**



**ಬೆ. ಗೋ. ರಮೇಶ್** ಅವರು **೧೯೪೫ ರ ಆಗಸ್ಟ್ ೨೨** ರಂದು **ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ದೊಡ್ಡಹನಸೋಗೆ ಗ್ರಾಮದಲ್ಲಿ** ಜನಿಸಿದರು. ತಂದೆ ಬಿ.ಎಸ್. ಗೋವಿಂದರಾಜು, ತಾಯಿ ರಾಧಮ್ಮ.

ರಮೇಶ್ ಬಿ.ಇ. ಪದವೀಧರರಾಗಿ ಕರ್ನಾಟಕ ವಿದ್ಯುತ್ ನಿಗಮದಲ್ಲಿ ಕಾರ್ಯನಿರ್ವಾಹಕ ಅಭಿಯಂತರರಾಗಿ ಸೇವೆಸಲ್ಲಿಸಿ ನಿವೃತ್ತರಾಗಿರುವರು. ಪ್ರವೃತ್ತಿಯಿಂದ ಸಾಹಿತಿಗಳಾಗಿರುವ ಇವರು ಉತ್ತಮ ಭಾಷಾಂತರಕಾರರೂ ಗಮಕಿಗಳೂ ಆಗಿರುವರು. ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವರು, ಕನ್ನಡದಲ್ಲಿ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಸುಮಾರು ಐನೂರು ಪುಸ್ತಕಗಳನ್ನು ರಚಿಸಿರುವರು. ಜೀವನಚರಿತ್ರೆ, ವ್ಯಕ್ತಿ ಚಿತ್ರಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರು. **ವಿಶ್ವವಿಖ್ಯಾತ ಮಹಿಳೆಯರು, ನಮ್ಮ ಗಮಕಿಗಳು, ಕನ್ನಡ ಕವಿರತ್ನತ್ರಯರು, ವಿಜ್ಞಾನಿಗಳ ಹಾಗೂ ದೇಶಭಕ್ತರ ಜೀವನ ಚರಿತ್ರೆಗಳು** ಇವರ ಗಮನಾರ್ಹ ಕೃತಿಗಳು.

**'ಶಾಂತಿಪ್ರಿಯ'** ಅಂಕಿತದಲ್ಲಿ ಇವರು ರಚಿಸಿದ ಆರುನೂರು ವಚನಗಳ ಸಂಕಲನ **'ವಚನಸಾಗರ'** ಕೃತಿಗೆ ವಚನ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿರುತ್ತದೆ. **ಸರ್ ಎಂ.ವಿ. ನವರತ್ನ ಪ್ರಶಸ್ತಿ, ಡೆಪ್ಯುಟಿ ಚನ್ನಬಸಪ್ಪ ರಾಜ್ಯ ಪ್ರಶಸ್ತಿ** ಮೊದಲಾದ ಪ್ರಶಸ್ತಿಗಳು ಸಂದಿವೆ.

ಪ್ರಸ್ತುತ ಪಠ್ಯಭಾಗವನ್ನು ಇವರ **"ಪ್ರಸಿದ್ಧ ವ್ಯಕ್ತಿಗಳ ಬಾಳಿನಲ್ಲಿ ಒಂದು ಘಟನೆ"** ಕೃತಿಯಿಂದ ಆಯ್ದುಕೊಳ್ಳಲಾಗಿದೆ.

©KTBS Not to be republished

## ಪದಗಳ ಅರ್ಥ

ರಾಷ್ಟ್ರಪತಿ–ರಾಷ್ಟ್ರಾಧ್ಯಕ್ಷ, ರಾಷ್ಟ್ರದ ಪ್ರಥಮ ಪ್ರಜೆ. ಉನ್ನತ–ಎತ್ತರವಾದ, ಮೇಲಾದ. ಹತ್ತಿಕ್ಕು–ಅಡಗಿಸು, ದಮನಮಾಡು. ಚೆಲ್ಲಾಪಿಲ್ಲಿ–ಅಸ್ತವ್ಯಸ್ತ, ಚೆದುರು. ಅನುಗುಣ–ಅನುಸಾರ, ಹೊಂದಿಕೊಂಡು. ಆಕರ–ಮೂಲ ಆಧಾರ. ಮನೋಭಾವ–ಮನಸ್ಸಿನಭಾವನೆ. ದೌರ್ಬಲ್ಯ–ಬಲಹೀನತೆ, ಚಾಪಲ್ಯ. ಭಂಗ–ಸೋಲು, ವೈಫಲ್ಯ. ವರ್ತನೆ– ನಡತೆ, ರೀತಿ. ಆದೇಶ–ಆಜ್ಞೆ, ಅಪ್ಪಣೆ. ಸದೃಶ–ಹೋಲುವ, ಸಾಟಿಯಾದ. ಸಂಯಮ–ಹತೋಟಿ, ನಿಯಂತ್ರಣ. ಅಪರಾಧಿ–ತಪ್ಪುಮಾಡಿದವನು. ಭಂಡಾರ–ಬೊಕ್ಕಸ, ಖಜಾನೆ. ಜೋಪಾನ–ರಕ್ಷಣೆ, ಜತನ. ಪ್ರಗತಿ–ಮುನ್ನಡೆ, ಅಭಿವೃದ್ಧಿ. ರೋಚಕ–ಕುತೂಹಲಕಾರಿ, ಸೋಜಿಗದಾಯಕ. ಪ್ರವೇಶದ್ವಾರ–ಒಳಹೋಗುವ ಮುಖ್ಯ ಬಾಗಿಲು. ನೀಟಾಗಿ–ಅಂದವಾಗಿ, ಸೊಗಸಾಗಿ.

**ವಿವರ ತಿಳಿಯಿರಿ:**

**ಜನಕ ಮಹಾರಾಜ** : ಮಿಥಿಲೆಯ ರಾಜ, ಸೀತೆಯ ತಂದೆ.
**ತಾಳ್ಮೆಗೆಡು** : ಸಹನೆ ಕಳೆದುಕೊಳ್ಳು, ಕೋಪಕ್ಕೆ ಒಳಗಾಗು.
**ಸಂಸ್ಕೃತಿ** : ದೇಶದ ನಾಗರಿಕತೆಯ ಸಾರ, ರಾಷ್ಟ್ರೀಯ ಸಂಸ್ಕಾರ.
**ರಾಜ್ಯಪಾಲ** : ರಾಜ್ಯದ ಮುಖ್ಯಸ್ಥ, ರಾಜ್ಯದ ಪ್ರಥಮ ಪ್ರಜೆ.
**ವಿಶ್ವವಿದ್ಯಾಲಯ** : ಉನ್ನತ ವಿದ್ಯಾಭ್ಯಾಸ ನೀಡುವ ಸಂಸ್ಥೆ, ವಿಶ್ವವಿದ್ಯಾಲಯ
**ಕುಲಪತಿ** : ವಿಶ್ವವಿದ್ಯಾಲಯದ ಮುಖ್ಯಸ್ಥ.
**ಕಾರ್ಯಕ್ಷೇತ್ರ** : ಕಾರ್ಯರಂಗ, ಕೆಲಸ ನಿರ್ವಹಿಸುವ ವಲಯದ ವ್ಯಾಪ್ತಿ.
**ಪಾಲಿಶ್** : ಹೊಳಪು ಬರುವಂತೆ ಮಾಡುವಿಕೆ.
**ಬುದ್ಧಿಕಲಿಸು** : ತಿಳುವಳಿಕೆಯನ್ನುಂಟುಮಾಡು, ಸರಿದಾರಿಗೆ ತರು.

©KTBS Not to be republished

## ಅಭ್ಯಾಸಗಳು

**ಅ. ಆವರಣದಲ್ಲಿ ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಆರಿಸಿ ಬಿಟ್ಟಸ್ಥಳ ಭರ್ತಿಮಾಡಿರಿ.**

೧. ಮಕ್ಕಳಿಗೆ ತಮ್ಮ____________ಅರಿವಾಗಬೇಕು ಎಂದೆನಿಸಿತು.

೨. ಪ್ರಸಾದರು ಅವರಿಗೆಲ್ಲ ಅಷ್ಟಷ್ಟು __________ ಕೊಟ್ಟರು.

೩. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ತಾವೇ ಒಂದು __________ಕಂಡುಕೊಂಡರು.

೪. ಒಂದಿಬ್ಬರು ____________ಹಾಕಿಸಿಕೊಂಡೂ ಆಗಿತ್ತು.

(ಪಾಲಿಶ್, ಕಾಸು, ಕಾಗದದ ಚೂರು, ತಪ್ಪಿನ, ದಾರಿ)

**ಆ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ರಾಷ್ಟ್ರಪತಿ ೨. ಕಾಸು ೩. ಶಿಸ್ತು ೪. ದಾರಿ

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ರಾಜೇಂದ್ರ ಪ್ರಸಾದರು ತಾವು ಯಾರ ಸೇವಕ ಎಂದು ಹೇಳಿಕೊಳ್ಳುತ್ತಿದ್ದರು?

೨. ಪುಸ್ತಕದ ಪುಟಗಳನ್ನು ಹರಿದ ಮಕ್ಕಳಿಗೆ ಪ್ರಸಾದರು ಏನನ್ನು ಕೊಟ್ಟರು?

೩. ಯಾವುದು ಒಳ್ಳೆಯ ಅಭ್ಯಾಸವಲ್ಲ ಎಂದು ಪ್ರಸಾದರು ಮಕ್ಕಳಿಗೆ ಹೇಳಿದರು?

೪. ಜಾಮಿಯಾ ಮಿಲಿಯಾ ಎಲ್ಲಿದೆ?

೫. ಜಾಕಿರ್ ಹುಸೇನರು ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಯಾವ ವೇಷ ಹಾಕಿದರು?

**ಈ. ಕೆಳಗಿನ ವಾಕ್ಯಗಳನ್ನು ಯಾರು ಯಾರಿಗೆ ಹೇಳಿದರು?**

೧. "ನೋಡಿ ಮಕ್ಕಳೇ, ಪುಸ್ತಕಗಳು ಜ್ಞಾನ ಭಂಡಾರ."

೨. "ತಾತಾ, ನಾವು ಇನ್ನು ಮುಂದೆ ಎಂದೂ ಪುಸ್ತಕಗಳ ಪುಟಗಳನ್ನು ಹರಿಯುವುದಿಲ್ಲ."

**ಉ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ರಾಜೇಂದ್ರ ಪ್ರಸಾದ್ ಅವರ ವ್ಯಕ್ತಿತ್ವವನ್ನು ವಿವರಿಸಿರಿ.

೨. ವಿದ್ಯಾರ್ಥಿಗಳಿಗೆ ಬುದ್ಧಿ ಕಲಿಸಲು ಜಾಕಿರ್‌ಹುಸೇನ್ ಏನು ಮಾಡಿದರು?

**ಊ. ವಚನ ಬದಲಿಸಿ ಬರೆಯಿರಿ.**

೧. ಗಿಡ ೨. ತಮ್ಮಂದಿರು ೩. ಪತ್ರಗಳು ೪. ಮಗು

**ಋ. ಪುಲ್ಲಿಂಗ ಅಥವಾ ಸ್ತ್ರೀಲಿಂಗ ರೂಪಕ್ಕೆ ಪರಿವರ್ತಿಸಿ ಬರೆಯಿರಿ.**

೧. ಅವನು ೨. ಇವಳು ೩. ಗೌಡತಿ ೪. ಶರಣ

**ಎ. ಕೆಳಗಿನವುಗಳಿಗೆ ನಾಲ್ಕು ಉದಾಹರಣೆಗಳನ್ನು ಕೊಡಿರಿ.**

೧. ಅನ್ವರ್ಥನಾಮ ೨. ರೂಢನಾಮ ೩. ಅಂಕಿತನಾಮ

© KTBS Not to be Republished

## ವ್ಯಾಕರಣ ಮಾಹಿತಿ

ನಾವು ಹಿಂದಿನ ತರಗತಿಯಲ್ಲಿ ಕೆಲವು ವ್ಯಾಕರಣಾಂಶಗಳನ್ನು ತಿಳಿದುಕೊಂಡಿದ್ದೆವು. ಅವುಗಳನ್ನು ನೆನಪು ಮಾಡಿಕೊಳ್ಳೋಣ.

- **ವರ್ಣಮಾಲೆಯಲ್ಲಿ ಒಟ್ಟು ೪೯ ಅಕ್ಷರಗಳಿವೆ.**
- **ವರ್ಣಮಾಲೆಯನ್ನು ಮೂರು ಗುಂಪುಗಳಾಗಿ ವರ್ಗೀಕರಿಸಲಾಗಿದೆ.** ಅವೆಂದರೆ:

  ೧. ಸ್ವರಾಕ್ಷರಗಳು–೧೩

  ೨. ವ್ಯಂಜನಾಕ್ಷರಗಳು–೩೪

  ೩. ಯೋಗವಾಹಗಳು–೨

- **ಸ್ವರಾಕ್ಷರಗಳು ೨ ರೀತಿಯಲ್ಲಿವೆ.**

  ೧. ಹ್ರಸ್ವ ಸ್ವರಗಳು–೬ ೨. ದೀರ್ಘ ಸ್ವರಗಳು–೭

- **ಯೋಗವಾಹಗಳಲ್ಲಿ ೨ ವಿಧ**

  ೧. ಅನುಸ್ವಾರ (ಂ) ೨. ವಿಸರ್ಗ (ಃ)

- **ವ್ಯಂಜನಗಳನ್ನು ಎರಡು ರೀತಿಯಲ್ಲಿ ವಿಂಗಡಿಸಿದೆ.**

  ೧. ವರ್ಗೀಯ ವ್ಯಂಜನ–೨೫ ೨. ಅವರ್ಗೀಯ ವ್ಯಂಜನ–೯

- **ವರ್ಗೀಯ ವ್ಯಂಜನಗಳಲ್ಲಿ ಮೂರು ಗುಂಪುಗಳಿವೆ.**

  ೧. ಅಲ್ಪ ಪ್ರಾಣಾಕ್ಷರಗಳು (೧೦)

  ೨. ಮಹಾ ಪ್ರಾಣಾಕ್ಷರಗಳು (೧೦)

  ೩. ಅನುನಾಸಿಕ ಅಕ್ಷರಗಳು. (೫)

- **ಗುಣಿತಾಕ್ಷರಗಳು :**

  ವ್ಯಂಜನಗಳಿಗೆ ಸ್ವರಗಳು ಸೇರಿ ಆಗುವ ಅಕ್ಷರಗಳನ್ನು ಗುಣಿತಾಕ್ಷರಗಳು ಎನ್ನುವರು.

  **ಉದಾ:** ಕ್+ಅ=ಕ, ಕ್+ಒ=ಕೊ, ಕ್+ಋ=ಕೃ ಮುಂತಾದವು.

**ಉದಾ:** 'ಬಾಯಾರಿಕೆ' ಇಲ್ಲಿನ ಅಕ್ಷರಗಳನ್ನು ಬಿಡಿಸಿ ಬರೆದಾಗ –
ಬ್+ಆ=ಬಾ, ಯ್+ಆ=ಯಾ, ರ್+ಇ=ರಿ, ಕ್+ಎ=ಕೆ ಎಂದಾಗುತ್ತದೆ
ಅಂತೆಯೇ 'ಕೃತಕ' – ಇಲ್ಲಿನ ಅಕ್ಷರಗಳನ್ನು ಬಿಡಿಸಿದಾಗ ಕ್+ಋ, ತ್+ಅ, ಕ್+ಅ – ಎಂದಾಗುತ್ತದೆ.

©KTBS Not to be republished

➢ **ಸಂಯುಕ್ತಾಕ್ಷರಗಳು :**

ವ್ಯಂಜನಕ್ಕೆ ವ್ಯಂಜನ ದ್ವಿತ್ವವಾಗಿ ಸೇರಿಕೊಂಡು (ಸ್ವರದ ಸಹಾಯದಿಂದ) ಉಂಟಾಗುವ ಅಕ್ಷರವನ್ನು ಸಂಯುಕ್ತಾಕ್ಷರ ಅಥವಾ ಒತ್ತಕ್ಷರ ಅಥವಾ ದ್ವಿತ್ವಾಕ್ಷರ ಎಂದು ಕರೆಯುವರು.

➢ **ಸಂಯುಕ್ತಾಕ್ಷರಗಳಲ್ಲಿ ೨ ವಿಧಗಳಿವೆ :**

೧. ಸಜಾತೀಯ ಸಂಯುಕ್ತಾಕ್ಷರಗಳು　　　೨. ವಿಜಾತೀಯ ಸಂಯುಕ್ತಾಕ್ಷರಗಳು.

ಒಂದೇ ಜಾತಿಯ ಎರಡು ವ್ಯಂಜನಗಳು (ಸ್ವರದ ಸಹಾಯದಿಂದ) ಒಂದಕ್ಕೊಂದು ಸೇರಿದರೆ ಸಜಾತೀಯ ಸಂಯುಕ್ತಾಕ್ಷರಗಳಾಗುವವು.

**ಉದಾ:** ಹ, **ಗ್+ಗ್+ಅ** = ಹಗ್ಗ ಎಂದಾಗುತ್ತದೆ.

ಬೇರೆ ಬೇರೆ ಜಾತಿಯ ಎರಡು ಅಥವಾ ಹೆಚ್ಚು ವ್ಯಂಜನಗಳು ಒಂದಕ್ಕೊಂದು ಕೂಡಿ–ಕೊಂಡು ಉಂಟಾಗುವ ಅಕ್ಷರವು ವಿಜಾತೀಯ ಸಂಯುಕ್ತಾಕ್ಷರವೆನಿಸುವುದು.

**ಉದಾ:** ರ, **ಕ್+ತ್+ಅ** = ರ**ಕ್ತ**.

ಇಲ್ಲಿ ಕ್ ಮತ್ತು ತ್ ಇವು ಪರಸ್ಪರ ವಿಜಾತೀಯ ವ್ಯಂಜನಗಳಾಗಿದ್ದು ಇವೆರಡು ಕೂಡಿ 'ಕ್ತ' ಎಂಬ ವಿಜಾತೀಯ ಸಂಯುಕ್ತಾಕ್ಷರವಾಗಿದೆ.

ಅಸ್ತ್ರ, ರಾಷ್ಟ್ರ, ಸ್ವಾತಂತ್ರ್ಯ ಮುಂತಾದವು ಒಂದಕ್ಕಿಂತ ಹೆಚ್ಚು ಸಂಯುಕ್ತಾಕ್ಷರಗಳನ್ನು ಒಳಗೊಂಡಿವೆ.

©KTBS
Not to be republished

## ಭಾಷಾ ಆಟಗಳು

### ಅ) ಚಿತ್ರ ನೋಡಿರಿ–ಮಾತನಾಡಿರಿ.

ಕೆಲವು ಸನ್ನಿವೇಶದ ಚಿತ್ರಗಳನ್ನು ಬೋರಲು ಹಾಕುವುದು. ವಿದ್ಯಾರ್ಥಿಯು ಒಂದನ್ನು ತೆಗೆದುಕೊಂಡು ಅವನಿಗೆ ಬಂದಿರುವ ಚಿತ್ರವನ್ನು ಗಮನಿಸಿ, ಅದರ ಕುರಿತಾಗಿ ಮಾತನಾಡಲು ಅವಕಾಶ ಕಲ್ಪಿಸುವುದು.

**ಉದಾಹರಣೆಗೆ:–**

- ಸಂತೆಯ ದೃಶ್ಯ
- ರಸ್ತೆಯ ಸನ್ನಿವೇಶ
- ಶಾಲಾ ಸನ್ನಿವೇಶ
- ರಾಷ್ಟ್ರೀಯ ಹಬ್ಬಗಳ ಆಚರಣೆ

- ಕ್ರೀಡಾಂಗಣದಲ್ಲಿ ಆಟ ಆಡುತ್ತಿರುವುದು
- ಆಸ್ಪತ್ರೆಯ ದೃಶ್ಯ
- ಪರಿಸರ(ಅರಣ್ಯ) ಚಿತ್ರ
- ಕಸುಬುದಾರರು ಕೆಲಸ ಮಾಡುತ್ತಿರುವುದು
- ಮಳೆ ಬರುತ್ತಿರುವ ದೃಶ್ಯ
- ಸಾಮೂಹಿಕ ಭೋಜನ

## ಯೋಜನೆ

➢ ಭಾರತದ ರಾಷ್ಟ್ರಪತಿಗಳ ಭಾವಚಿತ್ರ ಮತ್ತು ಅವರ ಕಿರು ಪರಿಚಯದ ಆಲ್ಬಂ ತಯಾರಿಸಿರಿ.

➢ ಒಂದು ಘಟನೆಗೆ ಸಂಬಂಧಿಸಿದ ಒಂದೊಂದು ವಾಕ್ಯವನ್ನು ಒಂದೊಂದು ಪುಟದಲ್ಲಿ ಬರೆದು ಕ್ರಮವಾಗಿ ಜೋಡಿಸಿ ಕಿರುಪುಸ್ತಕ ತಯಾರಿಸಿರಿ.

## ಪೂರಕ ಓದು

➢ ದಾರ್ಶನಿಕರ ಜೀವನದ ಮಹತ್ವದ ಘಟನೆಗಳನ್ನು ಓದಿರಿ.

➢ ಅಪರೂಪದ ಸನ್ನಿವೇಶಗಳ ಕುರಿತಾದ ಮಾಹಿತಿಗಳನ್ನು ಓದಿರಿ.

➢ ವಿವಿಧ ಘಟನೆ ಹಾಗೂ ಅವುಗಳ ಪರಿಣಾಮಗಳನ್ನು ಓದಿ ತಿಳಿಯಿರಿ.

©KTBS Not to be republished

## ಶುಭ ನುಡಿ

➢ ಹಿರಿಯರ ಮಾತನ್ನು ಕೇಳು, ಶ್ರದ್ಧೆಯಿಂದ ಪಾಲಿಸು.

➢ ಕೆಲವು ಘಟನೆಗಳು ಜೀವನದ ದಿಕ್ಕನ್ನು ಬದಲಾಯಿಸುತ್ತವೆ.

➢ ಕಳೆದು ಹೋದುದರ ಬಗ್ಗೆ ಚಿಂತಿಸಬೇಡ, ಮುಂದಿನದನ್ನು ಯೋಚಿಸು.

* * * * *

# ೨. ಗಂಧರ್ವಸೇನ!

L1F6K7

– ಸಮಿತಿ ರಚನೆ

**ಪ್ರವೇಶ :** ಎಷ್ಟೋ ಸಂದರ್ಭಗಳಲ್ಲಿ ನಾವು ಮಾತನಾಡುವ ಶೈಲಿ, ದೇಹದ ಹಾವಭಾವಗಳು ನಿಜವಾಗಿ ನೀಡಬೇಕಾದ ಅರ್ಥಕ್ಕಿಂತ ಭಿನ್ನವಾದ ಅರ್ಥಗಳನ್ನು ಕೊಡುವುದಿದೆ. ಮಾತಿನ ಹಿನ್ನೆಲೆಯಲ್ಲಿರುವ ನಿಜವಾದ ಅರ್ಥವನ್ನು ಗ್ರಹಿಸಬೇಕಾದರೆ ಆ ಮಾತಿನ ಅಭಿವ್ಯಕ್ತಿಯಲ್ಲಿ ಸ್ಪಷ್ಟತೆ ಇರಬೇಕು. ಹಾಗಾದಾಗ ಮಾತ್ರವೇ ಭಾಷೆಯು ಸರಿಯಾದ ರೀತಿಯಲ್ಲಿ ಸಂವಹನಗೊಳ್ಳುವುದು.

ಇದೊಂದು ಜಾನಪದ ಮೂಲದಿಂದ ಆರಿಸಿಕೊಂಡು ರಚಿಸಲಾದ ಕತೆ.



ಒಂದು ದಿನ ಒಬ್ಬ ರಾಜ ಒಡ್ಡೋಲಗದಲ್ಲಿದ್ದಾಗ ಅವನ ಮಂತ್ರಿ ಗಟ್ಟಿಯಾಗಿ ಅಳುತ್ತಾ ಬಂದನು. ಅವನ ರೋದನಕ್ಕೆ ಕಾರಣವೇನೆಂದು ರಾಜ ಪ್ರಶ್ನಿಸಿದ. ಮಂತ್ರಿಯು ಸಿಂಹಾಸನವನ್ನು ಚುಂಬಿಸಿ, ಭೂಮಿಯನ್ನು ಮುಟ್ಟಿ ನಮಸ್ಕರಿಸಿ ತನ್ನ ನಾಲಗೆಯನ್ನು ಉದ್ದ ಮಾಡಿ – 'ಮಹಾರಾಜರೇ ಗಂಧರ್ವಸೇನರು ತೀರಿಕೊಂಡರಂತೆ' ಎಂದು ಉದ್ಗರಿಸುತ್ತಾ ಮೂರ್ಛೆ ಹೋದ. ರಾಜನು ಒಡ್ಡೋಲಗವನ್ನು ಅಲ್ಲಿಗೇ ಪರಿಸಮಾಪ್ತಿಗೊಳಿಸಿ ಕಣ್ಣೀರು ಸುರಿಸುತ್ತ ಗಂಧರ್ವಸೇನರ ಆತ್ಮಶಾಂತಿಗಾಗಿ ನಾಲ್ಕು ದಿನಗಳ ಕಾಲ ರಾಜ್ಯಾದ್ಯಂತ ಎಲ್ಲರೂ ಶೋಕಾಚರಣೆ ಮಾಡಬೇಕೆಂದು ಆಜ್ಞಾಪಿಸಿದ. ಮಂತ್ರಿಯ ಆರೈಕೆಗೆ ವೈದ್ಯರನ್ನು ಕರೆಸಿ ಉಪಚರಿಸುವಂತೆ ರಾಜಭಟರಿಗೆ ತಿಳಿಸಿ ಅಂತಃಪುರಕ್ಕೆ ಬಂದ. ರಾಜ, ಅಲ್ಲಿಯೂ ಕರುಳು

ಕಿತ್ತುಬರುವಂತೆ ಅಳತೊಡಗಿದ. ರಾಣಿಯರು ಅವನ ಶೋಕಕ್ಕೆ ಕಾರಣವನ್ನು ಕೇಳಿದರು. 'ಗಂಧರ್ವಸೇನರು ತೀರಿಕೊಂಡರು' ಎಂದು ರಾಜ ಗದ್ಗದ ಕಂಠದಿಂದ ಹೇಳಿದಾಗ, 'ರಾಜನ ದುಃಖ ತಮ್ಮ ದುಃಖ' ಎಂದು ಅವರು ಕೂಡ ಕರುಳು ಹಿಂಡುವಂತೆ ಎದೆ ಬಡಿದುಕೊಂಡು ಅಳಲಾರಂಭಿಸಿದರು. ಇಡೀ ಅಂತಃಪುರ ದುಃಖ ಹಾಗೂ ಗೊಂದಲದಿಂದ ತುಂಬಿತು.

ರಾಣಿಯ ಸೇವಕಿಯೊಬ್ಬಳಿಗೆ ಈ ಎಲ್ಲಾ ಗೊಂದಲ ಏಕೆಂದು ತಿಳಿಯಲಿಲ್ಲ. ಅವಳು, "ಮಹಾರಾಣಿಯವರೇ, ಎಲ್ಲರು ಏಕೆ ಅಳುತ್ತಿದ್ದಾರೆ?" ಎಂದು ಕೇಳಿದಳು. ರಾಣಿ ನಿಟ್ಟುಸಿರುಬಿಟ್ಟು,"ಪಾಪ! ಗಂಧರ್ವಸೇನರು ತೀರಿಕೊಂಡರಂತೆ" ಎಂದಳು. ಸೇವಕಿ ಚುರುಕು ಬುದ್ಧಿಯವಳು. ಅವಳು ಆಲೋಚನೆ ಮಾಡಿದಳು. ಈ ನಮ್ಮ ಮಹಾರಾಜರಿಗೂ ಆ ಗಂಧರ್ವಸೇನರಿಗೂ ಏನ್ ಸಂಬಂಧ? ಎಂದು ಆತಂಕದಿಂದ ರಾಣಿಯ ಬಳಿ ಕೇಳಿದಳು. ರಾಣಿ ಅದು ತನಗೆ ಗೊತ್ತಿಲ್ಲವೆಂದು ನುಡಿದು ರಾಜನ ಬಳಿಗೆ ಓಡಿಹೋಗಿ, "ಗಂಧರ್ವಸೇನರು ಯಾರು?" ಎಂದು ಕೇಳಿದಳು. ರಾಜನಿಗೂ ಗೊತ್ತಿಲ್ಲ. ಆತ ಕಣ್ ಕಣ್ ಬಿಟ್ಟು "ತಾನೆಂಥ ಮೂರ್ಖತನದ ಕೆಲಸ ಮಾಡಿದೆ" ಅಂದುಕೊಂಡು ಕೂಡಲೇ ಆಸ್ಥಾನಕ್ಕೆ ತೆರಳಿದ. ಈಗಾಗಲೆ ವೈದ್ಯರ ಉಪಚಾರದಿಂದ ಸುಧಾರಿಸಿಕೊಂಡಿದ್ದ ಮಂತ್ರಿಯನ್ನು ಕರೆಸಿಕೊಂಡು, "ಮಂತ್ರಿಗಳೇ, ಯಾರು ಈ ಗಂಧರ್ವಸೇನ?" ಎಂದು ಪ್ರಶ್ನಿಸಿದ. "ಮಹಾರಾಜರೆ ದಯವಿಟ್ಟು ಕ್ಷಮಿಸಿ. ಗಂಧರ್ವಸೇನರು ಯಾರೆಂಬುದು ನನಗೂ ತಿಳಿದಿಲ್ಲ. ಆದರೆ ಪಡೆಯ ಮುಖ್ಯಸ್ಥನು ಗಂಧರ್ವಸೇನ ತೀರಿಕೊಂಡರೆಂದು ಗಟ್ಟಿಯಾಗಿ ಗಂಟಲು ಹರಿಯುವಂತೆ ಕೂಗುತ್ತಾ ಅಳುತ್ತಿರುವುದನ್ನು ಕಂಡು ನಾನೂ ಅತ್ತೆ" ಎಂದು ಮಾರ್ನುಡಿದ. ರಾಜನ ಕೋಪ ನೆತ್ತಿಗೇರಿತು. "ನೀನೊಬ್ಬ ಮೂರ್ಖ. ಕೂಡಲೆ ಹೋಗಿ ಗಂಧರ್ವಸೇನ ಯಾರೆಂದು ಪತ್ತೆ ಮಾಡಿಕೊಂಡು ಬಾ" ಎಂದ. ಮಂತ್ರಿ ರಾಜನಿಗೆ ವಂದಿಸಿ, 'ಕೇಳಿದ ಕಿವಿ ಊರಿಗೆ ಮಾರಿ ತಂದಿತು' ಅಂದು-ಕೊಂಡು ಅಲ್ಲಿಂದ ಕಾಲಿಗೆ ಬುದ್ಧಿಹೇಳಿದ. ಪಡೆಯ ಮುಖ್ಯಸ್ಥನನ್ನು ಕಂಡು, "ಗಂಧರ್ವಸೇನರು ಯಾರು?" ಎಂದು ಪ್ರಶ್ನಿಸಿದ. "ಸ್ವಾಮಿ, ಅವರು ಯಾರು? ಏನಾಗಿದ್ದರು? ಎಂದು ನನಗೆ ತಿಳಿಯದು. ಆದರೆ ಅವರು ತೀರಿಕೊಂಡರೆಂದು ಸ್ವತಃ ನನ್ನ ಹೆಂಡತಿಯೇ ಅಳುತ್ತಿದ್ದಳು. ಈ ಸುದ್ದಿಯನ್ನು ನಿಮಗೆ ಹೇಳಬೇಕೆನಿಸಿತು. ಬಂದು ಹೇಳಿದೆ" ಎಂದನು.

ಮಂತ್ರಿ ತಲೆಯ ಮೇಲೆ ಕೈ ಹೊತ್ತು ಕುಳಿತ. ಇರಲಿ, ಇವನ ಹೆಂಡತಿಯನ್ನು ವಿಚಾರಿಸೋಣ ಎಂದು ಇಬ್ಬರೂ ಆತನ ಮನೆಗೆ ಹೋಗಿ, "ಯಾರಮ್ಮ ಈ ಗಂಧರ್ವಸೇನ?" ಎಂದು ಕೇಳಿದರು. ಅವಳು, "ಸ್ವಾಮೀ, ಗಂಧರ್ವಸೇನರ ಪರಿಚಯ ನನಗಿಲ್ಲ. ಈ ದಿವಸ ಬೆಳಿಗ್ಗೆ ಸ್ನಾನ ಮಾಡಲಿಕ್ಕೆ ಕೆರೆಗೆ ಹೋಗಿದ್ದೆ. ಅಲ್ಲಿ ಮಡಿವಾಳ್ತಿ ತನ್ನ ಗಂಧರ್ವ ಸೇನ ಸತ್ತಿದ್ದಾನೆಂದು ಬಾಯಿ ಬಡಿದುಕೊಂಡು ಒಂದೇ ಸಮನೆ ಅಳುತ್ತಿದ್ದಳು. ಅದನ್ನು ನೋಡಿ ನಾನೂ ಅತ್ತೆ, ಗಂಡನ ಬಳಿ ಹೇಳಿದೆ" ಎಂದಳು. ಮಂತ್ರಿಗೆ ತಲೆಸುತ್ತಿದಂತಾಯ್ತು. ಈ ಗಂಧರ್ವಸೇನ ಯಾರು? ತಲೆತಲೆ ಚಚ್ಚಿಕೊಂಡ. ಏನೇ ಆಗಲಿ ಎಂದುಕೊಂಡು

©KTBS Not to be republished

ಅವರೆಲ್ಲರೂ ಆ ಮಡಿವಾಳ್ತಿಯ ಮನೆಗೆ ಹೋಗಿ, "ಗಂಧರ್ವಸೇನ ಯಾರು?" ಎಂದು ಕೇಳಿದರು. ಅವಳು ದುಃಖಿಸತೊಡಗಿದಳು. "ಸ್ವಾಮಿ, ನನಗೆ ಅದೃಷ್ಟವಿಲ್ಲ. ಈಗಲೂ ನನ್ನ ಹೃದಯ ಅವನಿಗಾಗಿ ಮಿಡಿಯುತ್ತಿದೆ. ಗಂಧರ್ವಸೇನ ನನ್ನ ಪ್ರೀತಿಯ ಕತ್ತೆ. ನನ್ನ ಮಗನಿಗಿಂತಲೂ ಹೆಚ್ಚಾಗಿ ಅವನನ್ನು ಮುದ್ದಿನಿಂದ ಬೆಳೆಸಿದ್ದೆ. ನಮ್ಮ ಎಲ್ಲಾ ವ್ಯವಹಾರಗಳನ್ನೂ ನೋಡಿಕೊಳ್ಳುತ್ತಿದ್ದ ಸ್ವಾಮಿ, ನಿನ್ನೆ ರಾತ್ರಿ ಕಣ್ಣು ಮುಚ್ಚೊಂಬಿಟ್ಟ. ನನ್ನ ಹೊಟ್ಟೆ ಮೇಲೆ ಕಲ್‌ಹಾಕ್ ಬಿಟ್ಟ" ಎಂದು ಬೊಬ್ಬಿಟ್ಟು ಅತ್ತಳು. ಇದನ್ನು ಕೇಳಿದ ಮಂತ್ರಿ, ಮುಖ್ಯಸ್ಥ, ಅವನ ಹೆಂಡತಿ ಒಬ್ಬರ ಮುಖವನ್ನುಒಬ್ಬರು ನೋಡಿಕೊಂಡು ಅಲ್ಲಿಂದ ಕಂಬಿಕಿತ್ತರು.




ಮಂತ್ರಿ ಅರಮನೆಗೆ ಬಂದು ರಾಜನ ಕಾಲಿಗೆ ಬಿದ್ದು ನಿಜಾಂಶವನ್ನು ಹೇಳಿದ. "ಗಂಧರ್ವಸೇನರು ಸತ್ತರೆಂದು ನಾವೆಲ್ಲ ಶೋಕಿಸಿದೆವಲ್ಲಾ, ಅದು ಬೇರೆ ಯಾರು ಅಲ್ಲ; ಮಡಿವಾಳ್ತಿಯ ಪ್ರೀತಿಯ ಕತ್ತೆ" ಎಂದು ಹೇಳಿದ. ರಾಜ ಅವನಿಗೆ ಹಿಗ್ಗಾಮುಗ್ಗಾ ಬೈದನು. ಆದರೆ ಶಿಕ್ಷಿಸದೆ ಬಿಟ್ಟುಬಿಟ್ಟ. ಈ ಸುದ್ದಿ ಅಂತಃಪುರದ ರಾಣಿಯರ ಕಿವಿಗೂ ಮುಟ್ಟಿತು. 'ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು' ಎನ್ನುವಂತೆ ರಾಜ ಮತ್ತು ಅವನ ಆಸ್ಥಾನಿಕರ ಮೂರ್ಖತನಕ್ಕಾಗಿ ರಾಣಿಯರು ತಮ್ಮ ಪಕ್ಕೆಲುಬುಗಳು ನೋಯುವವರೆಗೂ ನಗುತ್ತಲೇ ಇದ್ದರು.

Not to be republished

**ಕ್ಷೇತ್ರ : ಓದುವುದು ಮತ್ತು ಬರೆಯುವುದು**
**ಸಾಮರ್ಥ್ಯ : ಪದಪುಂಜ, ನುಡಿಗಟ್ಟು ಮತ್ತು ನಾಣ್ಣುಡಿಗಳನ್ನು ಓದಿ ಅರ್ಥ ಮಾಡಿಕೊಳ್ಳುವುದು**

## ಪದಗಳ ಅರ್ಥ

ಒಡ್ಡೋಲಗ–ರಾಜಸಭೆ, ದರ್ಬಾರು. ರೋದನ–ಅಳುವಿಕೆ, ಪ್ರಲಾಪ. ಚುಂಬನ– ಮುತ್ತು. ಉದ್ಗರಿಸು–ಹೇಳು, ಹೊರಗೆಡಹು. ಪರಿಸಮಾಪ್ತಿ–ಮುಕ್ತಾಯ, ಕೊನೆ. ಶೋಕ–ಅಳಲು, ದುಃಖ. ಗದ್ಗದ ಕಂಠ–ನಿಂತು ನಿಂತು ಬರುವ ಅಸ್ಪಷ್ಟವಾದ ಮಾತು, ಬಿಗಿದ ಕಂಠ. ಅಂತಃಪುರ–ರಾಣಿವಾಸ. ನಿಟ್ಟುಸಿರು–ದೀರ್ಘವಾಗಿ ಬಿಡುವ ಉಸಿರು, ನಿಡಿದಾದ ಶ್ವಾಸ. ಬಡಪಾಯಿ–ಅಶಕ್ತ, ದುರ್ಬಲ, (ದರಿದ್ರ). ತೀರಿಕೊಳ್ಳು–ಗತಿಸು, ಮರಣ ಹೊಂದು. ಮಾರ್ನುಡಿ–ಪ್ರತಿಯಾಗಿ ಮಾತನಾಡು, ಮಾರುತ್ತರ ಕೊಡು. ಪತ್ತೆ–ಗುರುತು, ಸುಳಿವು, ವಿಳಾಸ. ಬೊಬ್ಬಿಡು–ಕೂಗು, ಅರಚು, ಗಟ್ಟಿಯಾಗಿ ಹೇಳು. ನಿಜಾಂಶ–ಸತ್ಯ, ದಿಟ. ಪಕ್ಕೆಲುಬು– ಇಬ್ಬದಿಯ ಎಲುಬುಗಳು.

**ವಿವರ ತಿಳಿಯಿರಿ:**

**ಶೋಕಾಚರಣೆ :** ಸತ್ತವರಿಗಾಗಿ ಸಂತಾಪ ಸೂಚಿಸುವುದು.

**ನಾಲಗೆಯನ್ನು ಉದ್ದ ಮಾಡಿ ಹೇಳು :** ಒಂದು ವಿಷಯದ ಬಗ್ಗೆ ತನಗೆ ಪೂರ್ಣ ಗೊತ್ತಿದೆ ಎಂದು ಅಂದುಕೊಳ್ಳುತ್ತಾ ನಂಬಿಸಿ ಹೇಳುವುದು, ಅತಿಯಾಗಿ ಮಾತನಾಡುವುದು.

**ಕರುಳು ಕಿತ್ತುಬರುವಂತೆ ಅಳು :** ತನಗಾದ ದುಃಖವನ್ನು ತೋರ್ಪಡಿಸಿಕೊಳ್ಳಲು ಅಳುವ ಒಂದು ರೀತಿ, ಅತೀವವಾದ ಅಳು.

**ಗಂಟಲು ಹರಿಯುವಂತೆ ಕೂಗು :** ಬೊಬ್ಬೆಹಾಕಿ ಹೇಳು, ಜೋರಾಗಿ ಬೊಬ್ಬಿಡು.

**ಕಾಲಿಗೆ ಬುದ್ಧಿ ಹೇಳು :** ಹೇಳದೆ ಕೇಳದೆ ಓಡಿ ಹೋಗು, ಪಲಾಯನ ಮಾಡು.

© KTBS Not to be republished

## ಅಭ್ಯಾಸಗಳು

**ಅ. ಸರಿಯಾದ ಪದಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳ ತುಂಬಿರಿ.**

೧. ರಾಜನು ______________ವನ್ನು ಅಲ್ಲಿಗೇ ಪರಿಸಮಾಪ್ತಿಗೊಳಿಸಿದ. (ಒಡ್ಡೋಲಗ, ಬಡ್ಡೋಲಗ, ಓಡ್ಡೋಲಗ)

೨. ಸೇವಕಿ __________ಬುದ್ಧಿಯವಳು. (ಮುರುಕು, ತಳುಕು, ಚುರುಕು)

೩. ಮಂತ್ರಿ ಅರಮನೆಗೆ ಬಂದು ರಾಜನ ಕಾಲಿಗೆ ಬಿದ್ದು ___________ಹೇಳಿದ. (ನಿಜಾಂಶ, ಸತ್ಯಾಂಶ, ಮಿಥ್ಯಾಂಶ)

೪. ರಾಜನಿಗೆ ಗಂಧರ್ವಸೇನ ತೀರಿದ ವಿಷಯ ತಿಳಿಸಿದ್ದು ________________ (ಮಂತ್ರಿ, ರಾಣಿ, ಸೇವಕಿ)

೫. ಅಂತಃಪುರ ಇದರ ಅರ್ಥ__________ (ರಾಣಿವಾಸ, ಸೇವಕಿಯರ ವಾಸ, ರಾಜಗೃಹ)

## ಆ. ಈ ಪದಗಳ ಅರ್ಥ ಬರೆಯಿರಿ.

೧. ನಿಟ್ಟುಸಿರು  ೨. ಪರಿಸಮಾಪ್ತಿ  ೩. ಮಾರ್ನುಡಿ  ೪. ಉದ್ಗರಿಸು

## ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧. ಮಂತ್ರಿ ಅಳುತ್ತಾ ರಾಜನ ಬಳಿ ಏನೆಂದು ಹೇಳಿದ?

೨. ಗಂಧರ್ವಸೇನ ಯಾರು?

೩. ಗಂಧರ್ವಸೇನ ತೀರಿಕೊಂಡ ವಿಷಯವನ್ನು ರಾಜ ಯಾರಿಗೆ ಹೇಳಿದ?

೪. ರಾಣಿಯ ಸೇವಕಿ ಏನೆಂದು ಆಲೋಚನೆ ಮಾಡಿದಳು?

೫. ರಾಣಿಯರು ನಗಲು ಕಾರಣವೇನು?

## ಈ. ಕೆಳಗಿನ ಪ್ರಶ್ನೆಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ರಾಜನ ಒಡ್ಡೋಲಗದಲ್ಲಿ ನಡೆದ ಪ್ರಸಂಗವನ್ನು ವಿವರಿಸಿರಿ.

೨. ಗಂಧರ್ವಸೇನ ಯಾರು ಎಂಬುದನ್ನು ತಿಳಿಯಲು ಮಂತ್ರಿಯು ಮಾಡಿದ ಪ್ರಯತ್ನಗಳೇನು?

## ಉ. ಸಂದರ್ಭ ಸಹಿತ ವಿವರಿಸಿರಿ.

೧. "ರಾಜ ಅಲ್ಲಿಯೂ ಕರುಳು ಕಿತ್ತು ಬರುವಂತೆ ಅಳತೊಡಗಿದ."

೨. "ಸ್ವಾಮಿ, ಅವರು ಯಾರು? ಏನಾಗಿದ್ದರು? ಎಂದು ನನಗೆ ತಿಳಿಯದು."

೩. "ನಿನ್ನೆ ರಾತ್ರಿ ಕಣ್ಣು ಮುಚ್ಕೊಂಬಿಟ್ಟ."

೪. "ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು."

## ಊ. ಕೆಳಗಿನವುಗಳನ್ನು ನುಡಿಗಟ್ಟು, ಗಾದೆ, ಒಗಟುಗಳಾಗಿ ವಿಂಗಡಿಸಿ ಬರೆಯಿರಿ.

೧. ಮೂಗು ತೂರಿಸು, ೨. ಕೇಳಿದ ಕಿವಿ ಊರಿಗೆ ಮಾರಿ ತಂದಿತು, ೩. ಕಾಲಿಗೆ ಬುದ್ಧಿಹೇಳು, ೪. ದಾಸ್ ಬುರುಡೆ ದೌಲತ್ ಬುರುಡೆ ಲೋಕಕ್ಕೆಲ್ಲ ಎರಡೆ ಬುರುಡೆ, ೫. ಬೆನ್ನಿಗೆ ಚೂರಿ ಹಾಕು, ೬. ಒಂದು ಕುರಿ ಹಳ್ಳಕ್ಕೆ ಬಿದ್ದರೆ ಎಲ್ಲಾ ಬಿದ್ದವು, ೭. ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ, ೮. ತಲೆ ಹಾಕು, ೯. ಮುಚ್ಚಿಟ್ಟದ್ದು ಮಣ್ಣಿನ ಪಾಲು, ೧೦. ಕರುಳು ಹಿಂಡು, ೧೧. ಮಂಕು ಬೂದಿ, ೧೨. ಚಿಕ್ಕ ತೋಟ ಚೂರು ಕಸ ಬಿದ್ದರೆ ಹಾಳು.

## ವ್ಯಾಕರಣ ಮಾಹಿತಿ

ನಾವು ಹಿಂದಿನ ತರಗತಿಯಲ್ಲಿ ಕೆಲವು ವ್ಯಾಕರಣಾಂಶಗಳನ್ನು ತಿಳಿದುಕೊಂಡಿದ್ದೆವು. ಅವುಗಳನ್ನು ನೆನಪು ಮಾಡಿಕೊಳ್ಳೋಣ.

**ವಚನಗಳು :** ಒಂದು ಎಂಬುದನ್ನು ಸೂಚಿಸುವ ಶಬ್ದಗಳೆಲ್ಲ **ಏಕವಚನಗಳು.** ಒಂದಕ್ಕಿಂತ ಹೆಚ್ಚು ಎಂಬುದನ್ನು ಸೂಚಿಸುವ ಶಬ್ದಗಳಿಗೆ **ಬಹುವಚನ** ಎನ್ನುತ್ತೇವೆ. ಕನ್ನಡ ಭಾಷೆಯಲ್ಲಿ ಏಕವಚನ, ಬಹುವಚನಗಳೆಂದು ಎರಡು ಪ್ರಕಾರಗಳಿವೆ.

©KTBS Not to be republished

| ಏಕವಚನ | ಬಹುವಚನ |
|---|---|
| ಅರಸ | ಅರಸರು |
| ನೀನು | ನೀವು |
| ಮರ | ಮರಗಳು |
| ಮಗು | ಮಕ್ಕಳು |

## ಲಿಂಗಗಳು :

**ಕನ್ನಡ ಭಾಷೆಯಲ್ಲಿ ಮುಖ್ಯವಾಗಿ ಮೂರು ಪ್ರಕಾರದ ಲಿಂಗಗಳಿವೆ.**

೧. ಪುಲ್ಲಿಂಗ ೨. ಸ್ತ್ರೀಲಿಂಗ ೩. ನಪುಂಸಕ ಲಿಂಗ.

- **ಪುಲ್ಲಿಂಗ :–** ಯಾವ ಶಬ್ದ ಪ್ರಯೋಗ ಮಾಡಿದಾಗ 'ಗಂಡಸು' ಎಂಬರ್ಥವು ಮನಸ್ಸಿಗೆ ಹೊಳೆಯುವುದೋ ಅದು 'ಪುಲ್ಲಿಂಗ'ವೆನಿಸುವುದು.

  **ಉದಾ :–** ಮುದುಕ, ಚಿಕ್ಕಪ್ಪ, ಶಂಕರ, ಅರಸು, ಅಣ್ಣ ಮುಂತಾದವು.

- **ಸ್ತ್ರೀಲಿಂಗ :–** ನಮ್ಮ ಭಾವನೆಗೆ 'ಹೆಂಗಸು' ಎಂಬ ಅರ್ಥವು ಹೊಳೆದರೆ ಅದು 'ಸ್ತ್ರೀ' ಲಿಂಗವೆನಿಸುವುದು.

  **ಉದಾ :–** ಮುದುಕಿ, ಚಿಕ್ಕಮ್ಮ, ಸರೋಜ, ರಾಣಿ ಮುಂತಾದವು.

- **ನಪುಂಸಕ ಲಿಂಗ :–** ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ ಹೆಂಗಸು, ಗಂಡಸು ಎರಡೂ ಅಲ್ಲದ ಅರ್ಥವು ಮನಸ್ಸಿಗೆ ಹೊಳೆಯುವುದೋ ಅದು ನಪುಂಸಕ ಲಿಂಗ ಎನಿಸುವುದು.

  **ಉದಾ :–** ಮನೆ, ನೆಲ, ಬೆಂಕಿ, ಗದ್ದೆ, ತೋಟ, ಮಗು, ನವಿಲು, ಕೋಳಿ, ನಾಯಿ ಮುಂತಾದವು.

- **ನಾಮಪದಗಳು**

**ವಸ್ತುವಾಚಕ ನಾಮಪದಗಳಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ.**

೧. ರೂಢನಾಮ ೨. ಅಂಕಿತನಾಮ ೩. ಅನ್ವರ್ಥನಾಮ

- **ರೂಢನಾಮ :–** ರೂಢಿಯಿಂದ ಬಂದ ಸಾಮಾನ್ಯ ವಾಚಕಗಳನ್ನು ರೂಢನಾಮ ಎನ್ನುವರು.
  **ಉದಾ:–** ನದಿ, ಪರ್ವತ, ಮನುಷ್ಯ, ದೇಶ, ಹುಡುಗಿ, ಶಾಲೆ, ಮನೆ, ರಾಜ–ಮುಂತಾದವು.

©KTBS Not to be republished

- **ಅಂಕಿತನಾಮ:–** ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡ ಹೆಸರಗಳೆಲ್ಲ ಅಂಕಿತನಾಮಗಳು.

**ಉದಾ:–** ಬ್ರಹ್ಮಪುತ್ರ, ಬೆಂಗಳೂರು, ಹೊನ್ನವಳ್ಳಿ, ಕಾವೇರಿ, ಹಿಮಾಲಯ, ಜೋಸೆಫ್, ಬೋರಣ್ಣ ಮುಂತಾದವು.

- **ಅನ್ವರ್ಥನಾಮ :–** ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲ ಅನ್ವರ್ಥನಾಮಗಳು **ಉದಾ:–** ವ್ಯಾಪಾರಿ, ರೋಗಿ, ಸನ್ಯಾಸಿ, ವೈದ್ಯ, ಶಿಕ್ಷಕಿ, ಪಂಡಿತ ಮುಂತಾದವು.

## ವಿಭಕ್ತಿ ಪ್ರತ್ಯಯ:

ಸ್ವತಂತ್ರವಾದ ಅರ್ಥವಿಲ್ಲದೆ ನಾಮಪ್ರಕೃತಿಗಳ ಮುಂದೆ ಸೇರಿ ಬೇರೆ ಬೇರೆ ಅರ್ಥವನ್ನುಂಟು ಮಾಡುವ 'ಉ', 'ಅನ್ನು', 'ಇಂದ', 'ಗೆ', 'ಕ್ಕೆ', 'ದೆಸೆಯಿಂದ', 'ಅ', 'ಅಲ್ಲಿ' ಗಳಿಗೆ ವಿಭಕ್ತಿ ಪ್ರತ್ಯಯಗಳೆನ್ನುವರು.

| | ವಿಭಕ್ತಿ | ವಿಭಕ್ತಿ ಪ್ರತ್ಯಯ | ನಾಮಪದಗಳಿಗೆ ವಿಭಕ್ತಿ ಪ್ರತ್ಯಯ ಸೇರಿಸಿದಾಗ |
|---|---|---|---|
| ೧. | ಪ್ರಥಮಾ | ಉ | ಗೌರಿಯು |
| ೨. | ದ್ವಿತೀಯಾ | ಅನ್ನು | ಗೌರಿಯನ್ನು |
| ೩. | ತೃತೀಯಾ | ಇಂದ | ಗೌರಿಯಿಂದ |
| ೪. | ಚತುರ್ಥೀ | ಗೆ, ಇಗೆ, ಕ್ಕೆ. | ಗೌರಿಗೆ |
| ೫. | ಪಂಚಮೀ | ದೆಸೆಯಿಂದ | ಗೌರಿಯ ದೆಸೆಯಿಂದ |
| ೬. | ಷಷ್ಠೀ | ಅ | ಗೌರಿಯ |
| ೭. | ಸಪ್ತಮೀ | ಅಲ್ಲಿ | ಗೌರಿಯಲ್ಲಿ |

©KTBS Not to be republished

## ಭಾಷಾ ಆಟಗಳು

**ಗುಂಪು ಆಟ:–** ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡಿ 'ಸವಾಲ್–ಜವಾಬ್' ಆಟ ಆಡಿಸುವುದು. ಮೊದಲನೆಯ ಗುಂಪು ಒಂದು ಒಗಟು ಹೇಳಿದರೆ ಎರಡನೆಯ ಗುಂಪು ಅದಕ್ಕೆ ಉತ್ತರವನ್ನು ಹೇಳಬೇಕು. (ಉತ್ತರಿಸಲು ಮೂರು ಅವಕಾಶವಿರುವುದು) ಉತ್ತರ ಹೇಳಿದರೆ ಹೇಳಿದ ಗುಂಪಿಗೆ ಅಂಕ. ಹೇಳದೆ ಇದ್ದಲ್ಲಿ ಒಗಟು ಕೇಳಿದ ಗುಂಪಿಗೆ ಅದರ ಎರಡರಷ್ಟು ಅಂಕ ಪ್ರಾಪ್ತಿಯಾಗುವುದು. ಈ ಪ್ರಕಾರ ಐದರಿಂದ ಹತ್ತು ಸುತ್ತುಗಳಲ್ಲಿ ಆಟ ಮುಂದುವರಿಸುವುದು. ಹೆಚ್ಚು ಅಂಕ ಗಳಿಸಿದವರು 'ವಿಜಯಶಾಲಿ ಗುಂಪು'ಎಂದು ಘೋಷಿಸಿ ಪ್ರೋತ್ಸಾಹಿಸುವುದು.

### ಯೋಜನೆ

- ನೀವು ಕೇಳಿರುವ ಹಾಗೂ ಪತ್ರಿಕೆ, ಪುಸ್ತಕಗಳಲ್ಲಿ ಓದಿರುವ ಗಾದೆ, ಒಗಟು, ನುಡಿಗಟ್ಟುಗಳನ್ನು ಸಂಗ್ರಹಿಸಿ ಬರೆದು ಒಂದು ಆಲ್ಬಂ ತಯಾರಿಸಿ ಶಾಲಾ ಕಾರ್ಯಕ್ರಮದಲ್ಲಿ ಅದನ್ನು ಪ್ರದರ್ಶಿಸಿರಿ. ಅನಂತರ ಅದನ್ನು ಶಾಲಾ ಗ್ರಂಥಾಲಯಕ್ಕೆ ಸೇರಿಸಿರಿ.

### ಪೂರಕ ಓದು

೧. ಜನಪದದ ಕಥೆಗಳನ್ನು ಓದಿ ಅರ್ಥೈಸಿಕೊಳ್ಳಿರಿ.
೨. ನುಡಿಗಟ್ಟು, ಪದಪುಂಜಗಳನ್ನು ಸಂಗ್ರಹಿಸಿ, ಅವುಗಳ ಅರ್ಥ ತಿಳಿಯಿರಿ.
೩. ಎಚ್.ಎಲ್.ನಾಗೇಗೌಡ, ಎ.ಕೆ.ರಾಮಾನುಜನ್‌ರವರು ಸಂಗ್ರಹಿಸಿರುವ ಜನಪದಗಳ ಕಥೆ, ಗೀತೆಗಳನ್ನು ಓದಿರಿ.

©KTBS Not to be republished

### ಶುಭ ನುಡಿ

- ಯಾವುದೇ ನಿರ್ಣಯ ಕೈಗೊಳ್ಳುವ ಮೊದಲು ತುಂಬಾ ಯೋಚಿಸಿರಿ.
- ಹಳ್ಳಿ ಜೀವನವನ್ನು ಪ್ರೀತಿಸಿರಿ.
- ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು.

* * * * *

# ೩. ಕೃಷ್ಣ – ಸುಧಾಮ (ನಾಟಕ)

E9W8H5

– ವಿ.ಎಸ್ ಶಿರಹಟ್ಟಿ ಮಠ

**ಪ್ರವೇಶ :** ಗೆಳೆತನವೆಂಬುದು ಪವಿತ್ರವಾದ ಒಂದು ಸಂಬಂಧ. ಇಲ್ಲಿ ಬಡತನ, ಸಿರಿತನ, ವಿದ್ಯಾವಂತ, ಅವಿದ್ಯಾವಂತ ಇತ್ಯಾದಿಯಾದ ಯಾವುದೇ ಬಗೆಯ ಭೇದ ಭಾವ ಇರುವುದಿಲ್ಲ. ಹುಟ್ಟುತ್ತಾ ಅಣ್ಣ ತಮ್ಮಂದಿರಾಗಿಯೂ ಬೆಳೆಯುತ್ತಾ ದಾಯಾದಿಗಳಾಗಿಯೂ ಬದುಕು ಸಾಗಿಸುವವರು ನಮ್ಮ ನಡುವೆ ಇದ್ದಾರೆ. ಒಂದೇ ತರಗತಿಯಲ್ಲಿ ಕಲಿತ ಬಾಲ್ಯ ಸ್ನೇಹಿತರೂ ಸಿರಿತನ, ಬಡತನ ನಿಮಿತ್ತವಾಗಿ ಬೇರ್ಪಡುತ್ತಾರೆ. ನಿಜವಾದ ಗೆಳೆತನದ ಬೆಸುಗೆ ಮುರಿದು ಹೋಗುವಂಥದ್ದಲ್ಲ ಎಂಬುದನ್ನು ಎತ್ತಿ ತೋರಿಸುವುದು ಪ್ರಸ್ತುತ ಪಾಠದ ಆಶಯವಾಗಿದೆ.

## ದೃಶ್ಯ–೧

[ಸುಧಾಮನ ಗುಡಿಸಲು, ರಾತ್ರಿಯ ಸಮಯ. ಸುಧಾಮ ಯೋಚಿಸುತ್ತಾ ಶತಪತಿಸುತ್ತಿದ್ದಾನೆ. ಆತನ ಮುಖದಲ್ಲಿ ನಿರಾಸೆ ತುಂಬಿದೆ.]

©KTBS Not to be republished



**ಸುಧಾಮ :** (ಸ್ವಗತ) ಜೀವನದಲ್ಲಿ ಬರೀ ಕಷ್ಟಗಳೇ ಬರುತ್ತಿವೆಯಲ್ಲ! ಸುಖದ ದಿನಗಳು ಯಾವಾಗ ಬರುತ್ತವೋ? ಹಾ! (ನಿಟ್ಟುಸಿರುಬಿಟ್ಟು) ಅದೆಲ್ಲಾ ಆ ದೇವರಿಗೇ ಗೊತ್ತು!

**ಹೆಂಡತಿ :** ಬಡತನ ನಮ್ಮ ಬೆನ್ನು ಹತ್ತಿದೆ. ಅದು ನಮ್ಮನ್ನು ಬಿಟ್ಟು ಹೋಗುವುದಿಲ್ಲ.

**ಸುಧಾಮ** : 'ಬಡತನ ನಮಗಿರಲಿ, ಮನೆ ತುಂಬ ಮಕ್ಕಳಿರಲಿ' ಎಂದು ದೇವರಲ್ಲಿ ನೀ ಬೇಡಿಕೊಂಡೆಯೋ ಹೇಗೆ ?

**ಹೆಂಡತಿ** : ಮಕ್ಕಳಿರಲಿ ಅಂದಿದ್ದು ನಿಜ. ಆದ್ರೆ.............

**ಮಗಳು** : (ಮಕ್ಕಳ ಪ್ರವೇಶ) ಅಮ್ಮಾ .... ಅಮ್ಮಾ ..... ಹಸಿವಾಗ್ತಿದೆ.

**ಮಗ** : ನನಗೂ ಹಸಿವು, ಊಟ ಕೊಡಮ್ಮ.

**ಹೆಂಡತಿ** : ನೋಡಿದ್ರಾ, ಮಕ್ಕಳೆಲ್ಲಾ ಹಸಿವಿನಿಂದ ಕಂಗಾಲಾಗಿವೆ. ಪಾಂಡಿತ್ಯವುಳ್ಳ ನನ್ನ ಗಂಡ ದುಡಿದು ತರ್ತಾರೇಂತ ತಿಳಿದಿದ್ದೆ.

**ಸುಧಾಮ** : ಯಾವುದಕ್ಕೂ ಕಾಲ ಕೂಡಿ ಬರಬೇಕಲ್ಲ.

**ಹೆಂಡತಿ** : ಅಂತೂ ಇಂತೂ ನಮಗೆ ಬಡತನವೇ ಗತಿ.

**ಸುಧಾಮ** : ಚಿಂತೆ ಮಾಡಿದರೆ ಏನು ಬಂತು? ಜೀವನದಲ್ಲಿ ಬಂದದ್ದನ್ನು ಅನುಭವಿಸಲೇ ಬೇಕು. ಅದೇ ಮಾನವ ಧರ್ಮ.

**ಹೆಂಡತಿ** : ನೀವು ನೀತಿ ಹೇಳುವುದರಲ್ಲಿ ಬಹಳ ಮುಂದು.

**ಸುಧಾಮ** : ನೀತಿ, ನಿಯಮ, ವಿಧೇಯತೆ, ಪಾಂಡಿತ್ಯ ಇದ್ದುದರಿಂದಲೇ ಗುರುಕುಲದಲ್ಲಿ ಶ್ರೀಕೃಷ್ಣ ನನ್ನ ಸ್ನೇಹಿತನಾದದ್ದು.

**ಹೆಂಡತಿ** : ಮಾತುಮಾತಿಗೂ "ಶ್ರೀಕೃಷ್ಣ ನನ್ನ ಸ್ನೇಹಿತನಾಗಿದ್ದ" ಅಂತೀರಿ.

**ಸುಧಾಮ** : ಹೂಂ! ನಿಜಕ್ಕೂ ಆತ ನನ್ನ ಪರಮ ಮಿತ್ರನಾಗಿದ್ದ. ಗುರುಕುಲದಲ್ಲಿ ಒಟ್ಟಿಗೆ ವಿದ್ಯಾಭ್ಯಾಸ ಮಾಡಿದೆವು.

**ಹೆಂಡತಿ** : ಸತ್ಯ ಹೇಳುವಿರಾ! ಆ ಶ್ರೀಮಂತರೆಲ್ಲಿ, ನೀವೆಲ್ಲಿ? ಯಾಕೆ ಸುಮ್ಮನೆ ಬಡಾಯಿ ಬಿಡ್ತೀರಾ?

**ಸುಧಾಮ** : ಯಾಕೆ ಸುಳ್ಳು ಹೇಳಲಿ ನಾನು, ಕೃಷ್ಣ ಸದಾ ನನ್ನ ಜೊತೆಯಲ್ಲಿಯೇ ಇರುತ್ತಿದ್ದ. ಒಟ್ಟಿಗೆ ಕಲಿಯುತ್ತಿದ್ದೆವು. ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಸ್ನೇಹ, ಗೌರವ.

**ಹೆಂಡತಿ** : ಅಂತಹ ಶ್ರೀಮಂತ ಸ್ನೇಹಿತನಿದ್ದರೂ ಇಲ್ಲಿಯವರೆಗೆ ನೀವು ಏಕೆ ಅವರ ಹತ್ತಿರ ಸಹಾಯ ಕೇಳಲಿಲ್ಲ?

**ಸುಧಾಮ** : (ಕ್ಷಣ ಹೊತ್ತು ಮೌನ) ಬಡವನಾದವ ದೊಡ್ಡವರ ಮನೆಗೆ ಸಹಾಯ ಕೇಳಲು ಹೋಗಬಾರದು.

**ಹೆಂಡತಿ** : ಸ್ನೇಹಿತರೆದುರು ಎಂಥ ಸ್ವಾಭಿಮಾನ ! ದಯವಿಟ್ಟು ಹೋಗಿ ಅವರಲ್ಲಿ ಸಹಾಯ ಕೇಳಿ.

**ಸುಧಾಮ** : ಹೇಗೆ ಕೇಳುವುದು?

©KTBS Not to be republished

ಹೆಂಡತಿ : ಆತ್ಮೀಯ ಗೆಳೆಯ ಅನ್ನುತ್ತೀರಿ, ಅಂದ ಮೇಲೆ ಅವರು ಸಹಾಯ ಮಾಡೇ ಮಾಡುತ್ತಾರೆ.

ಸುಧಾಮ : ಇಲ್ಲ ಅನ್ನಲಾರ, ಆದರೂ ಕೇಳುವುದಕ್ಕೆ ಸಂಕೋಚ.

ಹೆಂಡತಿ : ಸಂಕೋಚ ಬೇಡಾರೀ, ಹಸಿದಿರುವ ಮಕ್ಕಳಿಗೋಸ್ಕರವಾದರೂ ಹೋಗಿ ಕೇಳಿ.

ಸುಧಾಮ : ಆಗಲಿ, ಹೋಗುತ್ತೇನೆ. ಆದರೆ ಗೆಳೆಯನನ್ನು ನೋಡಲು ಬರಿಗೈಯಲ್ಲಿ ಹೋಗಲಾ?

ಹೆಂಡತಿ : ನಿನ್ನೆ ತಂದ ಅವಲಕ್ಕಿಯಲ್ಲಿ ಸ್ವಲ್ಪವೇ ಉಳಿದಿದೆ. ಮಕ್ಕಳ ಉಪಾಹಾರಕ್ಕೆ ಏನೇನೂ ಸಾಲದು. ಅದನ್ನೇ ಕಟ್ಟಿಕೊಡಲೆ?

ಮಗ : ಹಸಿವು, ಅದನ್ನಾದರೂ ನನಗೆ ಕೊಡಮ್ಮ.

ಹೆಂಡತಿ : ತುಸು ತಡೆದುಕೋ ಕಂದಾ, ದೇವರ ದಯೆಯಿದ್ದರೆ ಈ ಅವಲಕ್ಕಿಯೇ ಬಂಗಾರವಾದೀತು (ಗಂಡನಿಗೆ) ಕಟ್ಟಿಕೊಡಲೆ?

ಸುಧಾಮ : ಸರಿ, ಹಾಗೆ ಮಾಡು.

## ದೃಶ್ಯ –೨

[ಕೃಷ್ಣನ ಅರಮನೆ– ಕಾವಲುಗಾರ ಸುಧಾಮನನ್ನು ಅರಮನೆಯೊಳಕ್ಕೆ ಬಿಡದೆ ಬಾಗಿಲಲ್ಲೇ ನಿಲ್ಲಿಸುವನು. ಕೃಷ್ಣ ಆಕಸ್ಮಿಕವಾಗಿ ಹೊರಗೆ ಬರುವನು. ಸುಧಾಮನನ್ನು ನೋಡುವನು.]

©KTBS Not to be republished

ಕೃಷ್ಣ : (ಆಶ್ಚರ್ಯದಿಂದ) ಓಹೋ ಸುಧಾಮ! ಯಾವಾಗ ಬಂದೆ? ಬಾ ಒಳಗೆ (ಸುಧಾಮನ ಕೈ ಹಿಡಿಯುವನು. ಕಾವಲುಗಾರ ಆಶ್ಚರ್ಯದಿಂದ ದೂರ ಸರಿಯುವನು.)

ಸುಧಾಮ : ಶ್ರೀಕೃಷ್ಣ ಮಹಾರಾಜರು! (ಅತೀವ ಸಂತೋಷದಿಂದ ಆನಂದಬಾಷ್ಪ ಸುರಿಯುತ್ತದೆ. ಮಾತೇ ಹೊರಡದಂತಾಗಿದೆ.)

ಕೃಷ್ಣ : ಏಕೆ ಸುಧಾಮ ಕಣ್ಣಲ್ಲಿ ನೀರು?

ಸುಧಾಮ : ಬಹಳ ದಿನಗಳ ಅನಂತರ ನಿಮ್ಮನ್ನು ನೋಡುತ್ತಿರುವೆನಲ್ಲ! ಅದಕ್ಕಾಗಿ ಆನಂದದ ಕಣ್ಣೀರು.

ಕೃಷ್ಣ : ದೂರದಿಂದ ದಣಿದು ಬಂದಿದ್ದೀಯ. ಸ್ನಾನ ಮುಗಿಸಿ ಊಟ ಮಾಡಿ ವಿಶ್ರಾಂತಿ ತೆಗೆದುಕೋ. ಅಷ್ಟುಬೇಗ ನಿನ್ನನ್ನು ಹೋಗಗೊಡುವುದಿಲ್ಲ.

ಸುಧಾಮ : ಅಯ್ಯೋ, ಅಲ್ಲಿ ಮನೆಯಲ್ಲಿ ಯಾರೂ ಇಲ್ಲ. ಮಕ್ಕಳಿಗೆ........

ಕೃಷ್ಣ : ಸುಮ್ಮನಿರು, ಬಂದ ತಕ್ಷಣ ಹೋಗಬೇಕಿದ್ದರೆ ಯಾಕೆ ಬಂದೆ? ಯಾರಲ್ಲಿ? ಸುಧಾಮನಿಗೆ ವಿಶ್ರಾಂತಿಯ ವ್ಯವಸ್ಥೆ ಮಾಡಿ. (ಸುಧಾಮನಿಗೆ) ನನಗೂ ತುರ್ತು ಕೆಲಸವಿದೆ. ಅದು ಮುಗಿದ ತಕ್ಷಣ ಬಂದು ಬಿಡುವೆ.

# ದೃಶ್ಯ–೩

**( ಕೃಷ್ಣನ ಅರಮನೆ– ಸುಧಾಮನಿರುವ ಕೋಣೆ. ತೆರೆ ಸರಿದಾಗ)**

**ಸುಧಾಮ** : (ಸ್ವಗತ) ಶ್ರೀಕೃಷ್ಣನಂತಹ ಮಿತ್ರನನ್ನು ಪಡೆದ ನಾನೇ ಧನ್ಯನು, ನನ್ನನ್ನು ಮರೆತಿಲ್ಲ. ನಾನು ತಂದ ಅವಲಕ್ಕಿಯನ್ನು ತಾನೂ ತಿಂದು ಹೆಂಡತಿಗೂ ಪ್ರೀತಿಯಿಂದ ತಿನ್ನಿಸಿದ. ಇಷ್ಟೊಂದು ಪ್ರೀತಿ ವಿಶ್ವಾಸವಿರುವ ಕೃಷ್ಣನ ಹತ್ತಿರ ನನ್ನ ಬಡತನ ಹೇಳಿ ಆತನ ಮನಸ್ಸಿಗೆ ಬೇಸರವುಂಟುಮಾಡಬಾರದು. ನನ್ನ ಬಡತನ ನನಗಿರಲಿ.

**ಕೃಷ್ಣ** : (ಹಿಂದಿನಿಂದ ಬರುತ್ತ) ಏನು ಯೋಚಿಸುತ್ತಿರುವೆ ಸುಧಾಮ?

**ಸುಧಾಮ** : ಏನಿಲ್ಲ ಕೃಷ್ಣ ..... ಏನಿಲ್ಲ, ಸುಮ್ಮನೆ.

**ಕೃಷ್ಣ** : ನೀ ಬಂದು ನನ್ನ ಮನಸ್ಸಿಗೆ ತುಂಬಾ ಸಂತೋಷವನ್ನುಂಟುಮಾಡಿದೆ. ನನಗೆ ಗುರುಕುಲದ ಜೀವನ ನೆನಪಾಗುತ್ತಿದೆ.

**ಸುಧಾಮ** : ಒಟ್ಟಿಗೆ ಊಟ ಮಾಡುತ್ತಿದ್ದೆವು, ಕೂಡಿ ಕಲಿಯುತ್ತಿದ್ದೆವು, ಕಟ್ಟಿಗೆ ತರಲು ಹೋಗುತ್ತಿದ್ದೆವು.

**ಕೃಷ್ಣ** : ಗುರುಮಾತೆ ಕೊಟ್ಟ ಹುರಿದ ಕಡಲೆ ತಿಂದಿದ್ದು! ನಿನ್ನ ಪಾಲಿನ ಕಡಲೆ ನಾ ಕಸಿದುಕೊಂಡಿದ್ದು!

©KTBS Not to be republished



**ಸುಧಾಮ** : (ತಡವರಿಸುತ್ತಾ) ಹಸಿವು......ಬಡತನ.....(ಏನೋ ನೆನಪು ಮಾಡಿಕೊಳ್ಳಲು ಯತ್ನಿಸಿ ಮೌನಿಯಾಗುವನು.)

**ಕೃಷ್ಣ** : ಪ್ರಜೆಗಳ ಹಸಿವು ಹಿಂಗಿಸಲು ಅವರ ಕಷ್ಟ ಕಾರ್ಪಣ್ಯ ನೀಗಿಸಲು ರಾಜನಾದವನು ಶ್ರಮಿಸಬೇಕು. ಆಗ ಮಾತ್ರ ಅವನು ನಿಜವಾದ ರಾಜನಾಗುವನು. ನಿನ್ನನ್ನು ಪೀಡಿಸಿದ್ದು ತಪ್ಪೆಂದು ಕ್ರಮೇಣ ನನ್ನ ಅರಿವಿಗೆ ಬಂತು ನೋಡು.

**ಸುಧಾಮ** : ಕೃಷ್ಣ, ಇಷ್ಟು ದಿನ ಇಲ್ಲಿದ್ದು ಅದನ್ನೆಲ್ಲ ಕಣ್ಣಾರೆ ಕಂಡಿರುವೆ.

**ಕೃಷ್ಣ** : ಸುಧಾಮ, ನಿನಗೇನು ಬೇಕು?

**ಸುಧಾಮ** : ನನಗೇನೂ ಬೇಡ. ನಿನ್ನ ಸತ್ಕಾರ ಜೀವನದಲ್ಲಿ ಮರೆಯುವಂತಿಲ್ಲ. ನಿನ್ನ ಸ್ನೇಹವೊಂದೆ ಸಾಕು. ಇನ್ನು ನನ್ನೂರಿಗೆ ಹೊರಡುವೆ.

**ಕೃಷ್ಣ** : ಇಷ್ಟು ಬೇಗ !

**ಸುಧಾಮ** : ನಾನು ಇಷ್ಟು ದೀರ್ಘಕಾಲ ಮನೆಬಿಟ್ಟು ಇದ್ದವನೆ ಅಲ್ಲ. ಅಲ್ಲಿ ಹೆಂಡತಿ ಮಕ್ಕಳು ನನ್ನ ದಾರಿ ಕಾದು ಕಂಗಾಲಾಗಿರಬಹುದು.

**ಕೃಷ್ಣ** : ಇಲ್ಲಿಗೆ ಬಂದ ವಿಷಯ ಅವರಿಗೆ ಗೊತ್ತಿದೆಯಲ್ಲ.

**ಸುಧಾಮ** : ಗೊತ್ತಿದೆ. ಆದರೆ ನನಗೆ ಮಕ್ಕಳದೇ ಚಿಂತೆ. ಹೊರಡಲು ಅಪ್ಪಣೆ ಕೊಡು ಕೃಷ್ಣಾ.

**ಕೃಷ್ಣ** : ನಿನ್ನ ಇಷ್ಟದಂತೆಯೇ ಆಗಲಿ, ಹೋಗಿ ಬಾ. ಶುಭವಾಗಲಿ ಗೆಳೆಯ. ಅಂದ ಹಾಗೆ ನಿನ್ನ ಮನೆಗೆ ನನ್ನನ್ನು ಕರೆಯಲೇ ಇಲ್ಲ! ಪರವಾಗಿಲ್ಲ. ನೀನು ಕರೆಯದಿದ್ದರೂ ನಾನೇ ಬರುವೆ.

**ಸುಧಾಮ** : ಅಯ್ಯೋ! ನನ್ನ ಮನೆಗೆ! ಬೇಡ ಕೃಷ್ಣಾ!

**ಕೃಷ್ಣ** : ಈಗ ಚಿಂತೆ ಬಿಟ್ಟು ಹೊರಡು. ಒಳ್ಳೆಯದಾಗಲಿ.

## ದೃಶ್ಯ–೪

[ಸುಧಾಮನ ಸುಂದರವಾದ ಮನೆ. ದೂರದಲ್ಲಿ ಮರಗಳು. ಹೆಂಡತಿ, ಮಕ್ಕಳು ಹೊಸಬಟ್ಟೆ ಧರಿಸಿ ಮನೆಯಲ್ಲಿ ಸಂತೋಷದಿಂದ ಇರುವ ಸನ್ನಿವೇಶ.]

**ಸುಧಾಮ** : (ಆಶ್ಚರ್ಯದಿಂದ ಹೆಂಡತಿಗೆ) ನೀವು ಯಾರ ಮನೆಯಲ್ಲಿದ್ದೀರಿ?

**ಹೆಂಡತಿ** : ಇದು ನಮ್ಮ ಮನೆ ಕಣ್ರೀ!

**ಸುಧಾಮ** : ನಮ್ಮ ಗುಡಿಸಲು ಎಲ್ಲಿ?

©KTBS Not to be republished

**ಹೆಂಡತಿ** : ಆ ಗುಡಿಸಲಿನ ಜಾಗದಲ್ಲಿಯೇ ಈ ಅರಮನೆಯಂತಹ ಮನೆ ನಿರ್ಮಾಣವಾಗಿದೆ.

**ಸುಧಾಮ** : ಅರೆ! ನಾನು ಹೋಗಿ ಬರುವುದರೊಳಗೆ ಇದು ಹೇಗೆ ಸಾಧ್ಯವಾಯ್ತು?

**ಹೆಂಡತಿ** : (ನಗುತ್ತ) ನಿಮ್ಮ ಮಿತ್ರನ ಕೃಪೆಯಿಂದ.

**ಸುಧಾಮ** : (ಆಶ್ಚರ್ಯದಿಂದ) ನನ್ನ ಮಿತ್ರ ಶ್ರೀಕೃಷ್ಣನಿಂದ!

**ಹೆಂಡತಿ** : ಹೌದು, ಆ ಮಹಾರಾಯ ಶ್ರೀಕೃಷ್ಣನಿಂದಲೇ.

**ಸುಧಾಮ** : ನಾನು ಅವನಿಗೆ ಸಹಾಯ ಮಾಡು ಎಂದು ಕೇಳಿಯೇ ಇಲ್ಲ.


**ಹೆಂಡತಿ** : ನಿಜವಾಗಿಯೂ!

**ಸುಧಾಮ** : ಸತ್ಯವಾಗಿಯೂ.

**ಹೆಂಡತಿ** : ನೀವು ದ್ವಾರಕಾ ನಗರ ತಲುಪಿದ ದಿನವೇ ಅಲ್ಲಿಂದ ಸೇವಕರ ದಂಡು ಬಂತು. ಬೇಕಾದ ಎಲ್ಲ ವಸ್ತುಗಳನ್ನು ತಂದರು. ಚಕಚಕಾಂತ ಮನೆ ನಿರ್ಮಿಸಿದರು. ನಮಗೆಲ್ಲ ಹೊಸ ಉಡುಪು, ಆಭರಣಗಳನ್ನು ಸಹ ಕೊಟ್ಟರು.

©KTBS Not to be republished

**ಸುಧಾಮ** : ಪರಮಾಶ್ಚರ್ಯ, ನನ್ನ ಮನದ ಇಂಗಿತವನ್ನು ತಿಳಿದುಕೊಂಡು ಎಲ್ಲಾ ರೀತಿಯ ಸಹಾಯ ಮಾಡಿದ್ದಾನೆ ಶ್ರೀಕೃಷ್ಣ.



**ಹೆಂಡತಿ** : ನೀವು ತೆಗೆದುಕೊಂಡು ಹೋದ ಅವಲಕ್ಕಿಯನ್ನು ಅವರಿಗೆ ನೀಡಿದಿರಾ?

**ಸುಧಾಮ** : ಹೂಂ! ಕೊಟ್ಟೆ. ಬಹಳ ಆನಂದದಿಂದ ತಿಂದು, ಹೆಂಡತಿ ರುಕ್ಮಿಣಿಗೂ ತಿನ್ನಿಸಿದ.

**ಹೆಂಡತಿ** : ಅಬ್ಬಾ.......! ಬಡವರ ಮನೆ ಅವಲಕ್ಕಿಯನ್ನು ಸಂತೋಷವಾಗಿ ತಿಂದರಲ್ಲ. ಇದು ಅವರ ನಿಜವಾದ ಸ್ನೇಹ ಹಾಗೂ ದೊಡ್ಡ ಗುಣ. ಮತ್ತೆ ನೀವು ಯಾಕೆ ಸಹಾಯ ಕೇಳಲಿಲ್ಲ?

**ಸುಧಾಮ** : ಆತ ಸತ್ಕಾರ ಮಾಡಿದ್ದು ನೋಡಿ ನನ್ನ ಮನಸ್ಸು ನಾಚಿ ಕುಗ್ಗಿ ಹೋಯಿತು. ಮತ್ತೆ ಏನನ್ನು ಕೇಳಲೂ ಮನಸ್ಸಾಗಲಿಲ್ಲ.

**ಹೆಂಡತಿ** : ನೀವು ಕೇಳಲಿಲ್ಲ ನಿಜ, ಆದರೆ ಆ ಶ್ರೀಕೃಷ್ಣ ಪರಮಾತ್ಮನೇ ತಮ್ಮ ಕರ್ತವ್ಯ ಮಾಡಿದ್ದಾರೆ.

**ಸುಧಾಮ** : ಮಕ್ಕಳೆಲ್ಲಾ ಎಲ್ಲಿದ್ದಾರೆ?

(ಮಕ್ಕಳ ಆಗಮನ)

**ಮಗಳು** : ಅಪ್ಪಾ.....ನನ್ನ ಹೊಸ ಬಟ್ಟೆ ನೋಡಿ, ಎಷ್ಟು ಚೆನ್ನಾಗಿದೆ ಸರ, ಓಲೆ, ಬಳೆ ಎಲ್ಲ......

**ಮಗ** : ಅಪ್ಪಾ..... ನಿಮಗೂ ರೇಷ್ಮೆಬಟ್ಟೆ ಕೊಟ್ಟಿದ್ದಾರೆ, ನೋಡಿ.

**ಸುಧಾಮ** : ನನಗೆ ಬೇಡ, ನೀವೆಲ್ಲ ಧರಿಸಿಕೊಳ್ಳಿ. ನನಗೆ ಆ ಕೃಷ್ಣದೇವನ ಸ್ನೇಹವೇ ರೇಷ್ಮೆ ಬಟ್ಟೆ, ಅವನ ಮಾತೆ ನನಗೆ ಆಭರಣ. ಅವನಂತಹ ಗೆಳೆಯನನ್ನು ಪಡೆದ ನಾನೇ ಧನ್ಯ.

(ಎಲ್ಲರೂ ನರ್ತಿಸುವರು.)

(ಹಿನ್ನೆಲೆಯಲ್ಲಿ ಶ್ರೀಕೃಷ್ಣ ಹಾಗೂ ರುಕ್ಮಿಣಿ ನರ್ತಿಸುತ್ತ ಸಾಗುವರು)

©KTBS Not to be republished

**ಕ್ಷೇತ್ರ** : ಆಲಿಸುವುದು.

**ಸಾಮರ್ಥ್ಯ** : ಸಂವಾದ, ಚರ್ಚೆ ಮತ್ತು ನಾಟಕಗಳನ್ನು ಆಲಿಸಿ ಅಭಿನಯಕ್ಕೆ ತಕ್ಕಂತೆ ಅರ್ಥ ಮಾಡಿಕೊಳ್ಳುವುದು.

### ಕವಿ ಕೃತಿ ಪರಿಚಯ:



**ವಿ.ಎಸ್. ಶಿರಹಟ್ಟಿಮಠರು** ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಹಲಗಲಿಯ ಶ್ರೀ ವೀರಭದ್ರೇಶ್ವರ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಗದಗ ಜಿಲ್ಲೆಯ ಹೊಂಬಳದಲ್ಲಿ ದಿನಾಂಕ ೧–೨–೧೯೫೩** ರಂದು ಜನಿಸಿದ ವಿ.ಎಸ್. ಶಿರಹಟ್ಟಿಮಠರ ತಂದೆ ಶಂಕರಯ್ಯ, ತಾಯಿ ಗುರುಸಿದ್ಧವ್ವ. ಅನುವಾದಕರಾಗಿ, ನಾಟಕಕಾರರಾಗಿ ಗುರುತಿಸಿಕೊಂಡಿದ್ದಾರೆ. ತುಂಬಿದ ಕೊಡ, ನರಗುಂದ ಬಂಡಾಯ, ಮಾಡಿದ್ದುಣ್ಣೋ ಮಾರಾಯ, ಗುಣವಂತ ರಾಜಕುಮಾರ ಮುಂತಾದ ಅರವತ್ತಕ್ಕೂ ಹೆಚ್ಚು ಮಕ್ಕಳ ನಾಟಕಗಳನ್ನು ರಚಿಸಿದ್ದಾರೆ.

ರಂಗಭೂಮಿ ಹಾಗೂ ಮಕ್ಕಳ ರಂಗಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ೨೦೦೨ ರಲ್ಲಿ **ಕರ್ನಾಟಕ ನಾಟಕ ಅಕಾಡೆಮಿಯು ಪ್ರಶಸ್ತಿ** ನೀಡಿ ಗೌರವಿಸಿದೆ. ವಿ.ಎಸ್ ಶಿರಹಟ್ಟಿಮಠರವರ **"ಹೂವಿನ ಹಂದರ"** ಕೃತಿಯಿಂದ **'ಕೃಷ್ಣ –ಸುಧಾಮ'** ನಾಟಕವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

### ಪದಗಳ ಅರ್ಥ

ಕಂಗಾಲಾಗು – ಕಂಗೆಡು, ತಬ್ಬಿಬ್ಬಾಗು. ವಿಧೇಯತೆ – ನಮ್ರತೆ, ಅನುಸರಿಸುವ ಗುಣ. ಪಾಂಡಿತ್ಯ – ವಿದ್ವತ್ತು. ಸ್ನೇಹ–ಗೆಳೆತನ, ಮಿತ್ರತ್ವ. ಸಂಕೋಚ – ಕುಗ್ಗುವುದು, ಮುದುಡುವುದು. ಕೃಪೆ – ದಯೆ, ಕರುಣೆ. ಆಶ್ಚರ್ಯ – ವಿಸ್ಮಯ, ಬೆರಗು. ಆಭರಣ– ಒಡವೆ. ಇಂಗಿತ – ಆಶಯ.

### ವಿವರ ತಿಳಿಯಿರಿ:

**ದಾಯಾದಿ** : ಅಣ್ಣತಮ್ಮಂದಿರ ಮಕ್ಕಳು.

**ಶತಪತಿಸು** : ಹಿಂದಕ್ಕೆ ಮುಂದಕ್ಕೆ ನಡೆದಾಡು.

**ರಾಜಧರ್ಮ** : ಅರಸನು ಪ್ರಜೆಗಳ ಕ್ಷೇಮಕ್ಕಾಗಿ ಪಾಲಿಸಬೇಕಾದ ನೀತಿ.

**ಕಾಲಕೂಡಿಬರು** : ಸಮಯ, ಸಂದರ್ಭ ಒದಗಿ ಬರುವುದು.

**ಗುರುಕುಲ** : ಹಿಂದಿನ ಕಾಲದಲ್ಲಿ ಗುರುಗಳ ಮನೆಯೆ ಪಾಠಶಾಲೆ ಆಗಿರುತ್ತಿತ್ತು. ಅದನ್ನು ಗುರುಕುಲ ಎನ್ನುವರು.

### ಅಭ್ಯಾಸಗಳು

**ಅ. ಈ ಪದಗಳಿಗೆ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.**

೧. ಗೆಳೆಯ    ೨. ಹೆಂಡತಿ    ೩. ರಾಜ    ೪. ದುಡಿಮೆ

KTBS Not to be republished

**ಆ. ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಪರಮಮಿತ್ರ ೨. ವಿಶ್ರಾಂತಿ ೩. ಸತ್ಕಾರ ೪. ಸಂತೋಷ ೫. ಶ್ರಮಿಸು

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಸುಧಾಮ ಯಾವುದನ್ನು ಮಾನವಧರ್ಮ ಎನ್ನುತ್ತಾನೆ?

೨. ಯಾರಿಗಾಗಿ ಶ್ರೀಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ?

೩. ಸುಧಾಮನ ಕಣ್ಣಲ್ಲಿ ನೀರು ಏಕೆ ಬಂತು?

೪. ಮನೆಗೆ ಮರಳಿದ ಸುಧಾಮನು ಏನನ್ನು ಕಂಡನು?

೫. ಸುಧಾಮನ ಮನೆಯನ್ನು ಕಟ್ಟಿಸಿದವರು ಯಾರು?

**ಈ. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕೃಷ್ಣ-ಸುಧಾಮರು ಗುರುಕುಲದಲ್ಲಿ ಕಳೆದ ದಿನಗಳನ್ನು ಪರಸ್ಪರ ನೆನಪಿಸಿಕೊಂಡದ್ದು ಹೇಗೆ?

೨. ಕೃಷ್ಣನು ಸುಧಾಮನಿಗೆ ಮನೆ ಕಟ್ಟಿಸಿಕೊಟ್ಟ ಸಂದರ್ಭವನ್ನು ವಿವರಿಸಿರಿ.

**ಉ. ಕೆಳಗಿನ ಮಾತುಗಳನ್ನು ಯಾರು, ಯಾರಿಗೆ, ಯಾವಾಗ ಹೇಳಿದರು?**

೧. ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಸ್ನೇಹ, ಗೌರವ.

೨. ಹಸಿದಿರುವ ಮಕ್ಕಳಿಗೋಸ್ಕರನಾದರೂ ಹೋಗಿ ಕೇಳಿ.

೩. ನನಗೆ ಗುರುಕುಲದ ಜೀವನ ನೆನಪಾಗುತ್ತದೆ.

೪. ನಿಮಗೂ ರೇಷ್ಮೆಬಟ್ಟೆ ಕೊಟ್ಟಿದ್ದಾರೆ.

©KTBS Not to be republished

## ವ್ಯಾಕರಣ ಮಾಹಿತಿ

**ಹಿಂದಿನ ಪಾಠದಲ್ಲಿ ನಾಮಪದಗಳ ವಿಧಗಳ ಬಗ್ಗೆ ತಿಳಿದೆವು. ಇಲ್ಲಿ ನುಡಿಗಟ್ಟು, ಗಾದೆಮಾತು, ಒಗಟುಗಳ ಬಗ್ಗೆ ತಿಳಿಯೋಣ.**

**ನುಡಿಗಟ್ಟು : ವಿಶೇಷಾರ್ಥವುಳ್ಳ ಮತ್ತು ಒಳಾರ್ಥವುಳ್ಳ ಪದಪುಂಜವನ್ನು ನುಡಿಗಟ್ಟು ಎನ್ನುವರು.**

ನಮ್ಮ ಭಾವನೆಯನ್ನು ಸಂಗ್ರಹಿಸಿ ಅರ್ಥಪೂರ್ಣವಾಗಿ ವ್ಯಕ್ತಪಡಿಸಲು ಸಹಾಯಕವಾಗುವ ಪದಪುಂಜವೇ ನುಡಿಗಟ್ಟು. ಇದು ಭಾಷೆಯ ಬಿಗುವನ್ನು ಹೆಚ್ಚಿಸಿ ಮಾತಿನ ಸೊಬಗನ್ನು ಇಮ್ಮಡಿಗೊಳಿಸುತ್ತದೆ.

**ಉದಾ:** ೧. ಅಟ್ಟಕ್ಕೇರಿಸು – ಹೊಗಳಿ ಹೊಗಳಿ ಉಬ್ಬಿಸು.

೨. ಗುಡ್ಡವನ್ನು ಬೆಟ್ಟ ಮಾಡು – ಅಲ್ಪ ವಿಷಯವನ್ನು ದೊಡ್ಡದು ಮಾಡು.

೩. ಕಂಬಿ ಕೀಳು – ಹೇಳದೆ ಕೇಳದೆ ಓಡಿ ಹೋಗು, ಪಲಾಯನ ಮಾಡು.

೪. ನೀರಿನ ಮೇಲೆ ಹೋಮ – ಭಾರಿ ದೊಡ್ಡ ಕೆಲಸ ಮಾಡಿದರೂ ಏನೂ ಪ್ರತಿಫಲ ದೊರಕದೆ ಹೋಗುವುದು.

೫. ಗುಬ್ಬಿ ಮೇಲೆ ಬ್ರಹ್ಮಾಸ್ತ್ರ – ಸಣ್ಣವರ ಮೇಲೆ ಬಲ ಪ್ರದರ್ಶನ.

**ಗಾದೆ :**

ನಾಣ್ಣುಡಿ, ಲೋಕೋಕ್ತಿ : ಒಂದು ವಿಷಯವನ್ನು ಕುರಿತು ಪರಿಣಾಮಕಾರಿಯಾಗಿ ತಿಳಿ ಹೇಳುವ ಘನವಾದ ಅರ್ಥವನ್ನು ಹೊಂದಿರುವ ಹೇಳಿಕೆಗಳೇ ಗಾದೆ ಮಾತುಗಳು. ನೂರು ಮಾತುಗಳಲ್ಲಿ ಹೇಳುವುದನ್ನು ಒಂದು ವಾಕ್ಯದಲ್ಲಿ ಗಾದೆ ಹೇಳಬಲ್ಲದು. ಗಾದೆ ಜಾನಪದ ಸಾಹಿತ್ಯ ಪ್ರಕಾರಗಳಲ್ಲೊಂದು. ಗಾದೆ ಅನುಭವದಿಂದ ಹುಟ್ಟಿಕೊಳ್ಳುವಂಥದ್ದು.

**ಉದಾ :**

೧. ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು.

೨. ನಾಲಿಗೆ ಚೆನ್ನಾಗಿದ್ದರೆ ನಾಡೆಲ್ಲಾ ಒಳ್ಳೆಯದು.

೩. ಕೈಕೆಸರಾದರೆ ಬಾಯಿ ಮೊಸರು.

೪. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

೫. ಕುಣಿಯಲಾರದವ ನೆಲ ಡೊಂಕು ಅಂದ.

**ಒಗಟು :**

ಒಗಟನ್ನು ಒಂಟು, ಒಡಪು, ಒಡಚು, ಒಡಗತೆ ಇತ್ಯಾದಿಯಾಗಿ ಕನ್ನಡದಲ್ಲಿ ನಾನಾ ರೂಪಗಳಲ್ಲಿ ಹೇಳುತ್ತಾರೆ. ಇಂಗ್ಲಿಷಿನಲ್ಲಿ ಒಗಟಿಗೆ Riddle ಎಂದು ಹೇಳುತ್ತಾರೆ. ಮುಖ್ಯವಾಗಿ ಒಗಟು ಎಂದಾಗ ಒಂದು ಸಮಸ್ಯೆ ಎಂದರ್ಥವಾಗುವುದು. ಒಗಟುಗಳು ಬುದ್ಧಿಪ್ರಧಾನವಾದವುಗಳಾಗಿದ್ದು ಅರ್ಥಗರ್ಭಿತವಾಗಿರುತ್ತವೆ.

**ಉದಾ :** ಕೂಗಿದರೆ ರಾವಣ, ಹಾರಿದರೆ ಹನುಮಂತ, ಕೂತರೆ ಮುನಿ. ( ಕಪ್ಪೆ )

ಚಿಪ್ಪುಂಟು ಆಮೆಯಲ್ಲ, ಜುಟ್ಟುಂಟು ಪೂಜಾರಿಯಲ್ಲ.
ಮೂರು ಕಣ್ಣುಂಟು ಹರನಲ್ಲ, ಹಾಗಾದರೆ ನಾನು ಯಾರು? (ತೆಂಗಿನ ಕಾಯಿ)

ಮುಳ್ಳುಗಳಿವೆ ಅಪಾಯವಿಲ್ಲ. ಸಂಖ್ಯೆಗಳಿವೆ ಲೆಕ್ಕದ ಪುಸ್ತಕವಲ್ಲ,
ಗಂಟೆ ಹೊಡೆಯುತ್ತದೆ ದೇವಾಲಯವಲ್ಲ. ( ಗಡಿಯಾರ )

**ಇಂತಹ ಅನೇಕ ಒಗಟುಗಳನ್ನು ಸಂಗ್ರಹಿಸಿ ಶಾಲೆಯಲ್ಲಿ ಮಿತ್ರರೊಂದಿಗೆ ಹಂಚಿಕೊಳ್ಳಿರಿ.**

©KTBS Not to be republished

**ಊ. ಕೆಳಗಿನ ವಾಕ್ಯಗಳಲ್ಲಿಯ ಕರ್ತೃ/ಕರ್ಮ/ಕ್ರಿಯಾಪದಗಳನ್ನು ಗುರುತಿಸಿ ಪಟ್ಟಿ ಮಾಡಿ ಬರೆಯಿರಿ.**

೧. ಸರಸ್ವತಿ ಶಾಲೆಗೆ ಹೋಗುತ್ತಾಳೆ.

೨. ಮಹಮ್ಮದನು ಮನೆಗೆ ಬರುತ್ತಾನೆ.

೩. ಗಿಳಿಗಳು ಆಕಾಶದಲ್ಲಿ ಹಾರಾಡುತ್ತವೆ.

**ಋ. ಕರ್ತೃ/ಕರ್ಮ/ಕ್ರಿಯಾಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯಗಳನ್ನು ಬರೆಯಿರಿ.**

ಉದಾ: ಎಳೆಯುತ್ತದೆ ಬಂಡಿಯನ್ನು ಎತ್ತು

ಎತ್ತು ಬಂಡಿಯನ್ನು ಎಳೆಯುತ್ತದೆ.

೧. ಬೀಳುತ್ತದೆ ಕಾಯಿ ಮರದಿಂದ

೨. ಅಹಿಂಸೆಯನ್ನು ಪ್ರತಿಪಾದಿಸಿದರು ಗಾಂಧೀಜಿ

೩. ಉದಯಿಸುತ್ತಾನೆ ಸೂರ್ಯನು ಮುಂಜಾನೆ

**ಎ. ಚರ್ಚಾಸ್ಪರ್ಧೆಗಳನ್ನು ಏರ್ಪಡಿಸುವುದು.**

೧. ಹಳ್ಳಿಜೀವನ ಚಂದವೋ? ಪಟ್ಟಣ ಜೀವನ ಚಂದವೋ?

೨. ನಮ್ಮ ಕೆಲಸ ಮಾತ್ರ ಮಾಡ್ಕೋಬೇಕಾ? ಬೇರೆಯವರ ಕೆಲಸ ಮಾಡಿ ಕೊಡ್ಬೇಕಾ?

೩. ಕಥೆ ಇಷ್ಟಾನಾ? ಹಾಡು ಇಷ್ಟಾನಾ? ಏಕೆ?

©KTBS Not to be republished

**ಭಾಷಾ ಆಟಗಳು**

ಅ. ಕೃಷ್ಣ–ಅರ್ಜುನ–ಭೀಮ

೧. ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ನಿಲ್ಲಿಸುವುದು.

೨. ಅವರ ಕಿವಿಯಲ್ಲಿ ಮೇಲಿನದೊಂದು ಹೆಸರನ್ನು ಹೇಳುತ್ತಾ ಬರುವುದು.

೩. ಯಾರುಯಾರಿಗೆ ಯಾವ ಹೆಸರು ಬಂದಿದೆಯೋ ಇನ್ನೊಬ್ಬರಿಗೆ ಹೇಳಬಾರದು.

೪. ಎಲ್ಲರನ್ನು ಸ್ವಲ್ಪ ಹಿಂದಕ್ಕೆ ಕಳಿಸುವುದು.

೫. ಹೆಸರಿಗೆ ತಕ್ಕಂತೆ ನಟನೆ ಮಾಡುತ್ತಾ ಒಂದೇ ಪಾತ್ರದವರು ಒಂದು ಕಡೆ ಸೇರಬೇಕು. ಯಾರು ಸನ್ನೆ ಮಾಡಬಾರದು. ಮಾತನಾಡಬಾರದು.

೬. ಯಾವ ಪಾತ್ರದ ಗುಂಪು ಮೊದಲು ಸೇರುತ್ತದೋ ಅವರು ವಿಜಯಶಾಲಿಗಳು.

(ಕೃಷ್ಣನ ಹೆಸರು ಬಂದವರು ಕೊಳಲೂದುವ /ಅಂಬೆಗಾಲಿಟ್ಟು ನಡೆಯುವ / ಬೆಣ್ಣೆ ತಿನ್ನುವ ನಟನೆ ಮಾಡಬಹುದು.)

## ಯೋಜನೆ

ಅ. ಕೆಳಗೆ ಹೇಳಿದ ಮಕ್ಕಳ ನಾಟಕ ಪುಸ್ತಕಗಳನ್ನು ಸಂಗ್ರಹಿಸಿರಿ. ಅವುಗಳಲ್ಲಿ ಒಂದು ನಾಟಕವನ್ನು ನಿಮ್ಮ ಶಾಲಾ ಕಾರ್ಯಕ್ರಮದಲ್ಲಿ ಅಭಿನಯಿಸಿರಿ.

೧. ಕುವೆಂಪು– ಬೊಮ್ಮನಹಳ್ಳಿಯ ಕಿಂದರಿ ಜೋಗಿ

೨. ಬಿ.ವಿ.ಕಾರಂತ– ಪಂಜರ ಶಾಲೆ

೩. ವೈದೇಹಿ– ಸೂರ್ಯ ಬಂದ

೪. ಕೆ.ವಿ. ಸುಬ್ಬಣ್ಣ– ನೀಲಿ ಕುದುರೆ

೫. ಚಂದ್ರಶೇಖರ ಕಂಬಾರ– ಕಿಟ್ಟಿಕಥೆ

## ಪೂರಕ ಓದು

೧. ಏಸುಕ್ರಿಸ್ತನು ಮಗ್ದಲದ ಮರಿಯಳಿಗೆ ದಯೆತೋರಿದ ಘಟನೆಯನ್ನು ತಿಳಿಯಿರಿ.

೨. ಬುದ್ಧನು ಅಂಗುಲೀಮಾಲನ ಮನಸ್ಸನ್ನು ಪರಿವರ್ತಿಸಿದ ಘಟನೆಯನ್ನು ಓದಿರಿ.

೩. ಚಂದಮಾಮ, ಅಮರಚಿತ್ರಕಥಾ ಮುಂತಾದ ಪುಸ್ತಿಕೆಗಳಲ್ಲಿ ಬರುವ ಪುರಾಣದ ಕಥೆಗಳನ್ನು ಓದಿರಿ.

©KTBS Not to be republished

## ಶುಭ ನುಡಿ

೧. ಯಾವುದು ಜೀವಿಗಳ ಹಿತ ಸಾಧನೆಗೆ ಸಹಕಾರಿಯಾಗುವುದೋ ಅದೇ ಧರ್ಮ.

೨. ಮಾನವೀಯತೆಯೇ ಮನುಷ್ಯ ಧರ್ಮ.

೩. ಪ್ರೀತಿಯು ನಮ್ಮ ಲಾಂಛನವಾಗಿರಲಿ, ಮಾನವೀಯತೆಯು ನಮ್ಮ ಆಲೋಚನೆಯಾಗಿರಲಿ.

* * * * *

# ೪. ಡಾ. ರಾಜಕುಮಾರ್

– ದೊಡ್ಡಹುಲ್ಲೂರು ರುಕ್ಕೋಜಿರಾವ್

**ಪ್ರವೇಶ :** ಬಡತನ ಮತ್ತು ಆರ್ಥಿಕ, ಸಾಮಾಜಿಕ ಬೆಂಬಲವಿಲ್ಲದ ಕೌಟುಂಬಿಕ ಹಿನ್ನೆಲೆಯಿಂದ ಬಂದ ಅನೇಕ ವ್ಯಕ್ತಿಗಳು ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯಗಳಿಂದ ನಕ್ಷತ್ರಗಳಂತೆ ಬೆಳಗಿದ್ದಾರೆ. ಇಂತಹವರ ಬದುಕಿನ ಪುಟಗಳನ್ನು ಅವಲೋಕಿಸಿದಾಗ ಒಬ್ಬ ವ್ಯಕ್ತಿ ಶ್ರದ್ಧೆ ಮತ್ತು ಪರಿಶ್ರಮಗಳಿಂದ ಏನನ್ನು ಬೇಕಾದರೂ ಸಾಧಿಸಬಹುದೆಂಬ ಸ್ಫೂರ್ತಿ ಇತರರಲ್ಲೂ ಚಿಮ್ಮಬಹುದು. ವರನಟ, ಮೇರುನಟ, ಕನ್ನಡದ ಕಣ್ಮಣಿ, ಗಾನಗಂಧರ್ವ, ನಟಸಾರ್ವಭೌಮ ಎಂಬೆಲ್ಲಾ ಬಿರುದು-ಕೀರ್ತಿಗಳಿಗೆ ಪಾತ್ರರಾಗಿರುವ ಡಾ. ರಾಜಕುಮಾರ್ ಎಲ್ಲ ಅರ್ಥದಲ್ಲಿಯೂ ಮನೆಮಾತಾದವರು. ಕರ್ನಾಟಕದ ಹೆಮ್ಮೆಯ ಸುಪುತ್ರ. ಅವರ ಬದುಕಿನ ಕಿರು ಪಕ್ಷಿನೋಟದಿಂದ ಕನ್ನಡದ ಸೀಮಾಪುರುಷನೊಬ್ಬನ ಬದುಕು-ಸಾಧನೆಗಳನ್ನು ಅರಿಯಬಹುದೆಂಬ ಆಶಯ ಈ ಪಾಠದ ಹಿನ್ನೆಲೆಯಾಗಿದೆ.



ಕನ್ನಡಿಗರ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವೇ ಆಗಿರುವ ಡಾ.ರಾಜಕುಮಾರ್ ಅವರು ೧೯೨೯ರ ಏಪ್ರಿಲ್ ೨೪ರಂದು ಜನಿಸಿದರು. ಚಾಮರಾಜನಗರದಿಂದ ಹನ್ನೆರಡು ಮೈಲಿ ದೂರದಲ್ಲಿರುವ ತಾಳವಾಡಿ ಪಕ್ಕದ ಗಾಜನೂರು ಇವರ ಹುಟ್ಟೂರು. ಗಾಜನೂರು ಲಕ್ಷ್ಮಮ್ಮನವರ ತವರೂರು. ಸಿಂಗನಲ್ಲೂರು ಪುಟ್ಟಸ್ವಾಮಯ್ಯನವರ ಮೂಲಸ್ಥಳ. ಸುಪ್ರಸಿದ್ಧ ರಂಗಭೂಮಿಯ ನಟರಾದ ಸಿಂಗಾನಲ್ಲೂರು ಶ್ರೀ ಪುಟ್ಟಸ್ವಾಮಯ್ಯನವರು ಇವರ ತಂದೆ. ತಾಯಿ ಶ್ರೀಮತಿ ಲಕ್ಷ್ಮಮ್ಮನವರು. ಮಳೆಯೇ ಇಲ್ಲದೆ ಭೂಮಿ ಬಿಸಿಲಿನ ಬೇಗೆಯಿಂದ ಬಳಲಿದ್ದ ಒಂದು ದಿನ. ಜೋರಾಗಿ ಮಳೆ ಸುರಿಯತೊಡಗಿತು. ಬಿಸಿಲಿನ ತಾಪಕ್ಕೆ ಕಂಗೆಟ್ಟಿದ್ದ ಜನರಿಗೆ ವರ್ಷಧಾರೆಯು ಹರುಷ ತಂದಿತು. ಭೂಮಿಯೂ ತಂಪಾಯಿತು. ಇಂತಹ ತಣ್ಣನೆಯ ಹೊತ್ತಿನಲ್ಲೇ ಶ್ರೀಮತಿ ಲಕ್ಷ್ಮಮ್ಮನವರು ಗಂಡು ಮಗುವನ್ನು ಹೆತ್ತರೆಂಬ ಸುದ್ದಿ ಬಂತು. ಇಳೆಗೆ ಮಳೆಯನ್ನು ಕರೆತಂದ ಕಂದನೆಂದೇ ಊರ ಜನ ಸಂಭ್ರಮಿಸಿದರು. ತಾವು 'ಮುತ್ತತ್ತಿರಾಯ'ನಿಗೆ ಹೊತ್ತ ಹರಕೆಯಿಂದಲೇ ಗಂಡು ಮಗು ಜನಿಸಿತೆಂಬ ಸಂಭ್ರಮದಿಂದ ಕೆಂಪಗೆ, ಹಸಿಬೆಣ್ಣೆಯಂತಿದ್ದ ಹಸುಗೂಸನ್ನು ಪುಟ್ಟಸ್ವಾಮಯ್ಯನವರು ಎತ್ತಿ ಮುದ್ದಾಡಿದರು. ಮಗನ ಹೆಸರಿನಲ್ಲಿ 'ರಾಜು' ಎಂಬ ಪದವಿರಬೇಕೆಂಬ ಆಸೆ ತಂದೆ-ತಾಯಿಯರದು. ಮುತ್ತುರಾಯನ ವರಪ್ರಸಾದವಾದ್ದರಿಂದ 'ಮುತ್ತು' ಮತ್ತು ತಮ್ಮಾಸೆಯ ಸೆಳೆತದಂತೆ 'ರಾಜು' ಎಂಬುದನ್ನು ಸೇರಿಸಿ ಮಗುವಿಗೆ 'ಮುತ್ತುರಾಜು' ಎಂದು ನಾಮಕರಣ ಮಾಡಲಾಯಿತು. ಎಲ್ಲರ ಕಣ್ಮಣಿಯಾಗಿ ಮುತ್ತುರಾಜ ಬೆಳೆದನು.

©KTBS Not to be republished

ಮುತ್ತುರಾಜುವಿನ ಬಹುತೇಕ ಬಾಲ್ಯವು ದೊಡ್ಡ ಗಾಜನೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕಳೆಯಿತು. ತೀರಾ ಅಪರೂಪಕ್ಕೆ ನೋಡುತ್ತಿದ್ದ ದೊಡ್ಡ ಊರೆಂದರೆ ನಂಜನಗೂಡು. ಇನ್ನೂ ಅಪರೂಪಕ್ಕೆ ಮೈಸೂರಿನ ದರ್ಶನವೂ ಆಗುತ್ತಿತ್ತು. ಬಾಲ್ಯವು ಸಮೃದ್ಧವಾಗಿದ್ದಿತು. ಹಳ್ಳಿಯಲ್ಲಿ ಹುಟ್ಟಿದ ಯಾರಿಗೇ ಆದರೂ ಬಡತನ, ಹಸಿವು, ಜಗಳ, ಜಾತ್ರೆ, ಪೂಜೆ, ಉತ್ಸವ, ಹೊಲ, ತೋಟ, ಕಾಡು–ತೊರೆ, ಬಂಧು–ಬಳಗ, ತಾಯಿಯ ವಾತ್ಸಲ್ಯಧಾರೆ–ಇವೆಲ್ಲ ಸಹಜವಾಗಿ ಒದಗಿ ಬರುವ ಭಾಗ್ಯಗಳು. ಮುತ್ತುರಾಜನೂ ಇವೆಲ್ಲವನ್ನು ಅನುಭವಿಸಿ ಬಾಲ್ಯವನ್ನು ಹಸನಾಗಿಸಿಕೊಂಡ ಭಾಗ್ಯವಂತನೇ! ಹಿರಿಪುರದ ಸರ್ಕಾರಿ ಶಾಲೆಗೆ ಮುತ್ತುರಾಜನನ್ನು ಸೇರಿಸಿದರೂ ಮುತ್ತುರಾಜನ ದೇಹಮಾತ್ರ ಶಾಲೆಯಲ್ಲಿರುತ್ತಿತ್ತು. ಮನಸ್ಸು ಸದಾ ಹೊರಗಿರುತ್ತಿತ್ತು. ಕುಟುಂಬದ ಬಡತನವೂ ಕಾರಣವಾಗಿ ವಿದ್ಯಾಭ್ಯಾಸ ಬಾಲ್ಯದಲ್ಲಿಯೇ ನಿಂತುಹೋದುದರಿಂದ ಬಾಲಕನಾಗಿರುವಾಗಲೇ ತಂದೆಯ ಜೊತೆ ರಂಗಭೂಮಿಗೆ ಬಂದರು. ಖ್ಯಾತ ರಂಗನಟರೆನಿಸಿದ್ದ ಪುಟ್ಟಸ್ವಾಮಯ್ಯನವರು ಮಗನಿಗೆ ಮನೆಯಲ್ಲಿಯೇ ಹಾಡುಗಾರಿಕೆ ಮತ್ತು ಅಭಿನಯದ ಪಾಠ ಹೇಳಿಕೊಟ್ಟರು. ಮುತ್ತುರಾಜನ ಮಾವಂದಿರಾದ ಅಪ್ಪಾಜಿಗೌಡರು ಹಾಗೂ ಸಣ್ಣೇಗೌಡರಿಂದ ಸಂಗೀತ ಪಾಠವಾಯಿತು.

ರಂಗಭೂಮಿಯು ಇವರ ಮೊದಲ ಆಡುಂಬೊಲ. ಗುಬ್ಬಿ ವೀರಣ್ಣನವರ ನಾಟಕ ಕಂಪನಿಯಲ್ಲಿ ಬಾಲ ಕಲಾವಿದನಾಗಿ ಮುತ್ತುರಾಜುವಿನ ವೃತ್ತಿಜೀವನ ಆರಂಭವಾಯಿತು. ಮೊದಮೊದಲು ಸಖಿ, ಸೇವಕಿ ಇತ್ಯಾದಿ ಪಾತ್ರಗಳನ್ನು ನಿರ್ವಹಿಸಬೇಕಾಯಿತು. ಆನಂತರವಷ್ಟೇ ಮುಖ್ಯ ಪುರುಷ ಪಾತ್ರಗಳು ಅರಸಿ ಬಂದವು. ಸುಬ್ಬಯ್ಯನಾಯ್ಡು ಅವರ 'ಶ್ರೀ ಸಾಹಿತ್ಯ ಸಾಮ್ರಾಜ್ಯ' ಎಂಬ ನಾಟಕ ಸಂಸ್ಥೆಗೆ ಸೇರಿ ಮುಖ್ಯ ಪಾತ್ರಗಳನ್ನು ನಿರ್ವಹಿಸಿದ್ದು ಮುತ್ತುರಾಜರ ಬದುಕಿನ ಮಹತ್ವದ ದಿನಗಳು. ತಂದೆಯವರು ಇಹಲೋಕವನ್ನು ತ್ಯಜಿಸಿದ್ದರಿಂದ ಇಡೀ ಕುಟುಂಬದ ಹೊಣೆಗಾರಿಕೆಯನ್ನು ಮುತ್ತುರಾಜ ಹೊರಬೇಕಾಯಿತು. ನಾಟಕಗಳಲ್ಲಿ ಅಭಿನಯಿಸುತ್ತಲೇ ಕಷ್ಟದಲ್ಲಿ ಜೀವನ ಸಾಗಿಸಿದರು. ಸೋದರಮಾವನ ಮಗಳಾದ 'ಪಾರ್ವತಿ' ಅವರನ್ನು ವಿವಾಹವಾದ ಮೇಲೆ ಅವರ ಹೆಗಲೆಣೆಯ ಆಸರೆಯೂ ಒದಗಿ ಬಂತು.

'ಮುತ್ತುರಾಜ'ರ ಮುಖ್ಯ ಕಾರ್ಯಕ್ಷೇತ್ರವೆಂದರೆ ಚಲನಚಿತ್ರರಂಗ. ೧೯೪೨ರಲ್ಲಿ ತೆರೆಕಂಡ 'ಭಕ್ತಪ್ರಹ್ಲಾದ' ಮತ್ತು ೧೯೫೧ರಲ್ಲಿ ತೆರೆಗೆ ಬಂದ 'ಶ್ರೀನಿವಾಸ ಕಲ್ಯಾಣ' ಚಿತ್ರಗಳಲ್ಲಿ ಇವರು ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡರೂ ಕನ್ನಡ ಚಿತ್ರರಂಗದ ನಾಯಕರಾಗಿ ಪ್ರವೇಶಿಸಿದ್ದು ೧೯೫೪ರಲ್ಲಿ ಬಿಡುಗಡೆಯಾದ 'ಬೇಡರ ಕಣ್ಣಪ್ಪ'ದ ಮೂಲಕ. ಈ ಚಿತ್ರದ ನಿರ್ದೇಶಕರಾದ ಎಚ್.ಎಲ್.ಎನ್.ಸಿಂಹ ಅವರು 'ಮುತ್ತುರಾಜ' ಎಂಬ ಹೆಸರನ್ನು 'ರಾಜಕುಮಾರ್' ಎಂದು ಬದಲಾಯಿಸಿದರು. ಅಂದಿನಿಂದ ಅದೇ ಹೆಸರು ನಾಡ ಜನರ ಹೃದಯದಲ್ಲಿ ನೆಲೆ ನಿಂತಿತು. ಆರಂಭದಲ್ಲಿ ಭಕ್ತಿ ಪ್ರಧಾನವಾದ ಪಾತ್ರಗಳಲ್ಲಿಯೇ ರಾಜುಕುಮಾರ್ ನಟಿಸಿದರು. ಭಕ್ತವಿಜಯ, ಹರಿಭಕ್ತ, ಓಹಿಲೇಶ್ವರ, ಕೃಷ್ಣಗಾರುಡಿ, ಧರ್ಮವಿಜಯ, ದಶಾವತಾರ, ಶ್ರೀಶೈಲ ಮಹಾತ್ಮೆ, ಕಬೀರ್, ಭಕ್ತಚೇತ, ತುಕಾರಾಂ ಮುಂತಾದ ಭಕ್ತಿಪ್ರಧಾನ ಚಿತ್ರಗಳು ಚಿತ್ರರಸಿಕರ ಮನಸೂರೆಗೊಂಡವು. ಭೂಕೈಲಾಸದ ರಾವಣನಾಗಿ, ಮೋಹಿನಿ ಭಸ್ಮಾಸುರದ ಭಸ್ಮಾಸುರನಾಗಿ, ಭಕ್ತಕುಂಬಾರದಲ್ಲಿ

©KTBS Not to be republished

ಕುಂಬಾರನಾಗಿ, ಬಬ್ರುವಾಹನನಾಗಿ, ಮಯೂರವರ್ಮನಾಗಿ, ಕಾಳಿದಾಸನಾಗಿ ಮನೋಜ್ಞ ಅಭಿನಯ ನೀಡಿದ ರಾಜಕುಮಾರ್ ಜನರ ಪ್ರೀತಿಯಲ್ಲಿ ಮಿಂದರು.

ಸಾಮಾಜಿಕ ಚಿತ್ರಗಳಲ್ಲೂ ಅವರದು ಅದ್ಭುತ ನಟನೆಯೇ. ರಾಯರ ಸೊಸೆ, ಕರುಣೆಯೇ ಕುಟುಂಬದ ಕಣ್ಣು, ನಂದಾದೀಪ, ಸಾಕುಮಗಳು, ಗೌರಿ, ಸಂಧ್ಯಾರಾಗ, ಚಂದವಳ್ಳಿಯ ತೋಟ, ನಾಂದಿ, ಉಯ್ಯಾಲೆ, ಕರುಳಿನ ಕರೆ, ಕಸ್ತೂರಿ ನಿವಾಸ, ಬಂಗಾರದ ಮನುಷ್ಯ, ಸನಾದಿ ಅಪ್ಪಣ್ಣ, ದೇವತಾ ಮನುಷ್ಯ, ಜೀವನಚೈತ್ರ–ಪ್ರತಿಯೊಂದೂ ರಾಜಕುಮಾರ್ ಅಭಿನಯ ಸಾಮರ್ಥ್ಯವನ್ನು ಹೊರಚೆಲ್ಲಿದ ಅಪೂರ್ವ ಚಿತ್ರಗಳು. ಅನೇಕ ಚಿತ್ರಗಳಲ್ಲಿನ ಮನೋಜ್ಞ ಅಭಿನಯಕ್ಕೆ ಶ್ರೇಷ್ಠ ನಟ ಪ್ರಶಸ್ತಿಯೂ ಲಭಿಸಿತು.

ರಾಜಕುಮಾರ್ ಅವರು ಶ್ರೇಷ್ಠ ನಟರಾಗಿರುವಂತೆ ಶ್ರೇಷ್ಠ ಗಾಯಕರೂ ಆಗಿದ್ದಾರೆ. 'ಸಂಪತ್ತಿಗೆ ಸವಾಲ್' ಚಿತ್ರದ 'ಯಾರೇ ಕೂಗಾಡಲೀ....' ಎಂಬ ಹಾಡಿನೊಂದಿಗೆ ಗಾಯಕರಾಗಿ ಪ್ರಸಿದ್ಧಿ ಪಡೆದರು. ಅದಕ್ಕೂ ಮೊದಲೇ ಎರಡು ಸಿನಿಮಾಗಳಿಗೆ ಹಾಡಿದ್ದರು. ಮುಂದೆ ಇವರು ತಮ್ಮ ಪಾತ್ರಗಳಿಗೆ ತಾವೇ ಗಾಯಕರಾಗಿಯೂ ಗುರುತಿಸಿಕೊಂಡರು. ಸಾವಿರಾರು ಚಿತ್ರಗೀತೆ, ಭಕ್ತಿಗೀತೆ, ಭಾವಗೀತೆಗಳನ್ನು ಹಾಡಿರುವ ಇವರಿಗೆ 'ಜೀವನಚೈತ್ರ' ಸಿನಿಮಾದ 'ನಾದಮಯ' ಎಂಬ ಹಾಡಿಗಾಗಿ 'ರಾಷ್ಟ್ರ ಪ್ರಶಸ್ತಿ'ಯನ್ನು ಮುಡಿಗೇರಿಸಿಕೊಂಡಿದ್ದಾರೆ.

ರಂಗಭೂಮಿ, ಚಲನಚಿತ್ರ, ಗಾಯನ ರಾಜಕುಮಾರ್ ಅವರ ಬದುಕಿನ ಮುಖ್ಯ ಮಜಲುಗಳಾದರೆ 'ಕನ್ನಡ ಪ್ರೀತಿ' ಅವರ ಉಸಿರು ಎಂಬುದನ್ನು ಮರೆಯುವಂತಿಲ್ಲ. ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಆದ್ಯತೆ ನೀಡಬೇಕೆಂಬ ಆಶಯದ ಗೋಕಾಕ್ ಚಳುವಳಿಯನ್ನು ಮುಂಚೂಣಿಯಲ್ಲಿ ಮುನ್ನಡೆಸಿದವರು ರಾಜಕುಮಾರ್. ಅವರ ಕನ್ನಡದ ಪ್ರೀತಿ ಅನನ್ಯ, ಅದ್ವಿತೀಯವಾದದ್ದು. ಕನ್ನಡ ನಾಡು–ನುಡಿಗೆ ಅಪಾರ ಸೇವೆ ಸಲ್ಲಿಸಿದ್ದರಿಂದಲೇ ಅವರು ಚಿತ್ರರಂಗದ ಜನಪ್ರಿಯ ನಟರಾಗಿ ಉಳಿಯದೆ ಕರ್ನಾಟಕದ ಮೇರು ನಾಯಕರೆನಿಸಿದ್ದಾರೆಂಬುದು ಸ್ಮರಣಾರ್ಹ.

ರಾಜಕುಮಾರ್ ಅವರಿಗೆ ಸಂದಿರುವ ಗೌರವ–ಪುರಸ್ಕಾರಗಳೂ ಅಗಣಿತವಾಗಿವೆ. ೧೯೭೬ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿದಂದಿನಿಂದ 'ಡಾ. ರಾಜಕುಮಾರ್' ಎನಿಸಿದರು. ೧೯೮೩ರಲ್ಲಿ ಕೇಂದ್ರ ಸರಕಾರ 'ಪದ್ಮಭೂಷಣ' ಪ್ರಶಸ್ತಿ ನೀಡಿದೆ. ಕನ್ನಡ ಚಿತ್ರೋದ್ಯಮದ ಸರ್ವಾಂಗೀಣ ಅಭಿವೃದ್ಧಿಗಾಗಿ ದುಡಿದ ವ್ಯಕ್ತಿಗೆ ಸಲ್ಲುವ 'ಗುಬ್ಬಿ ವೀರಣ್ಣ ಪ್ರಶಸ್ತಿ' (೧೯೯೩ರಲ್ಲಿ) ದೊರೆತಿದೆ. ೧೯೯೨ರಲ್ಲಿ ಕರ್ನಾಟಕ ಸರಕಾರವು 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಿದೆ. ಅಭಿಮಾನಿಗಳು–ಸಂಘ ಸಂಸ್ಥೆಗಳು ಕಲಾಕೌಸ್ತುಭ, ಗಾನಗಂಧರ್ವ, ನಟಸಾರ್ವಭೌಮ, ಕಲಾಕೇಸರಿ, ಕನ್ನಡದ ಕಣ್ಮಣಿ, ವರನಟ, ರಸಿಕರ ರಾಜ ಮುಂತಾದ ಅನೇಕ ಬಿರುದುಗಳನ್ನು ನೀಡಿ ತಮ್ಮ ಪ್ರೀತಿಯನ್ನು ತೋರಿದ್ದಾರೆ. ಇವೆಲ್ಲಕ್ಕೆ ಕಿರೀಟವಿಟ್ಟಂತೆ 'ಡಾ. ದಾದಾ ಸಾಹೇಬ್ ಫಾಲ್ಕೆ ಅವಾರ್ಡ್' ಗೌರವ ಸಂದಿದೆ.

ರಾಜಕುಮಾರರ ಇಡೀ ಕುಟುಂಬವೇ ಚಿತ್ರೋದ್ಯಮಕ್ಕೆ ಸೇವೆ ಸಲ್ಲಿಸುತ್ತಿದೆ. ಶ್ರೀಮತಿ ಪಾರ್ವತಮ್ಮ ರಾಜಕುಮಾರರು ನಿರ್ಮಾಪಕಿಯಾಗಿ, ವಿತರಕಿಯಾಗಿ ಅಮೂಲ್ಯವಾದ ಸೇವೆ ಸಲ್ಲಿಸಿದ್ದಾರೆ. ಶಿವರಾಜಕುಮಾರ್, ರಾಘವೇಂದ್ರ ರಾಜಕುಮಾರ್, ಪುನೀತ್ ರಾಜಕುಮಾರ್

©KTBS Not to be republished

ನಾಯಕನಟರಾಗಿ ಖ್ಯಾತರಾಗಿದ್ದಾರೆ. ಪುನೀತ್ ರಾಜ್‌ಕುಮಾರ್ ಬಾಲ ನಟನಾಗಿ 'ಬೆಟ್ಟದ ಹೂ' ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಗಳಿಸಿದ್ದಾರೆ. ಇವರೊಂದಿಗೆ ಮೂರನೇ ತಲೆಮಾರಿನ ನಟ–ನಟಿಯರೂ ಪ್ರಸಿದ್ಧಿಗೆ ಬರುತ್ತಿದ್ದಾರೆ. ರಾಜಕುಮಾರ್ ಸ್ವತಃ ಗಾಯನ ರಸಸಂಜೆಗಳನ್ನು ನಡೆಸಿ ಅನೇಕ ಸಂಘ–ಸಂಸ್ಥೆಗಳಿಗೆ, ಶಿಕ್ಷಣ ಕ್ಷೇತ್ರಗಳಿಗೆ ರಂಗಭೂಮಿಯ ಕಲಾವಿದ, ತಂತ್ರಜ್ಞರಿಗೆ ಅಗತ್ಯಬಿದ್ದಾಗ ನೆರವು ನೀಡಿದ್ದಾರೆ. ಬರಪರಿಹಾರ ನಿಧಿ, ನೆರೆ ಸಂತ್ರಸ್ತರಿಗೆ, ಮುಖ್ಯಮಂತ್ರಿ ನಿಧಿ ಹಲವು ಬಾರಿ ಹಣಕಾಸಿನ ಸಂಗ್ರಹ ಮಾಡಿಕೊಟ್ಟಿದ್ದರು. ಇದರಿಂದ ಅವರೊಬ್ಬ ಅಪ್ಪಟ ಹೃದಯ ಶ್ರೀಮಂತಿಕೆಯ ಕಲಾವಿದರಾಗಿದ್ದರೆಂಬುದು ವೇದ್ಯವಾಗುತ್ತದೆ.

| | | |
|---|---|---|
| **ಕ್ಷೇತ್ರ** | : | **ಓದುವುದು** |
| **ಸಾಮರ್ಥ್ಯ** | : | **ಮುದ್ರಿತ ವಿಷಯಗಳನ್ನು ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು** |

**ಕವಿ ಕೃತಿ ಪರಿಚಯ:**



**ಶ್ರೀಯುತ ದೊಡ್ಡಹುಲ್ಲೂರು ರುಕ್ಕೋಜಿರಾವ್** ರವರು **೧೯೫೮ ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕಿನ ದೊಡ್ಡಹುಲ್ಲೂರಿ**ನಲ್ಲಿ ಜನಿಸಿದರು. ರಂಗಭೂಮಿ, ಚಲನಚಿತ್ರ ಮತ್ತು ಬರವಣಿಗೆಗಳು ಇವರ ಆಸಕ್ತಿಯ ಕ್ಷೇತ್ರಗಳು. ಹಲವಾರು ವಾರಪತ್ರಿಕೆಗಳಲ್ಲಿ ಪತ್ರಕರ್ತರಾಗಿಯೂ ಸೇವೆ ಸಲ್ಲಿಸಿದ್ದಾರೆ. ಚಲನಚಿತ್ರಗಳಿಗೆ ಚಿತ್ರಕಥೆ, ಸಂಭಾಷಣೆ ರಚಿಸಿ, ಪ್ರಶಸ್ತಿ ಗಳಿಸಿದ್ದಾರೆ.

ಡಾ. ರಾಜಕುಮಾರ್ ಸಮಗ್ರ ಜೀವನಚರಿತ್ರೆಯನ್ನು ಅಭೂತಪೂರ್ವವಾಗಿ ಚಿತ್ರಸಹಿತವಾಗಿ ರಚಿಸಿ ಎರಡು ಮಹಾ ಸಂಪುಟಗಳಲ್ಲಿ ಹೊರತರುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. "**ಸದನದಲ್ಲಿ ಸಿದ್ಧಲಿಂಗಯ್ಯ**" ಎಂಬ ಕೃತಿಯನ್ನು ಎರಡು ಸಂಪುಟಗಳಲ್ಲಿ ಹೊರತಂದಿದ್ದಾರೆ. ರಾಜಕುಮಾರ್ ಅವರ ನಿಕಟವರ್ತಿಯಾಗಿದ್ದ ಶ್ರೀಯುತರ "**ಡಾ. ರಾಜಕುಮಾರ್‌ಸಮಗ್ರ ಜೀವನಚರಿತ್ರೆ**" ಕೃತಿಯಿಂದ ಪ್ರಸ್ತುತ ಗದ್ಯಭಾಗವನ್ನು ಸಂಗ್ರಹಿಸಿ ಕೊಡಲಾಗಿದೆ.

©KTBS Not to be republished

## ಪದಗಳ ಅರ್ಥ

ಅವಿಭಾಜ್ಯ–ಬೇರ್ಪಡಿಸಲಾಗದ, ವರ್ಷಧಾರೆ–ಮಳೆ, ಕಂಗೆಡು–ದಿಕ್ಕುತೋಚದಂತಾಗು, ಸೆಳೆತ–ಆಕರ್ಷಣೆ, ವಾತ್ಸಲ್ಯ–ಪ್ರೀತಿ, ಹಸನು–ಸಮೃದ್ಧ, ಆಡುಂಬೊಲ–ಆಟದ ಬಯಲು, ಇಹಲೋಕ–ಭೂಮಿಯ ಮೇಲಿನ ಬದುಕು, ತ್ಯಜಿಸು–ಬಿಟ್ಟುಬಿಡು, ಹೊಣೆಗಾರಿಕೆ–ಜವಾಬ್ದಾರಿ, ಹೆಗಲೆಣೆ–ನೆರವು; ಸಹಾಯ, ಮಜಲು–ಹಂತ, ಸ್ಮರಣಾರ್ಹ–ನೆನಪಿಟ್ಟುಕೊಳ್ಳಲು ಯೋಗ್ಯವಾದ, ಅಗಣಿತ–ಲೆಕ್ಕವಿಲ್ಲದಷ್ಟು.

## ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:**

೧. ಡಾ. ರಾಜಕುಮಾರ್ ಅವರು ಜನಿಸಿದ್ದು ಯಾವಾಗ?

೨. ರಾಜಕುಮಾರರ ಹುಟ್ಟೂರು ಯಾವುದು?

೩. ರಾಜಕುಮಾರ್ ಅವರ ತಂದೆ-ತಾಯಿಯ ಹೆಸರೇನು?

೪. ಗುಬ್ಬಿ ವೀರಣ್ಣನವರ ಕಂಪನಿ ಹೆಸರೇನು?

೫. ರಾಜಕುಮಾರರು ಮೊದಲು ನಾಯಕನಟರಾದ ಸಿನಿಮಾ ಯಾವುದು?

೬. ರಾಜಕುಮಾರ್ ಅವರ ಶ್ರೀಮತಿಯವರ ಹೆಸರೇನು?

೭. ೧೯೯೨ರಲ್ಲಿ ಕರ್ನಾಟಕ ಸರ್ಕಾರವು ರಾಜಕುಮಾರರಿಗೆ ನೀಡಿದ ಪ್ರಶಸ್ತಿ ಯಾವುದು?

**ಆ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:**

೧. ಊರಿನ ಜನರು ಮುತ್ತುರಾಜ ಜನಿಸಿದಾಗ ಏಕೆ ಸಂಭ್ರಮಪಟ್ಟರು?

೨. 'ಮುತ್ತುರಾಜ' ಎಂಬ ಹೆಸರಿಡಲು ಕಾರಣವೇನು?

೩. ಬಾಲ್ಯದಲ್ಲಿ ಮುತ್ತುರಾಜನಿಗೆ ಒದಗಿದ ಅನುಭವಗಳಾವುವು?

೪. ರಂಗಭೂಮಿಯೊಂದಿಗೆ ರಾಜಕುಮಾರರ ಬಾಂಧವ್ಯ ಯಾವ ಬಗೆಯದು?

೫. ರಾಜಕುಮಾರರಿಗೆ ಯಾವ ಯಾವ ಗೌರವ ಪುರಸ್ಕಾರ ಲಭಿಸಿವೆ?

೬. ಅಭಿಮಾನಿಗಳು ರಾಜಕುಮಾರರಿಗೆ ನೀಡಿರುವ ಬಿರುದುಗಳನ್ನು ಹೆಸರಿಸಿ.

©KTBS Not to be republished

**ಇ. ಕೆಳಗಿನ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ:**

೧. ರಾಜಕುಮಾರ್ ಅವರ ಬಾಲ್ಯ ಜೀವನ ಹೇಗಿತ್ತು?

೨. ಭಕ್ತಿ ಪ್ರಧಾನ ಚಿತ್ರಗಳಲ್ಲಿ ರಾಜಕುಮಾರ್ ನಿರ್ವಹಿಸಿದ ಪಾತ್ರಗಳಾವುವು?

೩. ಗಾಯನಕ್ಷೇತ್ರಕ್ಕೆ ರಾಜಕುಮಾರರ ಸೇವೆಯನ್ನು ವಿವರಿಸಿ.

೪. ರಾಜಕುಮಾರ್ ಅವರು ಕನ್ನಡಿಗರಲ್ಲಿ ಮನೆಮಾತಾಗಿರುವುದರ ವೈಶಿಷ್ಟ್ಯವನ್ನು ತಿಳಿಸಿ.

**ಈ. ಸಂದರ್ಭ ಸೂಚಿಸಿ:**

೧. ಇಳೆಗೆ ಮಳೆಯನ್ನು ಕರೆತಂದ ಕಂದ.

೨. ಅಪರೂಪಕ್ಕೆ ಮೈಸೂರಿನ ದರ್ಶನವೂ ಆಗುತ್ತಿತ್ತು.

೩. ಮುತ್ತುರಾಜನ ಹೆಸರನ್ನು 'ರಾಜಕುಮಾರ್' ಎಂದು ಬದಲಾಯಿಸಿದರು.

## ಭಾಷಾ ಅಭ್ಯಾಸ

### ಅ. ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿರಿ.

೧. ರಾಜಕುಮಾರ್ ಅವರಿಗೆ ತಂದೆ ತಾಯಿ ________ ಎಂದು ನಾಮಕರಣ ಮಾಡಿದ್ದರು.

೨. ___________ ಯು ಮುತ್ತುರಾಜನ ಮೊದಲ ಆಡುಂಬೊಲ.

೩. ರಾಜಕುಮಾರ್ ನಾಯಕನಟರಾಗಿ ಅಭಿನಯಿಸಿದ ಮೊದಲ ಚಿತ್ರ ___________

೪. _________ ಚಿತ್ರದ ಗಾಯನಕ್ಕೆ ರಾಜಕುಮಾರ್ ಅವರಿಗೆ ರಾಷ್ಟ್ರಪ್ರಶಸ್ತಿ ಲಭಿಸಿತು.

೫. ರಾಜಕುಮಾರ್ ಅವರಿಗೆ 'ಕರ್ನಾಟಕ ರತ್ನ' ಪುರಸ್ಕಾರ ದೊರೆತದ್ದು ______ರಲ್ಲಿ.

### ಆ. ಹೊಂದಿಸಿ ಬರೆಯಿರಿ.

| 'ಅ' | 'ಬ' |
|---|---|
| ೧. ಮೊದಲ ಹೆಸರು | ಜೀವನಚೈತ್ರ |
| ೨. ಮೊದಲ ಚಿತ್ರ | ರಾಜಕುಮಾರ್ |
| ೩. ರಾಷ್ಟ್ರಪ್ರಶಸ್ತಿ | ಸಂಪತ್ತಿಗೆ ಸವಾಲ್ |
| ೪. ಬದಲಾದ ಹೆಸರು | ಮುತ್ತುರಾಜ |
| | ಬೇಡರ ಕಣ್ಣಪ್ಪ |

## ಚಟುವಟಿಕೆ:

೧. ಡಾ.ರಾಜಕುಮಾರ್ ಅವರ ಸಮಗ್ರ ಜೀವನ ಚರಿತ್ರೆಯ ಸಂಪುಟಗಳನ್ನು ಗ್ರಂಥಾಲಯದಲ್ಲಿ ಪಡೆದು ಓದಿ.

೨. ರಾಜಕುಮಾರ್ ಅಭಿನಯದ ನಿಮ್ಮ ನೆಚ್ಚಿನ ಚಲನಚಿತ್ರದ ಬಗ್ಗೆ ಕಿರು ಪ್ರಬಂಧ ರಚಿಸಿ.

* * * * *

© KTBS Not to be republished

# ೫. ಧನ್ಯವಾದ ಹೇಳಿದ ಕೊಕ್ಕರೆ

I3U9P4

– ಡಾ. ಅನುಪಮಾ ನಿರಂಜನ

**ಪ್ರವೇಶ :** 'ಬದುಕು, ಬದುಕಲು ಬಿಡು' ಇದು ಪ್ರಕೃತಿ ಧರ್ಮ. ಪರೋಪಕಾರ, ಸಹಕಾರ, ಪ್ರೀತಿ, ಕರುಣೆ ಮಾನವೀಯತೆಯೊಂದಿಗೆ ಮಾನವ ಬದುಕಿದರೆ, ಬದುಕು ಅರ್ಥಪೂರ್ಣವಾಗುತ್ತದೆ. ತಾಳ್ಮೆ, ಸಹನೆಗಳಿಂದ ಬದುಕನ್ನು ಸ್ವೀಕರಿಸಬೇಕು. ಒಳಿತೆಂಬುದು ದೊರೆಯಬೇಕಾದರೆ ಅದಕ್ಕಾಗಿ ಕಾಯಲೇಬೇಕು. ನಿಸ್ವಾರ್ಥತೆಯಿಂದ ಬದುಕಿದರೆ ನಮ್ಮ ಬದುಕು ಹಸನಾಗುತ್ತದೆ. ನಮ್ಮ ಒಳ್ಳೆಯತನ ನಮ್ಮನ್ನು ಕಾಪಾಡುತ್ತದೆ. ಅಂತಹ ತತ್ವಗಳನ್ನು ಬಿಂಬಿಸುವ ರಂಜನೀಯ ಕಥೆ ಇಲ್ಲಿದೆ.

ಒಂದೂರಿನಲ್ಲಿ ಬಡ ರೈತ ದಂಪತಿಗಳು ಇದ್ದರು. ಅವರಿಗೆ ಹರಿ ಎಂಬ ಮಗನು ಇದ್ದನು. ಅವನು ಸದ್ಗುಣವುಳ್ಳವನು ಮತ್ತು ಕರುಣಾಳುವೂ ಆಗಿದ್ದನು. ಒಂದು ದಿನ ಅವನು ಕೊಳವೊಂದರ ಬಳಿ ಹೋಗುತ್ತಿದ್ದಾಗ ಹುಲ್ಲಿನ ಮೇಲೆ ಬಿಳಿ ಕೊಕ್ಕರೆಯೊಂದು ಬಿದ್ದಿತ್ತು. ಅವನು ಕನಿಕರದಿಂದ ಬಾಗಿ ನೋಡಿದಾಗ ಕೊಕ್ಕರೆಯ ಮೈಯೊಳಗೆ ಚುಚ್ಚಿದ್ದ ಬಾಣವೊಂದು ಕಂಡಿತು. ಹರಿಯು ಮೆಲ್ಲನೆ ಆ ಬಾಣವನ್ನು ಹೊರತೆಗೆದನು. ಗಾಯಕ್ಕೆ ತನಗೆ ತಿಳಿದ ರಸಮೂಲಿಕೆಯನ್ನು ಹಾಕಿದನು. ಕೊಕ್ಕರೆಯ ನೋವು ಕಡಿಮೆಯಾಯಿತು. ಅದು ಆತನಿಗೆ ಮೂರು ಬಾರಿ ತಲೆಬಾಗಿ ನಮಸ್ಕರಿಸಿ ಹೊರಟು ಹೋಯಿತು.


ದಿನಗಳು ಕಳೆದವು ಹರಿಯು ಕೊಕ್ಕರೆಯ ವಿಷಯವನ್ನೇ ಮರೆತುಬಿಟ್ಟನು. ಒಂದು ದಿನ ಸುಂದರಿಯಾದ ಹುಡುಗಿಯೊಬ್ಬಳು ಅವನಲ್ಲಿಗೆ ಬಂದು "ನನಗೆ ತಂದೆ-ತಾಯಿ ಇಲ್ಲ. ಮುಂದಿನ ಊರಿನಲ್ಲಿ ನನ್ನ ಚಿಕ್ಕಪ್ಪನು ಇದ್ದಾನಂತೆ, ಅವನನ್ನು ಹುಡುಕಿಕೊಂಡು ಹೊರಟಿದ್ದೇನೆ. ಇವತ್ತು ರಾತ್ರಿ ನಿಮ್ಮ ಮನೆಯಲ್ಲಿ ಇರಲು ಜಾಗ ಕೊಡ್ತೀರಾ?" ಎಂದು ಕೇಳಿದಳು.

ಹುಡುಗಿ ರಾತ್ರಿಯ ಅಡುಗೆ ಮಾಡಲು ರೈತನ ವೃದ್ಧ ಹೆಂಡತಿಗೆ ನೆರವಾದಳು. ಮನೆಯನ್ನು ಗುಡಿಸಿ, ಸಾರಿಸಿ ಚೊಕ್ಕಟ ಮಾಡಿದಳು. ಮರುದಿನ ಆ ವೃದ್ಧ ದಂಪತಿಗಳು "ಹುಡುಗಿ, ನೀನು ನಮ್ಮಲ್ಲೇ ಇದ್ದುಬಿಡು, ನಮ್ಮ ಮಗಳ ಹಾಗೆ ನೋಡ್ಕೋತೇವೆ" ಎಂದರು. ಹುಡುಗಿಯು ಒಪ್ಪಿ ಅಲ್ಲಿಯೇ ಉಳಿದಳು. ಹರಿಗೆ ಅವಳಲ್ಲಿ ಪ್ರೀತಿ ಹುಟ್ಟಿತು.

ಈ ವರ್ಷ ಮಳೆ ಬಾರದುದರಿಂದ ಕ್ಷಾಮ ಬಂತು. ರೈತ ದಂಪತಿಗಳು ಕಷ್ಟದಲ್ಲಿ ತೊಳಲಾಡುತ್ತಿದ್ದಾಗ ಹುಡುಗಿ ಅಂದಳು "ಮೂರು ದಿವಸ ನನ್ನನ್ನು ಒಂದು ಕೊಠಡಿಯಲ್ಲಿ ಬಿಡಿ, ಪೀತಾಂಬರ ನೇಯ್ದು ಕೊಡ್ತೀನಿ. ನೀವ್ಯಾರೂ ಒಳಗೆ ಬರಬಾರದು, ಊಟವನ್ನು ಬಾಗಿಲ ಬಳಿಯಿಟ್ಟರೆ ರಾತ್ರಿಯ ಹೊತ್ತು ಬಂದು ತಿನ್ಕೋತ್ತೇನೆ".

ಅಂತಯೇ ಹುಡುಗಿ ಕೊಠಡಿಯೊಳಗೆ ಹೋಗಿ ಬಾಗಿಲು ಹಾಕಿಕೊಂಡಳು. ಅವಳ ಆದೇಶದ ಪ್ರಕಾರ ಯಾರೂ ಒಳಗೆ ಹೋಗಲಿಲ್ಲ. ಪ್ರತಿದಿನ ರಾತ್ರಿ ಬಾಗಿಲ ಬಳಿ ಅನ್ನಸಾರುಗಳ ತಟ್ಟೆಯನ್ನು ಇಡುತ್ತಿದ್ದ ಹರಿ, ಬೆಳಗೆದ್ದು ಖಾಲಿಯಾದ ತಟ್ಟೆಯನ್ನು ತೆಗೆದುಕೊಂಡುಹೋಗುತ್ತಿದ್ದನು.

©KTBS Not to be republished



ಮೂರು ದಿನಗಳ ಬಳಿಕ ಹುಡುಗಿ ಹೊರಬಂದಾಗ ಅವಳ ಕೈಯಲ್ಲಿ ಪೀತಾಂಬರವಿತ್ತು. "ಇದನ್ನು ಶ್ರೀಮಂತ ವರ್ತಕರಿಗೆ ಮಾರಿ ಬನ್ನಿ" ಎಂದಳು ಹುಡುಗಿ. ಹರಿ ಅದನ್ನು ಮಾರಿ ಬಂದನು. ಪೀತಾಂಬರಕ್ಕೆ ನೂರಾರುವರಹಗಳು ಸಿಕ್ಕಿದವು. ಒಂದು ವರ್ಷ ಅವರೆಲ್ಲ ಸುಖವಾಗಿದ್ದರು.

ಮರುವರ್ಷವೂ ಕ್ಷಾಮ ಬಂತು ಮತ್ತೆ ಹುಡುಗಿ, "ಮೂರು ದಿನ ಯಾರೂ ಒಳಗೆ ಬರಬೇಡಿ" ಎಂದು ಹೇಳಿ ಕೊಠಡಿಯ ಬಾಗಿಲು ಹಾಕಿಕೊಂಡಳು. ಒಂದು ದಿನ ಕಳೆಯಿತು, ಎರಡು ದಿನ ಕಳೆಯಿತು. ಹರಿ ಅವಳನ್ನು ನೋಡದೆ ಇರಲಾರದಾದನು. ಕೊಠಡಿಯೊಳಗೆ ಹುಡುಗಿಯನ್ನು ಕಂಡು ಅವಳಿಗೆ ತನ್ನ ಪ್ರೇಮದ ವಿಷಯವನ್ನು ಹೇಳಬೇಕು ಎಂದುಕೊಂಡನು. ಬಾಗಿಲನು ನೂಕಿ ಒಳಗೆ ಹೋದನು. ಆಶ್ಚರ್ಯ! ಅಲ್ಲಿ ಹುಡುಗಿ ಇರಲಿಲ್ಲ, ಚಿನ್ನ ಬೆಳ್ಳಿ ದಾರಗಳನ್ನು ಕೂಡಿಸಿ ಕೊಕ್ಕರೆಯೊಂದು ಪೀತಾಂಬರವನ್ನು ನೇಯುತ್ತಿತ್ತು. ಅದು ತಾನು ಕಾಪಾಡಿದ ಹಕ್ಕಿ ಎಂಬುದರಲ್ಲಿ ಹರಿಗೆ ಸಂಶಯವಿರಲಿಲ್ಲ. ಕೊಕ್ಕರೆ ಎಂದಿತು "ನಾನು ಬೇಡ ಎಂದು ಹೇಳಿದರೂ ನೀನ್ಯಾಕೆ ಒಳಗೆ ಬಂದೆ? ಈಗ ಎಲ್ಲಾ ಹಾಳಾಯಿತ್ತಲ್ಲಾ!" ಹರಿ ತಲೆತಗ್ಗಿಸಿ ನಿಂತನು. "ನಿಜ ಹುಡುಗಿಯಾಗಿದ್ದ ನಾನು ನೀನು ಕಾಪಾಡಿದ ಕೊಕ್ಕರೆಯೇ! ನಿನಗೆ ಉಪಕಾರ ಮಾಡಬೇಕೆಂದು ನಾನು ಹುಡುಗಿಯಾಗಿದ್ದೆ, ನೀನೀಗ ಒಳ ಬರದಿದ್ದರೆ ಪೀತಾಂಬರದೊಂದಿಗೆ ನಾನು ಹುಡುಗಿಯಾಗಿ ಹೊರಬಂದು ನಿನ್ನ ಹೆಂಡತಿಯಾಗ್ತಿದ್ದೆ, ನೀನು ಕೊಟ್ಟ ಮಾತಿಗೆ ತಪ್ಪಿದ್ದರಿಂದ ಇನ್ನು ನಾನು ಹುಡುಗಿಯಾಗುವಂತಿಲ್ಲ. ಹೋಗು, ಈಗ ಮುಗಿಯುತ್ತ ಬಂದಿರೋ ಪೀತಾಂಬರ ಮಾರು, ನಿಮ್ಮ ಜೀವಮಾನವಿಡಿ ಸಾಕಾಗುವಷ್ಟು ಹಣ ಸಿಗ್ತದೆ" ಎನ್ನುತ್ತಾ ಕೊಕ್ಕರೆ ಹಾರಿಹೋಯಿತು.

**ಕ್ಷೇತ್ರ : ಮಾತನಾಡುವುದು**
**ಸಾಮರ್ಥ್ಯ : ಕೊಟ್ಟಿರುವ ವಿಷಯ ಕುರಿತು ನಿರರ್ಗಳವಾಗಿ ಚರ್ಚಿಸುವುದು.**

**ಕವಿ ಕೃತಿ ಪರಿಚಯ:**



**ಡಾ. ಅನುಪಮಾ ನಿರಂಜನ :** ಅನುಪಮಾ ನಿರಂಜನ ಅವರು **೧೯೩೪ರ ಮೇ ೧೭ರಂದು ತೀರ್ಥಹಳ್ಳಿ**ಯಲ್ಲಿ ಜನಿಸಿದರು. ಅನುಪಮಾ ಅವರಿಗೆ ತಂದೆ-ತಾಯಿಕೊಟ್ಟ ಹೆಸರು ವೆಂಕಟಲಕ್ಷ್ಮಿ. ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವುದರ ಜೊತೆಜೊತೆಗೇ ಅವರು ಕನ್ನಡದಲ್ಲಿ ಸಾಹಿತ್ಯರಚನೆಯನ್ನು ಮಾಡಿದರು. ಅವರೊಬ್ಬ ಜನಪ್ರಿಯ ಲೇಖಕಿ. **'ಕೇಳು ಕಿಶೋರಿ' ಹಾಗೂ 'ತಾಯಿ ಮಗು' 'ಅನಂತಗೀತ', 'ಶ್ವೇತಾಂಬರಿ', 'ಹಿಮದ ಹೂ', 'ಆಳ', 'ದಿಟ್ಟೆ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **ಸಾಹಿತ್ಯ ಅಕಾಡೆಮಿ ಪುರಸ್ಕಾರ, ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ, ಕಾಸರಗೋಡು ಮಹಿಳಾ ಸಮ್ಮೇಳನದ ಅಧ್ಯಕ್ಷತೆ, ಮುಂಬಯಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ** ಮುಂತಾದ ಪುರಸ್ಕಾರಗಳನ್ನು ನೀಡಿ ಗೌರವಿಸಲಾಗಿದೆ.

## ಪದಗಳ ಅರ್ಥ

ರಸಮೂಲಿಕೆ-ಗಿಡಮೂಲಿಕೆ, ಔಷಧಿ; ಕೊಳ-ಸರೋವರ; ನೆರವು-ಸಹಾಯ; ವೃದ್ಧ-ವಯಸ್ಸಾದ; ಕ್ಷಾಮ-ಬರಗಾಲ; ಆದೇಶ-ಆಜ್ಞೆ; ವರಹ-ಚಿನ್ನದ ನಾಣ್ಯ; ನೇಯುವುದು-ತಯಾರಿಸು, ಹೆಣೆಯುವುದು; ಕರುಣಾಳು-ಕನಿಕರವುಳ್ಳವನು; ಪೀತಾಂಬರ-ರೇಷ್ಮೆಬಟ್ಟೆ;

©KTBS Not to be republished

## ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಹರಿಯ ಗುಣ ಎಂತಹುದು?

೨. ಕೊಕ್ಕರೆಗೆ ಏನಾಗಿತ್ತು?

೩. ಹರಿಯು ಕೊಕ್ಕರೆಯನ್ನು ಹೇಗೆ ಉಪಚರಿಸಿದನು?

೪. ವೃದ್ಧ ತಂದೆ ತಾಯಿಗಳು ಹುಡುಗಿಗೆ ಏನು ಹೇಳಿದರು?

೫. ಹರಿಗೆ ಪೀತಾಂಬರ ಮಾರಿದಾಗ ಬಂದ ಹಣವೆಷ್ಟು?

**ಆ. ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯದಲ್ಲಿ ಉತ್ತರಿಸಿ.**

೧. ಹುಡುಗಿ ಕೊಠಡಿಯೊಳಗೆ ಏನು ಮಾಡುತ್ತಿದ್ದಳು?

೨. ಹರಿಯು ಕೊಠಡಿಯೊಳಗೆ ಹೋದಾಗ ಉಂಟಾದ ಆಶ್ಚರ್ಯವೇನು?

**ಇ. ಈ ಮಾತುಗಳ ಸಂದರ್ಭವನ್ನು ವಿವರಿಸಿರಿ.**

೧. "ನಮ್ಮ ಮಗಳ ಹಾಗೆ ನೋಡ್ಕೋತೇವೆ."

೨. "ಶ್ರೀಮಂತ ವರ್ತಕರಿಗೆ ಮಾರಿ ಬನ್ನಿ."

೩. "ನಾನು ನೀನು ಕಾಪಾಡಿದ ಕೊಕ್ಕರೆಯೇ!"

## ವ್ಯಾಕರಣ ಮಾಹಿತಿ

### ಅ. ಸರ್ವನಾಮಗಳು :

**ಕೆಳಗಿನ ವಾಕ್ಯಗಳನ್ನು ಗಮನಿಸಿ ಓದಿರಿ**

**ಪುಟ್ಟಿಗೆ ರೆಕ್ಕೆಗಳು ಬಂದವು; ಅವಳು ಮೇಲಕ್ಕೆ ಹಾರಿದಳು.**

**ಶಂತನು ಒಬ್ಬ ರಾಜ; ಆತನು ಬೇಟೆಗಾಗಿ ಕಾಡಿಗೆ ಹೋಗುತ್ತಿದ್ದನು.**

ಮೇಲಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಗಮನಿಸಿರಿ. ಮೊದಲನೆಯ ವಾಕ್ಯದಲ್ಲಿ 'ಅವಳು' ಎಂಬ ಪದವು 'ಪುಟ್ಟಿ' ಎಂಬ ಪದಕ್ಕೆ ಬದಲಾಗಿ ಬಳಕೆಯಾಗಿದೆ. ಎರಡನೆಯ ವಾಕ್ಯದಲ್ಲಿ 'ಆತನು' ಎಂಬ ಪದವು 'ಶಂತನು' ಎಂಬ ಪದಕ್ಕೆ ಬದಲಾಗಿ ಬಳಕೆಯಾಗಿದೆ. ಪುಟ್ಟಿ ಮತ್ತು ಶಂತನು ಎಂಬುವು ನಾಮಪದಗಳಾಗಿವೆ. 'ಅವಳು', 'ಆತನು' ಎಂಬ ಪದಗಳು ನಾಮಪದಗಳ ಬದಲಿಗೆ ಬಳಕೆಯಾಗಿವೆ. ಹೀಗೆ ನಾಮಪದಗಳ ಬದಲಾಗಿ ಬಳಸುವ ಪದಗಳು 'ಸರ್ವನಾಮಗಳು.'

ಅದು, ಇದು, ಅವಳು, ಇವನು, ನಾನು, ನೀನು, ನೀವು, ನಾವು, ತಾವು, ಅವರು, ಇವರು ಇತ್ಯಾದಿಗಳು ಸರ್ವನಾಮಗಳಾಗಿವೆ. ನಾಮಪದಗಳನ್ನು ಪದೇಪದೇ ಬಳಸುವುದರ ಬದಲಿಗೆ ಇವುಗಳನ್ನು ಬಳಸುತ್ತಾರೆ.

©KTBS Not to be republished

**ಇನ್ನೂ ಕೆಲವು ಉದಾಹರಣೆಗಳನ್ನು ಗಮನಿಸೋಣ**

- ಗುರುಗಳು ಶಾಲೆಗೆ ಹೊರಟರು. ಅವರು ಕೈಯಲ್ಲಿ ಪುಸ್ತಕ ಹಿಡಿದಿದ್ದರು.
- ಮೋತಿ ಜಾನ್ಸನ್‌ನ ನಾಯಿ. ಅದು ಆತನಿಗೆ ಬಲು ಪ್ರಿಯ.
- ಯಾಸ್ಮಿನ್ ಮತ್ತು ಉನ್ನತಿ ಇಬ್ಬರು ಗೆಳತಿಯರು. ಇವರು ಒಮ್ಮೆ ಪ್ರವಾಸ ಹೊರಟರು.

ಮೇಲಿನ ವಾಕ್ಯಗಳಲ್ಲಿ ಅವರು, ಅದು, ಇವರು ಎಂಬ ಪದಗಳು ನಾಮಪದದ ಬದಲಾಗಿ ಅದರ ಸ್ಥಾನದಲ್ಲಿದ್ದು ನಾಮಪದವನ್ನು ಸೂಚಿಸುತ್ತವೆ. ಇಂತಹವುಗಳನ್ನು ಸರ್ವನಾಮಗಳು ಎನ್ನುತ್ತಾರೆ.

**ತತ್ಸಮ-ತದ್ಭವ**

ತತ್ಸಮ : **ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ವಿಕಾರ ಹೊಂದದೆ ಬಳಸಲ್ಪಡುವ ಶಬ್ದಗಳನ್ನು 'ತತ್ಸಮ'ಗಳೆಂದು ಕರೆಯುವರು. ತತ್+ಸಮ ಎಂದರೆ ಅದಕ್ಕೆ (ಸಂಸ್ಕೃತ ಪದಕ್ಕೆ) ಸಮಾನವಾದುದು ಎಂದು ಅರ್ಥ.**

ಉದಾ: **ಶ್ರೀ, ಸೂರ್ಯ, ತ್ಯಾಗ, ವಿಜ್ಞಾನ, ಪುಸ್ತಕ, ಸರಸ್ವತಿ.**

**ತದ್ಭವ :** ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಅಥವಾ ಪೂರ್ಣವಾಗಿ ಬದಲಾವಣೆ ಹೊಂದಿ ಬರುವ ಪದಗಳನ್ನು 'ತದ್ಭವ'ಗಳೆನ್ನುವರು.

**ಉದಾ: ಸಜ್ಜೆ, ಲಕುಮಿ, ಹದಿಬದೆ, ಸಿರಿ, ಚಾಗ, ಹೊತ್ತಗೆ.**

**ಇನ್ನೂ ಕೆಲವು ತತ್ಸಮ, ತದ್ಭವ ಪದಗಳನ್ನು ನೋಡೋಣ.**

| ತತ್ಸಮ | ತದ್ಭವ | | ತತ್ಸಮ | ತದ್ಭವ |
|---|---|---|---|---|
| ಆರ್ಯ | ಅಜ್ಜ | | ನಿತ್ಯ | ನಿಚ್ಚ |
| ಕಾರ್ಯ | ಕಜ್ಜ | | ಪದ್ಮ | ಪದುಮ |
| ಚಂದ್ರ | ಚಂದಿರ | | ಭಕ್ತಿ | ಬಕುತಿ |
| ವಿಜ್ಞಾನ | ಬಿನ್ನಣ | | ವೀಥಿ | ಬೀದಿ |

* * * * *

©KTBS Not to be republished

# ೬. ಸಿದ್ಧಾರೂಢರ ಜಾತ್ರೆ

Q7A8C1

– ಸಮಿತಿ ರಚನೆ

**ಪ್ರವೇಶ :** ಭಾರತವು ನೂರಾರು ಮತಮಾನ್ಯಗಳಿಂದ ತುಂಬಿರುವ ದೇಶ. ಇಲ್ಲಿ ಪ್ರತಿ ಧಾರ್ಮಿಕ ಸಂಸ್ಥೆಯೂ ತನ್ನ ಆಚರಣೆ, ಸಂಪ್ರದಾಯ, ಸಮಾಜಸೇವೆ ಇತ್ಯಾದಿ ಕೆಲಸಗಳಿಂದ ವಿಶಿಷ್ಟವಾಗಿ ನಿಲ್ಲುತ್ತದೆ. ಭಾರತವು ಜಾತ್ರೆಗಳ ನಾಡು ಕೂಡ ಹೌದು. ಜಾತ್ರೆ ಎಂದರೆ ಸಂಭ್ರಮ. ಇಡೀ ಸಮಾಜವು ಒಗ್ಗಟ್ಟಿನಿಂದ ಜೊತೆಯಾಗುವ, ಪರಸ್ಪರ ಸೌಹಾರ್ದ ಭಾವನೆಯನ್ನು ಗಟ್ಟಿಪಡಿಸಿಕೊಳ್ಳುವ ಕೆಲಸವು ಜಾತ್ರೆಯಿಂದಾಗುತ್ತದೆ. ಜಾತ್ರೆಗಳು ಸಮಾಜವನ್ನು ಒಗ್ಗೂಡಿಸುತ್ತವೆ. ನಮ್ಮ ಸಂಸ್ಕೃತಿಯ ಹಿರಿಮೆಯನ್ನು ಎತ್ತಿತೋರುತ್ತವೆ. ನೂರಾರು ಕಸಬುದಾರರಿಗೆ ಕೆಲಸ ನೀಡುತ್ತವೆ. ಅವರ ಹೊಟ್ಟೆಹೊರೆಯುತ್ತವೆ. ಚಿಕ್ಕಮಕ್ಕಳಿಗೆ ಜಾತ್ರೆಯ ಮೂಲಕ ಧರ್ಮ, ಸಂಸ್ಕೃತಿಗಳ, ಆಚರಣೆಗಳ ಮಹತ್ವದ ಪರಿಚಯ ಮತ್ತು ಅರಿವು ಮೂಡುತ್ತದೆ.

©KTBS Not to be republished

ಧಾರವಾಡ ಜಿಲ್ಲೆಯಲ್ಲಿ ಹುಬ್ಬಳ್ಳಿ ಒಂದು ದೊಡ್ಡ ಪಟ್ಟಣ. ಅದು ವ್ಯಾಪಾರಕ್ಕಾಗಿ ಹೆಸರಾಗಿದೆ. ಅದು ವಿದ್ಯಾಕೇಂದ್ರವೂ ಹೌದು. ಅಲ್ಲಿ ದೊಡ್ಡ ಮಠಗಳು ಇವೆ. ಅವುಗಳಲ್ಲಿ ಸಿದ್ಧಾರೂಢಸ್ವಾಮಿಯ ಮಠವೂ ಒಂದು. ಪ್ರತಿ ವರುಷ ಶಿವರಾತ್ರಿಯ ದಿನ ಅಲ್ಲಿ ಜಾತ್ರೆ ಕೂಡುತ್ತದೆ. ಜಾತ್ರೆಯ ದಿನ ಎಲ್ಲಿ ನೋಡಿದರೂ ಜನರ ಗದ್ದಲವೇ ಗದ್ದಲ. ರೈಲುನಿಲ್ದಾಣದಲ್ಲಿ, ಬಸ್ ನಿಲ್ದಾಣದಲ್ಲಿ ಜನಸಾಗರ. ಸುತ್ತಲಿನ ಹಳ್ಳಿಗಳಿಂದ ಮಾತ್ರವಲ್ಲ, ದೂರದೂರದ ಊರುಗಳಿಂದಲೂ ಸಿದ್ಧಾರೂಢಸ್ವಾಮಿಯ ಭಕ್ತರು ಅಂದು ಜಾತ್ರೆಗೆಂದು ಜಮಾಯಿಸುವರು.



ನೆರೆಯೂರಾದ ಅದರಗುಂಜಿಯ ಶಾಲೆಯ ಮಕ್ಕಳು ಈ ಜಾತ್ರೆಯನ್ನು ನೋಡಲು ಹೊರಟರು. ತಮಗೆ ಬೇಕಾದ ಸಾಮಾನುಗಳನ್ನು ತಮ್ಮ ಬ್ಯಾಗುಗಳಲ್ಲಿ ಹಾಕಿಕೊಂಡು ಸಜ್ಜಾದರು. ಸದಾನಂದನು ಆರನೆಯ ತರಗತಿಯ ಹಿರೇಮಣಿ. ಅವನು ತನ್ನ ತರಗತಿಯ ಬಾಲಕರನ್ನು ಕರೆದುಕೊಂಡು ಜಾತ್ರೆಗೆ ನಡೆದನು. ಗುರುಗಳು ಅವರನ್ನು ಹಿಂಬಾಲಿಸಿದರು. ದಾರಿಯುದ್ದಕ್ಕೂ ಹಾಡುತ್ತ ಅವರು ಶಿಸ್ತಿನಿಂದ ಸಾಗಿದರು. ಆಗಾಗ ಹುಡುಗರು ಒಂದಿಲ್ಲೊಂದು ಪ್ರಶ್ನೆಯನ್ನು ಗುರುಗಳಲ್ಲಿ ಕೇಳುವುದೂ ಆ ಪ್ರಶ್ನೆಗಳಿಗೆ ಗುರುಗಳು ಉತ್ತರಿಸುವುದೂ ನಡೆದಿತ್ತು. ತರಗತಿಯ ಚೂಟಿ ಹುಡುಗ ರುಸ್ತುಮ್, "ಗುರುಗಳೆ, ಈ ಸಿದ್ಧಾರೂಢ ಮಠದ ಇತಿಹಾಸ ಏನು, ಇದು ಎಷ್ಟು ವರ್ಷಗಳಿಂದ ಇದೆ?" ಎಂದು ಕೇಳಿದನು.

"ಸಿದ್ಧಾರೂಢರು ಒಬ್ಬರು ಮಹಾನ್ ಸಂತರು. ಅವರು ಮೂಲತಃ ಬೀದರ್ ಜಿಲ್ಲೆಯ ಚಳಕಾಪುರದವರು. ೧೮೩೬ರಲ್ಲಿ ಹುಟ್ಟಿದರು. ಚಿಕ್ಕಂದಿನಲ್ಲಿಯೇ ಅವರಿಗೆ ಜೀವನದ ಐಹಿಕ ಸುಖಭೋಗಗಳಲ್ಲಿ ವಿರಕ್ತಿ ಬಂದು ಸಂನ್ಯಾಸವನ್ನು ಸ್ವೀಕಾರ ಮಾಡಿದರು. ಮನೆ ಬಿಟ್ಟು ಲೋಕಸಂಚಾರಿಯಾದರು. ಹಾಗೆ ಊರಿಂದೂರಿಗೆ ಸಂಚರಿಸುತ್ತಿದ್ದ ಸ್ವಾಮಿಗಳು ತನ್ನ ೪೧ನೆಯ ವಯಸ್ಸಿನಲ್ಲಿ ಹುಬ್ಬಳ್ಳಿಯಲ್ಲಿ ನೆಲೆ ನಿಂತರು. ಇದನ್ನೇ ತನ್ನ ಕರ್ಮಭೂಮಿಯನ್ನಾಗಿ ಆರಿಸಿಕೊಂಡರು. ನಂಬಿ ಬಂದವರಿಗೆ ಅಭಯ ನೀಡಿದರು. ದೇವರ ಭಕ್ತಿಯಿಂದ ಸಕಲ ಕಷ್ಟಗಳೂ ದೂರಾಗುತ್ತವೆ ಎಂಬ ಪ್ರೇರಣೆ ತುಂಬಿದರು. "ಓಂ ನಮಃ ಶಿವಾಯ" ಎಂಬ ಪಂಚಾಕ್ಷರಿ ಮಂತ್ರವನ್ನು ಜಾತಿಭೇದಗಳಿಲ್ಲದೆ ಎಲ್ಲರಿಗೂ ಸಮಾನವಾಗಿ ಬೋಧಿಸಿದರು" ಎಂದರು ಗುರುಗಳು.

"ಗುರುಗಳೇ, ಮಠ ಎಂದರೇನು? ಅದು ಏನು ಕೆಲಸ ಮಾಡುತ್ತದೆ?" ಎಂದು ಪ್ರಶ್ನಿಸಿದಳು ಹಸೀನಾ.

"ಹಸೀನಾ, ಮಠ ಎಂಬುದು ಹಿಂದೂ ಧರ್ಮದಲ್ಲಿರುವ ಒಂದು ಸಾಮಾಜಿಕ ವ್ಯವಸ್ಥೆ. ಸಮಾಜದ ಮಂದಿಗೆ ಕಷ್ಟಕಾಲದಲ್ಲಿ ಒಂದು ಭರವಸೆ ಬೇಕಾಗುತ್ತದೆ. ತಮ್ಮ ಗೊಂದಲಗಳಿಗೆ ಪರಿಹಾರ ಕೊಡುವ ಒಬ್ಬರು ಹಿರಿಯ ವ್ಯಕ್ತಿ ಬೇಕಾಗುತ್ತಾರೆ. ಅಥವಾ ಕಷ್ಟಕಾರ್ಪಣ್ಯಗಳು ಏನೂ ಇಲ್ಲದಿದ್ದರೂ ಒಟ್ಟಾರೆಯಾಗಿ ಮಾನಸಿಕ ನೆಮ್ಮದಿಗಾಗಿ ಮನುಷ್ಯ ಒಂದಿಲ್ಲೊಂದು ವ್ಯವಸ್ಥೆಯನ್ನು ಹುಡುಕುತ್ತಲೇ ಇರುತ್ತಾನೆ ಅಲ್ಲವೆ? ಜನರಿಗೆ ಅಂಥದೊಂದು ಭದ್ರತೆ, ಭರವಸೆ ಮೂಡಿಸುವ ಕೆಲಸ ಮಾಡುವುದೇ ಮಠಗಳು. ಸಮಾಜದಲ್ಲಿರುವ ಮಠಗಳೆಲ್ಲವೂ ಒಂದಿಲ್ಲೊಂದು ರೀತಿಯಲ್ಲಿ ಸಮಾಜಮುಖಿ ಕೆಲಸವನ್ನೇ ಮಾಡುತ್ತವೆ. ಅವು ಬಡಬಗ್ಗರಿಗೆ ಧನಸಹಾಯ ಮಾಡಬಹುದು, ವಿದ್ಯಾರ್ಥಿಗಳಿಗೆ ಊಟ-ವಸತಿ ನೀಡಬಹುದು, ದಿಕ್ಕುತೋಚದವರಿಗೆ ಮಾನಸಿಕ ನೆಮ್ಮದಿ ನೀಡುವ ಉಪದೇಶ ಮಾಡಬಹುದು, ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಬಹುದು, ಮಹಾಕಾವ್ಯಗಳನ್ನೂ, ಪುರಾಣಗಳನ್ನೂ ಜನರಿಗೆ ತಲುಪಿಸುವ ಕೆಲಸ ಮಾಡಬಹುದು, ಧರ್ಮದೊಳಗಿನ ಅನೇಕ ತತ್ತ್ವಶಾಸ್ತ್ರದ ವಿಚಾರಗಳನ್ನು ಪಂಡಿತರ ಪ್ರವಚನಗಳ ಮೂಲಕ ಜನರಿಗೆ ತಲುಪಿಸಬಹುದು. ಒಟ್ಟಾರೆಯಾಗಿ ಮಠವೆಂದರೆ ಸಮಾಜವೆಂಬ ಸಮುದ್ರದ ಕಿನಾರೆಯಲ್ಲಿ ನಿಂತ ದೀಪಸ್ತಂಭ" ಉತ್ತರಿಸಿದರು ಗುರುಗಳು.

©KTBS Not to be republished

ಈ ಎಲ್ಲ ಚರ್ಚೆ, ಸಂವಾದಗಳು ದಾರಿಯುದ್ದಕ್ಕೂ ನಡೆದುದರಿಂದ ವಿದ್ಯಾರ್ಥಿಗಳಿಗೆ ದಾರಿಯ ದಣಿವು ಎಳ್ಳಷ್ಟೂ ಅನಿಸಲಿಲ್ಲ. ಅವರೆಲ್ಲರೂ ಮಠಕ್ಕೆ ಬಂದರು.

**ಸದಾನಂದ:** ಗುರುಗಳೇ, ಮಠದ ಪಡಸಾಲೆಯಲ್ಲಿ ಬಹಳ ಜನರು ಸೇರಿದ್ದಾರೆ. ಅವರು ಭಜನೆ ಮಾಡುತ್ತಿದ್ದಾರೆ. ನಾವೂ ಒಳಗೆ ಹೋಗೋಣ.

**ಗುರುಗಳು:** ಬಾಲಕರೇ, ಎಲ್ಲಿ ನೋಡಿದರೂ ಭಜನೆ ನಡೆದಿದೆ. ಆಚೆಗೆ ಅಡುಗೆ ಮನೆಯಿದೆ. ಅಲ್ಲಿಯೂ ಭಜನೆ ನಡೆಯುತ್ತಿದೆ. ಹೊರಗಿನ ಬಯಲಲ್ಲಿ ನೋಡಿ. ಕೆಲವು ಜನರು ಅಡುಗೆಪಾತ್ರೆಗಳನ್ನು ತೊಳೆಯುತ್ತಿದ್ದಾರೆ, ಅವರೂ ಭಜನೆ ಮಾಡುತ್ತಿದ್ದಾರೆ. ಯಾರು ಯಾವ ಕೆಲಸದಲ್ಲಿ ತೊಡಗಿದ್ದರೂ ಭಜನೆ ಮಾಡುತ್ತ ಕೆಲಸ ಮಾಡುತ್ತಿದ್ದಾರೆ.

ಜಾತ್ರೆಗೆ ಬಂದ ಪರ ಊರಿನ ಜನರು ಮಠದಲ್ಲಿಯೇ ಊಟ ಮಾಡುವರು. ಅದರಗುಂಜಿಯ ಶಾಲೆಯ ಬಾಲಕರು ಮಠದಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡಿದರು. ಕೆಲವರು ನೀರು ತಂದು ಕೊಟ್ಟರು. ಕೆಲವರು ಬಂದ ಜನರಿಗೆ ಊಟ ಬಡಿಸಿದರು. ಬಳಿಕ ಮಠದಲ್ಲಿ ಊಟ ಮಾಡಿದರು. ತುಸು ಹೊತ್ತು ಮಠದ ಆವಾರದಲ್ಲಿಯೇ ವಿಶ್ರಮಿಸಿದರು.

ಮಠದ ಮುಂದೆ ಒಂದು ದೊಡ್ಡ ಮಂಟಪವನ್ನು ಹಾಕಿದ್ದರು. ತಳಿರುತೋರಣಗಳಿಂದ ಅದನ್ನು ಸಿಂಗರಿಸುತ್ತಿದ್ದರು. ಮಂಟಪದ ಮುಂದೆ ಬಣ್ಣ ಬಣ್ಣದ ಅರಿವೆ ಸುತ್ತಿ, ಪತಾಕೆಗಳನ್ನು ಹಚ್ಚಿ ಸಿಂಗರಿಸಿದ ದೊಡ್ಡ ತೇರು ನಿಂತಿತ್ತು. ನಾಲ್ಕು ಗಂಟೆಗೆ ಜನರೆಲ್ಲ ತೇರು ನೋಡಲು ಸೇರಿದರು. ಕೆಲವರು ಗುಂಪು ಗುಂಪಾಗಿ ಅಲ್ಲಲ್ಲಿ ನಿಂತರು. ಕೆಲವರು ತೇರಿನ ಹಗ್ಗ ಹಿಡಿದು ಅವರ ಸಮೀಪ ನಿಂತರು. ಎಲ್ಲರೂ "ಹರ ಹರ ಮಹಾದೇವ!" ಎಂದು ಭಕ್ತಿಯಿಂದ ಕೂಗುತ್ತ ತೇರನ್ನು ಎಳೆಯತೊಡಗಿದರು.

©KTBS Not to be republished

**ಸದಾನಂದ:** ಅಗೋ ನೋಡಿ! ತೇರು ಮುಂದೆ ಸಾಗುತ್ತಿದೆ. ತೇರಿಗೆ ಬಣ್ಣಬಣ್ಣದ ಪತಾಕೆಗಳಿವೆ. ಗಾಳಿಗೆ ಅವು ಪಟಪಟ ಹಾರುತ್ತಿವೆ.

**ಹನುಮ** : ತೇರಿನ ಕಳಸ ನೋಡಿ. ಹೇಗೆ ಲಕಲಕ ಹೊಳೆಯುತ್ತಿದೆ !

**ಶಂಕರ** : ಇದೇನು, ತೇರಿನ ಮೇಲೆ ಜನರು ಉತ್ತತ್ತಿಗಳನ್ನು ಎಸೆಯುತ್ತಿದ್ದಾರೆ !

**ಭರಮ** : ಅದೋ! ನೋಡು, ಬಾಳೆಹಣ್ಣುಗಳನ್ನೂ ಎಸೆಯುತ್ತಿದ್ದಾರೆ.

ಅದರಗುಂಜಿ ಶಾಲೆಯ ಬಾಲಕರು ತೇರಿನ ಹಗ್ಗ ಹಿಡಿದು ಸ್ವಲ್ಪ ದೂರ ತೇರನ್ನು ಎಳೆದರು. ಬಳಿಕ ಭಜನೆ ಮಾಡುತ್ತಿರುವ ಜನರನ್ನು ದಾಟಿ, ಅವರು ಜಾತ್ರೆ ನೋಡಲು ಹೋದರು. ಎಲ್ಲಿ ನೋಡಿದರಲ್ಲಿ ಅಂಗಡಿಗಳ ಸಾಲು. ಬಾಳೆಹಣ್ಣು, ತೆಂಗಿನಕಾಯಿಗಳ ಅಂಗಡಿಗಳಿಗಂತೂ ಎಣಿಕೆಯಿಲ್ಲ. ಬಳೆಗಳ ಅಂಗಡಿಗಳಲ್ಲಿ ಹೆಣ್ಣು ಮಕ್ಕಳು ಕಿಕ್ಕಿರಿದು ಸೇರಿದ್ದರು. ಮಿಠಾಯಿಗಳನ್ನು ಕೊಳ್ಳಲು ಜನರು ಗುಂಪು ಗುಂಪಾಗಿ ನಿಂತಿದ್ದರು. ಆ ಶಾಲೆಯ ಮಕ್ಕಳು ಮಿಠಾಯಿಗಳನ್ನು ಕೊಂಡುಕೊಂಡರು. ಮುಂದೆ ತೊಟ್ಟಿಲ ಜೀಕ ಹಾಗೂ ಕುದುರೆ, ಆನೆ, ಒಂಟೆ ಮೊದಲಾದವುಗಳಿಂದ ಕೂಡಿದ ತಿರುಗು ಯಂತ್ರಗಳು ಕಾಣಿಸಿದವು. ಆ ಹುಡುಗರು ಬಹಳ

ಹುರುಪಿನಿಂದ ಆ ತಿರುಗುಯಂತ್ರಗಳಲ್ಲಿ ಕುಳಿತು ಆಟ ಆಡಿದರು. ಆಮೇಲೆ ಅವರೆಲ್ಲರೂ ಸಮೀಪದ ಮರದ ಕೆಳಗೆ ತುಸು ಹೊತ್ತು ಕುಳಿತರು. ಸದಾನಂದನು ಎಲ್ಲರಿಗೂ ಮಿಠಾಯಿ ಹಂಚಿದನು. "ಸಿದ್ಧಾರೂಢರ ಮಹಿಮೆ ಎಂಥದು! ದೇಶದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಸಕ್ರಿಯವಾಗಿದ್ದ ಮಠವಿದು. ಗಾಂಧೀಜಿ, ತಿಲಕರಂಥ ರಾಷ್ಟ್ರನಾಯಕರಿಗೆ ಸ್ಫೂರ್ತಿ ಕೊಟ್ಟ ಮಠವಿದು" ಎನ್ನುತ್ತ ಗುರುಗಳು ಮಠದ ಪ್ರಸಾದವನ್ನು ಕಣ್ಣಿಗೊತ್ತಿಕೊಂಡರು. "ಸಿದ್ಧಾರೂಢರ ಅಂಗಾರ, ದೇಶಕ್ಕೆಲ್ಲ ಬಂಗಾರ...", "ಸಿದ್ಧಾರೂಢರ ಜೋಳಿಗೆ, ನಾಡಿಗೆಲ್ಲ ಹೋಳಿಗೆ..." ಮುಂತಾದ ಜಯಘೋಷಗಳು ಜನಸ್ತೋಮದಿಂದ ಕೇಳಿಬರುತ್ತಿದ್ದವು.

ಅಷ್ಟರಲ್ಲಿ ಸಂಜೆಯಾಯಿತು. ಮಕ್ಕಳು ಅದರಗುಂಜಿಗೆ ಹಿಂದಿರುಗಿದರು.

**ಕ್ಷೇತ್ರ : ಆಲಿಸುವುದು**
**ಸಾಮರ್ಥ್ಯ : ಗುಂಪು ಚಟುವಟಿಕೆಯ ನಿರ್ದೇಶನಗಳನ್ನು ಆಲಿಸಿ ಕಾರ್ಯರೂಪಕ್ಕೆ ತರುವುದು.**

## ಪದಗಳ ಅರ್ಥ

ಐಹಿಕ – ಪ್ರಾಪಂಚಿಕ, ಸಂನ್ಯಾಸ – ಸಾಂಸಾರಿಕ ಬಂಧಗಳನ್ನು ಕಳಚಿಕೊಂಡ ಸ್ಥಿತಿ, ದೀಪಸ್ತಂಭ – ಸಮುದ್ರದಂಡೆಯಲ್ಲಿ ಕಟ್ಟಿದ ದೀಪ ಗೋಪುರ. ಇದು ಹಡಗುಗಳಿಗೆ ಸೂಚನೆ ಕೊಡಲು ಸಹಕಾರಿ, ಉತ್ತತ್ತಿ – ಒಣ ಖರ್ಜೂರ, ಆವಾರ – ಆವರಣ, ತೇರು – ರಥ, ಜಮಾಯಿಸು – ಸೇರು, ಅರಿವೆ – ಬಟ್ಟೆ, ವಸ್ತ್ರ

©KTBS Not to be republished

## ಅಭ್ಯಾಸಗಳು

**ಅ. ಪದಗಳ ಅರ್ಥ ಬರೆಯಿರಿ.**

೧. ಹಿರೇಮಣಿ  ೨. ಕರ್ಮಭೂಮಿ  ೩. ಪತಾಕೆ  ೪. ಜನಸ್ತೋಮ

**ಆ. ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.**

೧. ಅಲ್ಲಿ ಜಾತ್ರೆ ದಿನ ಶಿವರಾತ್ರಿಯ ಕೂಡುತ್ತದೆ.

೨. ಮಠದ ಮಂಟಪ ಮುಂದೆ ಹಾಕಿದ್ದರು ದೊಡ್ಡ.

೩. ಮಿಠಾಯಿಗಳನ್ನು ಶಾಲೆಯ ಕೊಂಡರು ಮಕ್ಕಳು.

೪. ಹೋರಾಟದ ಸಕ್ರಿಯವಾಗಿದ್ದ ಸ್ವಾತಂತ್ರ್ಯ ಮಠವಿದು ಸಮಯದಲ್ಲಿ.

**ಇ. ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಪ್ರೇರಣೆ  ೨. ಕಷ್ಟಕಾರ್ಪಣ್ಯ  ೩. ಹುರುಪು  ೪. ಸ್ವಯಂಸೇವಕ

**ಈ. ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಸಿದ್ಧಾರೂಢರ ಮಠವು ಯಾವ ಜಿಲ್ಲೆಯಲ್ಲಿ ಇದೆ?

೨. ಶಾಲೆಯ ಮಕ್ಕಳಿಗೆ ದಾರಿಯ ದಣಿವು ಏಕೆ ಆಗಲಿಲ್ಲ?

೩. ಸಿದ್ಧಾರೂಢ ಸ್ವಾಮಿಗಳು ಮೂಲತಃ ಯಾವ ಊರಿನವರು?

೪. ಸ್ವಾಮಿಗಳು ಯಾವ ಮಂತ್ರವನ್ನು ಜಾತಿಭೇದವಿಲ್ಲದೆ ಎಲ್ಲರಿಗೂ ಬೋಧಿಸಿದರು?

೫. ಮಠದಲ್ಲಿ ಶಾಲೆಯ ಮಕ್ಕಳು ಯಾವ ಕೆಲಸಗಳನ್ನು ಮಾಡಿದರು?

೬. ಶಾಲಾ ಮಕ್ಕಳು ಯಾವ ಆಟಗಳನ್ನು ಆಡಿದರು?

೭. ಸಿದ್ಧಾರೂಢರ ಮಠದಿಂದ ಸ್ಫೂರ್ತಿಯನ್ನು ಪಡೆದ ರಾಷ್ಟ್ರನಾಯಕರು ಯಾರು?

**ಉ. ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸಿದ್ಧಾರೂಢ ಸ್ವಾಮಿಗಳ ಜೀವನದ ಬಗ್ಗೆ ತಿಳಿಸಿ.

೨. ಮಠವು ಸಮಾಜದಲ್ಲಿ ಹೇಗೆ ದಾರಿದೀಪವಾಗಿದೆ?

೩. ಸಿದ್ಧಾರೂಢ ಜಾತ್ರೆಯ ತೇರೆಳೆಯುವ ಸಂದರ್ಭವನ್ನು ವರ್ಣಿಸಿ.

**ಊ. ಕೆಳಗಿನ ವಾಕ್ಯಗಳಲ್ಲಿ ಜೋಡುನುಡಿಗಳನ್ನು ಗುರುತಿಸಿ ಬರೆಯಿರಿ.**

೧. ನಮ್ಮ ನೆರೆಹೊರೆಯವರು ಬಹಳ ಒಳ್ಳೆಯವರು.

೨. ಅಮ್ಮ ರಾತ್ರಿಹಗಲು ಕೆಲಸ ಮಾಡುತ್ತಾಳೆ.

೩. ನಾಟಕದಲ್ಲಿ ವಿಧವಿಧವಾದ ಉಡುಗೆತೊಡುಗೆ ಧರಿಸುತ್ತಾರೆ.

**ಋ) ಸರಿಹೊಂದುವ ಬಿಡಿ ಪದಗಳನ್ನು ಸೇರಿಸಿ ಜೋಡಿನುಡಿಗಳನ್ನು ರಚಿಸಿರಿ.**

ಆಟ, ತಿಂಡಿ, ಹೊರಗೆ, ದಿಕ್ಕು, ತೀರ್ಥ, ಪಕ್ಕ, ದೆಸೆ,
ಒಳಗೆ, ಅಕ್ಕ, ಕೊಳ್ಳ, ಪಾಠ, ಹಳ್ಳ.

**ಎ) ಚಟುವಟಿಕೆ:**

೧. ನಿಮ್ಮ ಊರಿನ ಜಾತ್ರೆಯ ವಿಶೇಷದ ಕುರಿತು ಒಂದು ಪ್ರಬಂಧ ಬರೆಯಿರಿ.

೨. ಜಾತ್ರೆಯ ಚಿತ್ರಗಳನ್ನು ಸಂಗ್ರಹಿಸಿ.

©KTBS Not to be republished

## ವ್ಯಾಕರಣ ಮಾಹಿತಿ

### ಕರ್ತೃ, ಕರ್ಮ, ಕ್ರಿಯಾಪದ.

**ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಗಮನಿಸಿ ಓದಿರಿ.**

೧. ಪ್ರಸಾದನು ಮುಖ ಕೈಕಾಲು ತೊಳೆದುಬಂದನು.

೨. ಅಬ್ದುಲ್ಲನು ಪಾತ್ರೆಗಳನ್ನು ಮಾರಿದನು.

೩. ಗಿಳಿಯು ಹಣ್ಣನ್ನು ತಿಂದಿತು.

ಇಲ್ಲಿ 'ಪ್ರಸಾದ,' 'ಅಬ್ದುಲ್ಲ,' 'ಗಿಳಿ' ಎಂಬ ಪದಗಳು ಕೆಲಸಮಾಡುವವರು 'ಯಾರು' ಎಂಬುದನ್ನು ಸೂಚಿಸುತ್ತವೆ. ಇವು ಕರ್ತೃಪದಗಳು.

'ಮುಖ ಕೈಕಾಲು,' 'ಪಾತ್ರೆಗಳನ್ನು,' 'ಹಣ್ಣನ್ನು' ಎಂಬ ಪದಗಳು ಆಯಾ ಕೆಲಸಕ್ಕೆ ಪೂರಕವಾಗಿ ಏನನ್ನು ಎಂಬ ಪ್ರಶ್ನೆಯನ್ನು ಎತ್ತುತ್ತವೆ. ಇವು ಕರ್ಮ ಪದಗಳು.

'ತೊಳೆದು ಬಂದನು,' 'ಮಾರಿದನು,' 'ತಿಂದಿತು' ಎಂಬ ಪದಗಳು ಯಾವ ಕೆಲಸ ಎಂಬುದನ್ನು ಹೇಳುತ್ತವೆ. ಇವು ಕ್ರಿಯಾಪದಗಳು.

ಅಂದರೆ ಇಲ್ಲಿ ಕ್ರಮವಾಗಿ– 'ಬರುವ' 'ಮಾರುವ' 'ತಿನ್ನುವ' ಕೆಲಸವನ್ನು ಇವು ತಿಳಿಸುತ್ತವೆ. ಕೆಲಸವನ್ನು ತಿಳಿಸುವ ಪದಗಳು ಕ್ರಿಯಾಪದಗಳು. (ಕೆಲಸ = ಕ್ರಿಯೆ) ಆ ಕ್ರಿಯೆಗೆ ಸಂಬಂಧಿಸಿದಂತೆ 'ಏನನ್ನು' ಎಂಬುದನ್ನು ಸೂಚಿಸುವ ಪದಗಳು ಕರ್ಮಪದಗಳು. ಆ ಕ್ರಿಯೆಯನ್ನು ಮಾಡುತ್ತಿರುವವರು 'ಯಾರು' ಇಲ್ಲವೇ 'ಯಾವುದು' ಎಂಬುದನ್ನು ಸೂಚಿಸುವ ಪದಗಳು ಕರ್ತೃಪದಗಳು.

ಇದಕ್ಕೆ ಪೂರಕವಾಗಿ ಇನ್ನೂ ಕೆಲವು ಉದಾಹರಣೆಗಳನ್ನು ಗಮನಿಸೋಣ:

- ರೋಜಾಳು ಗೆಳತಿಯನ್ನು ಮೆಚ್ಚಿದಳು.
- ಪಾರಿವಾಳವು ಕಾಳುಗಳನ್ನು ನೋಡಿತು.
- ಗೆಳೆಯರು ಆಟವನ್ನು ಆಡಿದರು.

| ಪದ ವಿವರ | ಪ್ರಶ್ನೆ | ಉತ್ತರ |
|---|---|---|
| ಕರ್ತೃಪದ | ಯಾರು? | ರೋಜಾ, ಪಾರಿವಾಳ, ಗೆಳೆಯರು. |
| ಕರ್ಮಪದ | ಏನನ್ನು? ಯಾರನ್ನು? | ಗೆಳತಿಯನ್ನು, ಕಾಳುಗಳನ್ನು, ಆಟವನ್ನು. |
| ಕ್ರಿಯಾಪದ | ಮಾಡುವರು? | ಮೆಚ್ಚಿದಳು, ನೋಡಿತು, ಆಡಿದರು. |

©KTBS Not to be republished

ವಾಕ್ಯ ರಚನೆಯಲ್ಲಿ ಇವು ಮೂರು ಅಂಶಗಳು ಮುಖ್ಯವೆನಿಸುತ್ತವೆ. ದೀರ್ಘ ವಾಕ್ಯಗಳಲ್ಲಿ ಈ ಮೂರು ಅಂಶಗಳನ್ನು ಕಂಡುಕೊಳ್ಳಲು ಅಭ್ಯಾಸ ಮಾಡಿರಿ.

## ಭಾಷಾ ಆಟಗಳು

**ಅ. ಕೊಟ್ಟಿರುವ ನಿರ್ದೇಶನಗಳನ್ನು ಗಮನಿಸಿರಿ. ಅದರಂತೆ ಗುಂಪುಗಳಲ್ಲಿ ಕಾರ್ಯನಿರ್ವಹಿಸಿ ಕನ್ನಡ ವರ್ಣಮಾಲೆ ಚಾರ್ಟ್ ತಯಾರಿಸಿರಿ.**

೧. ೨೧ x ೨೦ಸೆ.ಮೀ. ಅಳತೆಯ ಬಿಳಿ ಹಾಳೆಯನ್ನು ತೆಗೆದುಕೊಳ್ಳಿರಿ. (ಎ೨-ಎ೩ ಸೈಜ್)

೨. ಸುತ್ತಲೂ ೧ ಸೆ.ಮೀ.ನಷ್ಟು ಜಾಗಬಿಟ್ಟು ಗೆರೆ (ಬಾರ್ಡರ್) ಹಾಕಿರಿ.

೩. ಮೇಲಿನಿಂದ ಕೆಳಗೆ ೫ ಭಾಗ ಮಾಡಿಕೊಂಡು ಅಡ್ಡಲಾಗಿ ಗೆರೆ ಎಳೆಯಿರಿ.

| | | | | |
|---|---|---|---|---|
| **ಅಳತೆ :** | ಭಾಗ-೧ | – | ೨ | ಸೆ.ಮೀ. |
| | ಭಾಗ-೨ | – | ೬ | ಸೆ.ಮೀ |
| | ಭಾಗ-೩ | – | ೪ | ಸೆ.ಮೀ |
| | ಭಾಗ-೪ | – | ೧೪ | ಸೆ.ಮೀ. |
| | ಭಾಗ-೫ | – | ೨ | ಸೆ.ಮೀ. |

©KTBS Not to be republished

೪. ಭಾಗ ೧ರಲ್ಲಿ 'ಕನ್ನಡ ವರ್ಣಮಾಲೆ' ಎಂದು ದೊಡ್ಡದಾಗಿ ಬರೆಯಿರಿ.

೫. ಭಾಗ ೨ರಲ್ಲಿ 'ಸ್ವರಗಳು' ಎಂದು ಶೀರ್ಷಿಕೆ ಬರೆದು ಕೆಳಗಡೆ ೧೩ ಸ್ವರಗಳನ್ನು ಕ್ರಮವಾಗಿ ಬರೆಯಿರಿ.

೬. ಭಾಗ ೩ರಲ್ಲಿ 'ಯೋಗವಾಹಗಳು' ಎಂದು ಶೀರ್ಷಿಕೆ ಬರೆದು ಕೆಳಗೆ ೨ ಯೋಗವಾಹಗಳನ್ನು ಕ್ರಮವಾಗಿ ಬರೆಯಿರಿ.

೭. ಭಾಗ ೪ರಲ್ಲಿ 'ವ್ಯಂಜನಗಳು' ಶೀರ್ಷಿಕೆ ಬರೆದು ಕೆಳಗೆ ಮೊದಲು ವರ್ಗೀಯ ವ್ಯಂಜನಗಳನ್ನು, ಅನಂತರ ಅವರ್ಗೀಯ ವ್ಯಂಜನಗಳನ್ನು ಬರೆಯಿರಿ.

೮. ಭಾಗ ೫ರಲ್ಲಿ ನಿಮ್ಮ ಗುಂಪಿನ ಎಲ್ಲರ ಹೆಸರುಗಳನ್ನು ಬರೆಯಿರಿ.

೯. ಹಾಳೆಯನ್ನು ರಟ್ಟಿಗೆ ಅಂಟಿಸಿ, ದಾರ ಕಟ್ಟಿ ತರಗತಿಯಲ್ಲಿ ನೇತು ಹಾಕಿ ಪ್ರದರ್ಶಿಸಿರಿ.

೧೦.ಪ್ರತಿ ಭಾಗದಲ್ಲಿ ಒಂದೊಂದು ಬಣ್ಣದ ಪೆನ್ನನ್ನು ಬಳಸಿ ಬರೆಯಿರಿ.

## ಯೋಜನೆ

- ವಿವಿಧ ಸಂದರ್ಭದ ಮೆರವಣಿಗೆಯ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.
- ಪತ್ರಿಕೆಗಳಲ್ಲಿ ಬರುವ ಪದಬಂಧಗಳನ್ನು ಸಂಗ್ರಹಿಸಿ ಗುಂಪಿನಲ್ಲಿ ಪೂರ್ಣಗೊಳಿಸಿರಿ.

## ಪೂರಕ ಓದು

- ಜಂಬೂಸವಾರಿಯ ಕುರಿತಾದ ಲೇಖನಗಳನ್ನು ಓದಿರಿ.
- ಒಟ್ಟಾಗಿ ಕೆಲಸಮಾಡಿ ಯಶಸ್ಸನ್ನು ಸಾಧಿಸಿದ ವಿಷಯಗಳನ್ನು ಕುರಿತು ಓದಿರಿ.
- ಹಿರಿಯರ ಮಾತಿನಂತೆ ನಡೆದು ಪ್ರಗತಿ ಸಾಧಿಸಿದ ವ್ಯಕ್ತಿಗಳ ಕುರಿತು ಓದಿರಿ.

## ಶುಭ ನುಡಿ

- ಒಂದಾಗಿ ಶ್ರಮಿಸಿರಿ, ಸಂಭ್ರಮವನ್ನು ಪಡೆಯಿರಿ.
- ಮಹತ್ಕಾರ್ಯದ ಸಾಧನೆಯ ಹಿಂದೆ ಪರಿಶ್ರಮವಿರುತ್ತದೆ.

* * * * *

©KTBS Not to be republished

# ೭. ಯಾಣ ಕುರಿತೊಂದು ಪತ್ರ

N6K7V4

– ಸಮಿತಿ ರಚನೆ

**ಪ್ರವೇಶ:** ನಮ್ಮ ಕನ್ನಡ ನಾಡು ಪ್ರಾಕೃತಿಕ ಸೊಬಗಿನಿಂದ ಕೂಡಿದ ಸುಂದರ ನಾಡು. ಕನ್ನಡ ನಾಡಿನ ಯಾವ ಭಾಗಕ್ಕೆ ಹೋದರೂ ಅಲ್ಲಿ ಪ್ರೇಕ್ಷಣೀಯ ಸ್ಥಳಗಳು ಅನೇಕ. ಅವುಗಳ ಪರಿಚಯ ನಮ್ಮ ವಿದ್ಯಾರ್ಥಿಗಳಿಗೆ ಆಗಬೇಕಾಗಿರುವುದು ಬಹು ಮುಖ್ಯ. ಇಲ್ಲಿ ಚಾರಣಕ್ಕೆ ಪ್ರಸಿದ್ಧವಾದ ಯಾಣದ ಸಂಕ್ಷಿಪ್ತ ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಲಾಗಿದೆ. ಇದರೊಂದಿಗೆ ಮಕ್ಕಳಿಗೆ 'ಇ-ಅಂಚೆ' ರಚಿಸುವ ಬಗ್ಗೆ ಮಾಹಿತಿ ನೀಡುವುದು ಈ ಪಾಠದ ಆಶಯ.



ಸಲೀಂ, ರಾಗಿಣಿ, ಜೆನಿಫರ್ ಹಾಗೂ ಶಂಕರ ಪ್ರತಿದಿನ ಜೊತೆಯಾಗಿ ಓದಿಕೊಳ್ಳಲು ಗೆಳೆಯ ರಾಜುವಿನ ಮನೆಗೆ ಬರುತ್ತಿದ್ದರು. ಆಯಾ ದಿನ ಶಾಲೆಯಲ್ಲಿ ನಡೆದ ಪಾಠದ ಬಗ್ಗೆ ಚರ್ಚೆ ನಡೆಸುತ್ತಿದ್ದರು.

ಅದೊಂದು ಭಾನುವಾರ. ಎಲ್ಲರೂ ರಾಜುವಿನ ಮನೆಗೆ ಬಂದರು. ಸಲೀಂ ಗೆಳೆಯರ ಬಳಿ 'ಈಗ ನಾವೊಂದು ಆಟ ಆಡೋಣ. ಆ ಮೇಲೆ ಓದಿಕೊಳ್ಳೋಣ' ಎಂದನು. ಯಾವ ಆಟ ಎಂಬುದರ ಬಗ್ಗೆ ಜೋರಾಗಿ ಚರ್ಚೆ ನಡೆಯಿತು. ಆಗ ಒಳಗಿನಿಂದ ಬಂದ ರಾಜುವಿನ ಅಮ್ಮ "ಯಾರೂ ಗಲಾಟೆ ಮಾಡಬೇಡಿ. ರಾಜುವಿನ ಅಪ್ಪ ಕಂಪ್ಯೂಟರ್‌ನಲ್ಲಿ ಏನೋ ಕೆಲಸ ಮಾಡುತ್ತಿದ್ದಾರೆ" ಎಂದು ಹೇಳಿ ಒಳಗೆ ಹೋದರು. ಆಗ ರಾಗಿಣಿ, "ಈ ಸಲೀಂನಿಗೆ ಯಾವಾಗ್ಲೂ ಬರೀ ಆಟದ್ದೆ ಚಿಂತೆ. ನಿನ್ನೆ ಪದ್ಮಿನಿ ಮೇಡಂ ನಮಗೆಲ್ಲಾ ಕಂಪ್ಯೂಟರ್‌ನಲ್ಲಿ ವಿಶೇಷ ಪತ್ರ ಬರೆಯುವ ಬಗ್ಗೆ ಹೇಳಿಕೊಡಲಿಲ್ವೆ" ಎಂದು ವಿಷಯಕ್ಕೆ ಬಂದಳು. ಆಗ ಎಲ್ಲರೂ "ಹೌದಲ್ವ"

ಎಂದು ಪತ್ರ ಬರೆಯುವ ಕುರಿತ ಚರ್ಚೆಗೆ ತಿರುಗಿದರು. ಅಷ್ಟರಲ್ಲಿ ರಾಜುವಿನ ತಂದೆ ಸುಂದರ್ ಹೊರಗೆ ಬಂದರು. "ಏನು ಮಕ್ಕಳೇ, ಏನು ನಡೆಸಿದ್ದೀರಿ?" ಎಂದು ಕೇಳಿದರು. ಅದಕ್ಕೆ ಚೂಟಿ ರಾಗಿಣಿಯು ಪದ್ಮಿನಿ ಮೇಡಂ ಹೇಳಿದ ಗೃಹಪಾಠದ ಬಗ್ಗೆ ತಿಳಿಸಿ, "ಅದನ್ನು ಹೇಗೆ ಬರೆಯುವುದು ಎಂದು ತಿಳಿಯದೆ ಚರ್ಚೆ ಮಾಡ್ತಾ ಇದ್ದೇವೆ ಮಾಮ" ಎಂದಳು.

ಆಗ ಸುಂದರ್, 'ಬನ್ನಿ' ಎಂದು ಎಲ್ಲರನ್ನು ಕಂಪ್ಯೂಟರ್ ಕೊಠಡಿಗೆ ಕರೆದುಕೊಂಡು ಹೋಗಿ 'ಇ-ಅಂಚೆ' ಅಥವಾ 'ಇ-ಮೇಲ್' ಬಗ್ಗೆ ಕಂಪ್ಯೂಟರಿನಲ್ಲಿ ತೋರಿಸುತ್ತಾ 'ಇ-ಮೇಲ್' ಅಂದರೆ ಕಂಪ್ಯೂಟರ್ ಮೂಲಕ ಪತ್ರಗಳನ್ನು ಸಂದೇಶಗಳನ್ನು ವಿನಿಮಯ ಮಾಡಿಕೊಳ್ಳುವ ಒಂದು ಜನಪ್ರಿಯ ವಿಧಾನ ಎಂದರು. ಸಲೀಂ ಕುತೂಹಲದಿಂದ, "ಅಂಕಲ್, ಇ-ಮೇಲ್ ಎಂದರೇನು? ಎಂದು ಕೇಳಿದನು. ಅದಕ್ಕೆ ಸುಂದರ್ 'ಇ'ಅಂದರೆ ಇಂಗ್ಲಿಷಿನಲ್ಲಿ 'ಇಲೆಕ್ಟ್ರಾನಿಕ್', 'ಮೇಲ್' ಎಂದರೆ 'ಅಂಚೆ' ಹಾಗಾಗಿ ಎಲೆಕ್ಟ್ರಾನಿಕ್ ಮೇಲ್ ಅನ್ನು 'ಇ-ಅಂಚೆ' ಎನ್ನುತ್ತಾರೆ ಎಂದರು.

ಶಂಕರ್-"ಮಾಮ, ಇ-ಮೇಲ್ ಅನ್ನು ಹೇಗೆ ಕಳಿಸ್ತಾರೆ? ಮತ್ತೆ ಇದನ್ನು ಎಲ್ಲಿ, ಯಾರು ಓದಬಹುದು?" ಎಂದು ಕೇಳಿದ. ಅದಕ್ಕೆ ಸುಂದರ್- "ನೋಡಿ ಮಕ್ಕಳೆ, ಮಾಮೂಲಿ ಅಂಚೆ ವ್ಯವಸ್ಥೆಯಂತೆ ಇಲ್ಲಿಯೂ ಪತ್ರ ತಲುಪಬೇಕಾದ ವಿಳಾಸಬೇಕು. ಇದಕ್ಕೆ 'ಇ-ಮೇಲ್' ವಿಳಾಸ ಅನ್ನುತ್ತಾರೆ. ನೀವು ನನಗೆ ಕಳುಹಿಸಿದ ಇ-ಮೇಲ್‌ನ್ನು ನಾನು ಕಂಪ್ಯೂಟರಿನಲ್ಲಿ ತೆರೆದು ಓದಬೇಕೆಂದರೆ ನನ್ನದೇ ಆದ 'ಗುಪ್ತ ಸಂಕೇತ' (Pass word) ಇರುತ್ತದೆ. ಅದನ್ನು ಬಳಸಿ ತೆರೆದು ಓದಬಲ್ಲೆ. ಈಗ ನಿಮಗೇನು ಬೇಕು? ಪದ್ಮಿನಿ ಮೇಡಂ ವಿಶೇಷ ಪತ್ರ ಬರೆದುಕೊಂಡು ಬರಲು ಹೇಳಿದ್ದಾರೆ. ಅಷ್ಟೇತಾನೆ? ಈಗ ನಿಮಗೊಂದು ವಿಶೇಷ ಪತ್ರ ತಯಾರಿಸಿ, ಕಳಿಸುತ್ತೇನೆ. ಅದನ್ನು ನಿಮ್ಮ ಶಾಲೆಯ ಕಂಪ್ಯೂಟರ್‌ನಲ್ಲಿ ತೆರೆದು ತೋರಿಸಿ" ಎಂದರು.

©KTBS Not to be republished


ಅದಕ್ಕೆ ರಾಗಿಣಿ, "ಅದು ಹೇಗೆ ಮಾಮ!" ಎಂದಳು. ಆಗ ಸುಂದರ್ "ನನ್ನ ಮಗನಿಗೆ ಕಂಪ್ಯೂಟರ್ ಬಳಸುವ ಬಗ್ಗೆ ಸ್ವಲ್ಪ ಗೊತ್ತಿದೆ. ಅವನ ಹೆಸರಿನಲ್ಲಿ ಒಂದು 'ಇ-ಮೇಲ್' ತಯಾರಿಸಿ ಒಂದು ಗುಪ್ತ ಸಂಕೇತ ಕೊಡುತ್ತೇನೆ. ನೋಡುತ್ತಿರಿ" ಎಂದರು. ಸುಂದರ್ 'ಇ-ಮೇಲ್' ರಚಿಸುವುದನ್ನು ಮಕ್ಕಳು ಕುತೂಹಲದಿಂದ ಗಮನಿಸಿದರು. ಸುಂದರ್, ರಾಜುವಿನ ಹೆಸರಿನಲ್ಲಿ ಒಂದು ಇ-ಮೇಲ್ ವಿಳಾಸ ತಯಾರಿಸಿದರು. ಅದರ ಗುಪ್ತ ಸಂಕೇತವನ್ನು ರಾಜುವಿಗೆ ಮಾತ್ರ ಗುಟ್ಟಾಗಿ ತಿಳಿಸಿದರು. ಆಗ ಸಲೀಂ "ಮಾಮ, ಅದೇಕೆ ಗುಪ್ತ ಸಂಕೇತವನ್ನು ರಾಜುವಿಗೆ ಮಾತ್ರ ಹೇಳಿದಿರಿ. ನಮಗೆ ಹೇಳಲಿಲ್ಲ ಯಾಕೆ?" ಎಂದ. ಅದಕ್ಕೆ ಸುಂದರ್, "ನೋಡು ಸಲೀಂ, ಒಬ್ಬರ ಗುಪ್ತ ಸಂಕೇತ ಇನ್ನೊಬ್ಬರಿಗೆ ಗೊತ್ತಾಗಬಾರದು. ಗೊತ್ತಾದರೆ ಯಾರು ಬೇಕಾದರೂ ಪತ್ರ ಓದಬಹುದಲ್ವೆ? ಬೇರೆಯವರ ಪತ್ರ ನಾವು ಓದಬಾರದಲ್ವೆ? ಅದಕ್ಕಾಗಿ ಗುಪ್ತ ಸಂಕೇತ ಅವನಿಗೆ ಮಾತ್ರ ಹೇಳಿದ್ದು" ಎಂದರು.

rajusundar@gmail.com ಎಂಬುದು ರಾಜುವಿನ ಇ-ಮೇಲ್ ವಿಳಾಸ. "ಮಕ್ಕಳೇ, ರಾಜುವಿನ ಇ-ಮೇಲ್ ವಿಳಾಸಕ್ಕೆ ನನ್ನ ಮೇಲ್‌ನಿಂದ ಚಾರಣಕ್ಕೆ ಪ್ರಸಿದ್ಧವಾದ ಯಾಣದ ಕೆಲವು ಚಿತ್ರ ಹಾಗೂ ವಿವರವನ್ನು ಕಳುಹಿಸುತ್ತೇನೆ" ಎಂದರು. ಅನಂತರ ಇ-ಮೇಲ್

ತೆರೆಯುವುದರ ಬಗ್ಗೆ ರಾಜುವಿಗೆ ತಿಳಿಸಿದರು. ರಾಜು ಇಮೇಲ್ ತೆರೆದ. ಆ ಲೇಖನವನ್ನು ರಾಜು ತನ್ನ ಗೆಳೆಯನಿಗೆ ಬರೆದ ಪತ್ರದಂತೆ ಬದಲಾಯಿಸಿಕೊಳ್ಳಲು ಸುಂದರ್ ಸಲಹೆ ನೀಡಿದರು.

ಮಕ್ಕಳೆಲ್ಲರು: "ನೀವು ನಮಗೆ ಒಳ್ಳೆಯ ಮಾಹಿತಿ ಹೇಳಿದ್ದೀರಿ ಮಾಮ. ಇ–ಮೇಲ್ ಬಗ್ಗೆ ಹೇಳಿಕೊಟ್ಟು ಮಾದರಿ ಸಹಿತ ವಿವರಿಸಿದ್ದೀರಿ. ನಿಮಗೆ ಧನ್ಯವಾದಗಳು" ಎಂದು ಹೇಳಿ ಅಲ್ಲಿಂದ ಹೊರಟರು. ಮಾರನೆಯ ದಿನ ಮಕ್ಕಳೆಲ್ಲ ಶಾಲೆಗೆ ಬಂದರು. ಪದ್ಮಿನಿ ಮೇಡಂ, "ಮಕ್ಕಳೇ ಶನಿವಾರ ನಾನು ಪತ್ರ ಲೇಖನದ ಬಗ್ಗೆ ತಿಳಿಸಿ, ವಿಶೇಷ ಪತ್ರ ಬರೆದುಕೊಂಡು ಬರಲು ಹೇಳಿದ್ದೆ. ಯಾರು ಈ ಪ್ರಯತ್ನ ಮಾಡಿದ್ದೀರಿ? ಎಂದರು. ಆಗ ರಾಜು, ರಾಗಿಣಿ, ಸಲೀಂ, ಜೆನಿಫರ್ ಹಾಗು ಶಂಕರ್ ಎದ್ದು ನಿಂತು, "ಟೀಚರ್, ನಮ್ಮನ್ನು ಕಂಪ್ಯೂಟರ್ ಕೊಠಡಿಗೆ ಕರೆದುಕೊಂಡು ಹೋಗಿ, ಅಲ್ಲಿ ನಿಮಗೆ ನಮ್ಮ ವಿಶೇಷ ಪತ್ರ ತೋರಿಸುತ್ತೇವೆ" ಎಂದರು.

ಎಲ್ಲರೂ ಕಂಪ್ಯೂಟರ್ ಕೊಠಡಿಗೆ ಹೋದರು. ರಾಜು ಕಂಪ್ಯೂಟರ್ ತೆರೆದು ಯಾರಿಗೂ ಕಾಣದ ಹಾಗೆ ತನ್ನ ಗುಪ್ತ ಸಂಕೇತ ಬಳಸಿ 'ಇ–ಮೇಲ್'ನಲ್ಲಿದ್ದ ಪತ್ರವನ್ನು ತೆರೆದು ತೋರಿಸಿದ. ಅದರಲ್ಲಿನ ಯಾಣದ ಚಿತ್ರಗಳನ್ನು ಹಾಗೂ ಅದರ ವಿವರಗಳನ್ನು ರಾಗಿಣಿ ಮತ್ತು ಜೆನಿಫರ್ ಓದಿದರು.......


©KTBS Not to be republished

ಪ್ರೀತಿಯ ಸಲೀಂ,

ಮಲೆನಾಡಿನ ಪ್ರವಾಸಿ ತಾಣಗಳಲ್ಲಿ ಗಗನಚುಂಬಿ ಹೆಬ್ಬಂಡೆಗಳ ತಾಣವಾದ ಯಾಣ ಕೂಡ ಒಂದು. ಶಿರಸಿಯಿಂದ ಯಾಣ ಎಂಬ ಹಳ್ಳಿ ತಲುಪಿ ಅಲ್ಲಿಂದ ೨ಕಿ.ಮೀ ಕಾಲುದಾರಿಯಲ್ಲಿ ಪ್ರಯಾಣಿಸಬೇಕು. ಬಹಳ ಇಕ್ಕಟ್ಟಾದ ಕಾಡಿನ ದಾರಿಯಲ್ಲಿ ಸಾಗುವಾಗ ಸುಸ್ತಾಗುತ್ತದೆ. ಹೀಗೆ ಸಾಗುವಾಗ ತಂಪು ಗಾಳಿಯ ಅನುಭವ ಹಿತ ನೀಡುತ್ತದೆ. ಮುಂದೆ ಸಾಗಿದರೆ ನಮಗೆ ಮೋಹಿನಿ ಶಿಖರ ಎದುರಾಗುತ್ತದೆ. ಇದು ಸುಮಾರು ೩೦೦ ಅಡಿ ಎತ್ತರವಿದೆ. ಈ ಶಿಖರವನ್ನು ನೋಡುತ್ತಾ

ಮುಂದುವರಿದರೆ ಮೈ ರೋಮಾಂಚನಗೊಳಿಸುವ ೩೯೦ ಅಡಿ ಎತ್ತರದ ಭೈರವೇಶ್ವರ ಶಿಖರ ಕಾಣುತ್ತದೆ. ಈ ಶಿಖರ ಕಪ್ಪುಕಲ್ಲಿನ ಉಕ್ಕಿನ ಕೋಟೆಯಂತಿದೆ. ಪ್ರಕೃತಿ ಮಾತೆಯೆ ಶಿಲ್ಪಿಯ ರೂಪು ತಾಳಿ ಇಲ್ಲಿನ ಆಕೃತಿಗಳನ್ನು ಕೆತ್ತಿದಳೆ? ಎಂಬಷ್ಟರ ಮಟ್ಟಿಗೆ ಆ ದೃಶ್ಯಗಳು ನೋಡುಗರನ್ನು ಚಕಿತಗೊಳಿಸುತ್ತವೆ.

ಯಾಣದ ಕುರಿತಾದ ಒಂದು ದಂತಕಥೆಯಿದೆ. ಪುರಾಣ ಕಾಲದಲ್ಲಿ ಯಾಣದಲ್ಲಿ ಭಸ್ಮಾಸುರನೆಂಬ ರಾಕ್ಷಸ ವಾಸವಾಗಿದ್ದ. ಈತನ ಉಪಟಳ ಸಹಿಸಲು ಅಸಾಧ್ಯವಾದಾಗ ಶಿವನು ಆತನನ್ನು ಸುಟ್ಟು ಬೂದಿ ಮಾಡಿದ. ಈ ಬೂದಿಯಿಂದ ದೊಡ್ಡದಾದ ಶಿಖರ ಬೆಳೆಯಿತು ಎಂಬುದೇ ಆ ದಂತಕಥೆ. ಆದರೆ ಭೂಗರ್ಭ ಶಾಸ್ತ್ರದ ಸಂಶೋಧನೆ ಪ್ರಕಾರ ಅತಿ ಹೆಚ್ಚು ಖನಿಜ ಸಂಪತ್ತಿನಿಂದ, ಸುಣ್ಣದ ಕಲ್ಲಿನಿಂದ ಕೂಡಿದ ಜಾಗ ಇದಾಗಿದೆ. ಇಲ್ಲಿನ ಕಲ್ಲಿನ ಗುಹೆಯೊಳಗೆ ಪ್ರವೇಶಿಸುವುದು ಒಂದು ಸುಂದರ ಅನುಭವ.

ಯಾಣ ಕುಮಟ ತಾಲ್ಲೂಕಿಗೆ ಹೊಂದಿಕೊಂಡಿದ್ದು ಅಲ್ಲಿಂದ ೨೫ ಕಿ.ಮೀ. ದೂರದಲ್ಲಿದೆ. ಅಲ್ಲಿ ಶಿವರಾತ್ರಿಯ ದಿನ ಭೈರವೇಶ್ವರ ಸ್ವಾಮಿಯ ಉತ್ಸವ ನಡೆಯುತ್ತದೆ. ಯಾಣದ ಬಗ್ಗೆ ಕೇಳುವುದಕ್ಕಿಂತ ನೋಡಿ ಅನುಭವಿಸುವುದೇ ಚಂದ. ನಮ್ಮನ್ನು ಯಾಣ ಪ್ರವಾಸಕ್ಕೆ ಕರೆದುಕೊಂಡು ಹೋಗುವಂತೆ ಪದ್ಮಿನಿ ಮೇಡಂ ಅವರಲ್ಲಿ ಕೇಳಿಕೊಳ್ಳೋಣ. ಅಲ್ಲವೇ?

©KTBS Not to be republished

–ನಿನ್ನ ಗೆಳೆಯ

**ರಾಜು.**




ಮಕ್ಕಳು ಸಿದ್ಧಪಡಿಸಿದ ವಿಶೇಷ ಪತ್ರವನ್ನು ನೋಡಿ ಶಿಕ್ಷಕರಿಗೆ ಸಂತೋಷವಾಯಿತು. ಪದ್ಮಿನಿ ಟೀಚರ್ ಮಕ್ಕಳಿಗೆ ಶಹಬ್ಬಾಸ್ ಹೇಳಿದರು. ಹಾಗೂ ಇತರ ಮಕ್ಕಳಿಗೆ 'ಇ–ಮೇಲ್' ಪತ್ರದ ಬಗ್ಗೆ, ಅದರ ಆವಶ್ಯಕತೆಯ ಬಗ್ಗೆ ತಿಳಿಸಿದರು. ಯಾಣಕ್ಕೆ ಪ್ರವಾಸ ಹೋಗೋಣ ಎಂದರು. ಮಕ್ಕಳಿಗೆಲ್ಲ ಸಂತೋಷವಾಯಿತು.

**ಕ್ಷೇತ್ರ : ಬರೆಯುವುದು**
**ಸಾಮರ್ಥ್ಯ : ವಿವಿಧ ನಮೂನೆಯ ಉಭಯ ಕುಶಲೋಪರಿ ಪತ್ರ ಮತ್ತು ಪ್ರವಾಸ ಲೇಖನಗಳನ್ನು ಬರೆಯುವುದು**

## ಪದಗಳ ಅರ್ಥ

ಸಂದೇಶ– ಸುದ್ದಿ; ನಿರೂಪ. ವಿನಿಮಯ–ಒಂದಕ್ಕೆ ಬದಲಾಗಿ ಮತ್ತೊಂದನ್ನು ಕೊಡುವಿಕೆ; ಅದಲು ಬದಲು ಮಾಡಿಕೊಳ್ಳು. ಚೂಟಿ–ಚುರುಕು; ಲವಲವಿಕೆ. ವಿಶೇಷ– ಪ್ರತ್ಯೇಕವಾದ; ವಿಶಿಷ್ಟವಾದ. ಗಗನಚುಂಬಿ–ಆಕಾಶವನ್ನು ಮುಟ್ಟುವಂತಹದು; ಬಹಳ ಎತ್ತರವಾದುದು. ಹೆಬ್ಬಂಡೆ–ದೊಡ್ಡದಾದ ಕಲ್ಲು. ಇಕ್ಕಟ್ಟು–ಸಂದಿಗ್ಧ; ಕಿರಿದಾದ. ಶಿಖರ– ಮರ, ಬೆಟ್ಟಗಳ ತುದಿ; ದೇವಾಲಯಗಳ ಗೋಪುರ. ಉತ್ಪತ್ತಿ– ಸೃಷ್ಟಿ; ಉಂಟಾಗು; ಹುಟ್ಟು.

**ವಿವರ ತಿಳಿಯಿರಿ :**

**ಕಂಪ್ಯೂಟರ್** :– ಇದನ್ನು ಸಂಗಣಕವೆಂದೂ ಗಣಕಯಂತ್ರವೆಂದೂ ಕರೆಯುತ್ತಾರೆ.

**ಭೂಗರ್ಭ ಶಾಸ್ತ್ರ** :– ಭೂಮಿಯ ಪದರಗಳ ಮತ್ತು ಭೂಮಿಯ ಒಳಗಿರುವ ವಸ್ತುಗಳ ವಿಷಯವನ್ನು ಅಧ್ಯಯನ ಮಾಡುವ ಶಾಸ್ತ್ರ.

**ಗುಪ್ತ ಸಂಕೇತ**:– 'ಇ–ಮೇಲ್' ಬಳಸುವ ಪ್ರತಿಯೊಬ್ಬರಿಗೂ ಅವರದ್ದೇ ಆದ ಗುಪ್ತ ಸಂಕೇತವಿರುತ್ತದೆ. ಅದನ್ನು ಬಳಸಿದಾಗ ಮಾತ್ರ ಅವರವರ 'ಇ–ಪತ್ರ' (ಅಂಚೆ) ತೆರೆದುಕೊಳ್ಳುವುದು. ಗುಪ್ತ ಸಂಕೇತವನ್ನು 'ಪಾಸ್‌ವರ್ಡ್'ಎಂದು ಕರೆಯುತ್ತಾರೆ.

**ಚಾರಣ** :– ಬೆಟ್ಟ ಗುಡ್ಡಗಳ ಕಡೆಗೆ ಸಾಹಸದ ನಡಿಗೆ.

**ದಂತಕಥೆ**– ಬಾಯಿಯಿಂದ ಬಾಯಿಗೆ ಹರಡುವ ಕಲ್ಪಿತ ಕಥೆ.

©KTBS Not to be republished

## ಅಭ್ಯಾಸಗಳು

**ಅ. ಇಲ್ಲಿರುವ ಪದಗಳನ್ನು ಬಳಸಿ ಸೂಕ್ತವಾದುದನ್ನು ಬಿಟ್ಟ ಸ್ಥಳದಲ್ಲಿ ತುಂಬಿರಿ.**

(ಪದ್ಮಿನಿ, ರಾಗಿಣಿ ಮತ್ತು ಜೆನಿಫರ್, ಗುಪ್ತ, ರಾಜು, ದಂತ.)

೧. ಅದೊಂದು ಭಾನುವಾರ ಎಲ್ಲರೂ ________ ವಿನ ಮನೆಗೆ ಬಂದರು.

೨. 'ಇ ಮೇಲ್' ತೆರೆಯಲು ________ ಸಂಕೇತದ ಅಗತ್ಯವಿದೆ.

೩. ವಿಶೇಷ ಪತ್ರ ತಯಾರಿಸಲು ಹೇಳಿದ್ದು ________ ಮೇಡಂ.

೪. ಯಾಣದ ಕುರಿತಾಗಿ ಒಂದು ____________ ಕಥೆಯಿದೆ.

೫. ಯಾಣದ ಚಿತ್ರಗಳನ್ನು ಅದರ ವಿವರಗಳನ್ನು ____________________ ಓದಿದರು.

**ಆ. ಗುಂಪಿಗೆ ಸೇರದ ಪದ ಗುರುತಿಸಿ ಬರೆಯಿರಿ.**

೧. ಕಾಗದ, ಪತ್ರ, ದೂರವಾಣಿ, ಓಲೆ.

೨. ಹೆಬ್ಬಂಡೆ, ಹಿರಿದು ಬಂಡೆ, ಕಿರಿದು ಬಂಡೆ, ದೊಡ್ಡ ಬಂಡೆ.

೩. ಸಂತೋಷ, ದುಃಖ, ಆನಂದ, ಸುಖ.

೪. ಸಂಪತ್ತು, ಆಪತ್ತು, ಧನ, ಐಶ್ವರ್ಯ.

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.**

೧. ರಾಜುವಿನ ಮನೆಗೆ ಯಾರು ಯಾರು ಬಂದರು?

೨. ಇ-ಅಂಚೆ ಎಂದರೇನು?

೩. ಯಾಣದ ಯಾವ ಶಿಖರ ಉಕ್ಕಿನಕೋಟೆಯಂತಿದೆ?

೪. ಯಾಣದ ಕಲ್ಲು ಯಾವುದರಿಂದ ಉತ್ಪತ್ತಿಯಾಗಿದೆ?

೫. ಯಾಣದಲ್ಲಿ ಯಾವ ದೇವರ ಉತ್ಸವ ನಡೆಯುತ್ತದೆ?

**ಈ. ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಸುಂದರ್ ಗುಪ್ತ ಸಂಕೇತವನ್ನು ರಾಜುವಿಗೆ ಮಾತ್ರ ಏಕೆ ಹೇಳಿದರು?

೨. ಯಾಣದ ಕುರಿತಾಗಿ ಇರುವ ಒಂದು ದಂತಕಥೆಯನ್ನು ಬರೆಯಿರಿ.

೩. ಯಾವ ದೃಶ್ಯಗಳು ನೋಡುಗರನ್ನು ಚಕಿತಗೊಳಿಸುತ್ತವೆ?

**ಉ. ಸಂಧಿ ಬಿಡಿಸಿ. ಸಂಧಿಯನ್ನು ಹೆಸರಿಸಿರಿ.**

| | | |
|---|---|---|
| ಭಸ್ಮಾಸುರ | ಭೈರವೇಶ್ವರ | ಏಕೈಕ |
| ಇತ್ಯಾದಿ | ಸೂರ್ಯೋದಯ | |

**ಊ. ನಿಮ್ಮೂರಿನ ರಸ್ತೆಗೆ ಬೀದಿ ದೀಪವನ್ನು ಅಳವಡಿಸುವಂತೆ ಕೋರಿ ಸಂಬಂಧಿಸಿದ ಕಛೇರಿಗೆ ಒಂದು ಪತ್ರ ಬರೆಯಿರಿ.**

**ವ್ಯಾಕರಣ ಮಾಹಿತಿ**

ಹಿಂದಿನ ತರಗತಿಯಲ್ಲಿ ನಾವು ಕನ್ನಡ ಸಂಧಿಗಳನ್ನು ಅಧ್ಯಯನ ಮಾಡಿದ್ದೆವು. ಈಗ ಸಂಸ್ಕೃತ ಪದಗಳು ಪರಸ್ಪರ ಪರವಾದಾಗ ಆಗುವ ಸಂಧಿಗಳ ಕುರಿತು ತಿಳಿಯೋಣ.

©KTBS Not to be republished

## ಸಂಸ್ಕೃತ ಸಂಧಿ :

**ಸವರ್ಣ ದೀರ್ಘ ಸಂಧಿಗಳು :** ಒಂದೇ ಜಾತಿಯ ಸ್ವರಾಕ್ಷರಗಳು ಪರಸ್ಪರ ಸೇರಿ ದೀರ್ಘರೂಪ ಪಡೆಯುವುದು ಸವರ್ಣದೀರ್ಘ ಸಂಧಿ. (ಉದಾ: ಪೂರ್ವಪದದ ಕೊನೆಯ 'ಅ' ಹಾಗೂ ಉತ್ತರ ಪದದ ಮೊದಲಿನ **'ಅ'** ಸೇರಿ **'ಆ'** ಆಗುವುದು. ಅಂತೆಯೇ ಇ + ಇ = **ಈ, ಉ** + **ಉ** = **ಊ** ಆಗುತ್ತವೆ)

**ಸೂಚನೆ:** ಪೂರ್ವಪದದ ಕೊನೆಯ ಅಕ್ಷರ ದೀರ್ಘವಾಗಿದ್ದರೆ ಅಡ್ಡಿಯೇನಿಲ್ಲ. ಅಂತೆಯೇ ಉತ್ತರ ಪದದ ಮೊದಲ ಅಕ್ಷರ ದೀರ್ಘವಾಗಿರಲೂಬಹುದು.

**ಉದಾ:**

- ದೇವ + ಆಲಯ = ದೇವಾಲಯ (ಅ + ಆ = ಆ)
- ದೇವ + ಅಸುರ = ದೇವಾಸುರ (ಅ + ಅ = ಆ)
- ಮಹಾ + ಆತ್ಮ = ಮಹಾತ್ಮ (ಆ + ಆ = ಆ)
- ರವಿ + ಇಂದ್ರ = ರವೀಂದ್ರ (ಇ + ಇ = ಈ)
- ಗಿರಿ + ಈಶ = ಗಿರೀಶ (ಇ + ಈ = ಈ)
- ಗುರು + ಉಪದೇಶ = ಗುರೂಪದೇಶ (ಉ + ಉ = ಊ)

**ಗುಣಸಂಧಿ :** 'ಅ', 'ಆ'–ಕಾರಗಳ ಮುಂದೆ 'ಇ', 'ಈ'–ಕಾರವು ಬಂದಾಗ 'ಏ'–ಕಾರವು, 'ಉ', 'ಊ'ಕಾರವು ಬಂದಾಗ 'ಓ'ಕಾರವು, 'ಋ'–ಕಾರವು ಬಂದಾಗ 'ಅರ್'–ಕಾರವು ಸೇರಿದಾಗ ಗುಣಸಂಧಿ ಎನಿಸುವುದು.

**ಉದಾ :**

- ಸುರ + ಇಂದ್ರ = ಸುರೇಂದ್ರ (ಅ + ಇ = ಏ)
- ದೇವ + ಈಶ = ದೇವೇಶ (ಅ + ಈ = ಏ)
- ಚಂದ್ರ + ಉದಯ = ಚಂದ್ರೋದಯ (ಅ + ಉ = ಓ)
- ಮಹಾ + ಋಷಿ = ಮಹರ್ಷಿ (ಆ + ಋ = ಅರ್)

©KTBS Not to be republished

# ಪತ್ರ ಲೇಖನ

ಹಿಂದಿನ ತರಗತಿಯಲ್ಲಿ ನಾವು ಪತ್ರಲೇಖನ ಮಾಡುವಾಗ ಅನುಸರಿಸುವ ವಿಧಾನಗಳು, ಸಂಬೋಧನೆಗಳು ಹಾಗೂ ಪತ್ರಗಳ ಕೆಲವು ವಿಧಗಳ ಬಗ್ಗೆ ತಿಳಿದುಕೊಂಡಿದ್ದೆವು. ಇಲ್ಲಿ ವ್ಯಾವಹಾರಿಕ ಪತ್ರ (ಅರ್ಜಿ ಬರವಣಿಗೆ) ಬರೆಯುವ ಬಗ್ಗೆ ತಿಳಿಯೋಣ.

ವ್ಯಾವಹಾರಿಕ ಪತ್ರಗಳಲ್ಲಿ ನಿರ್ದಿಷ್ಟವಾದ ಉದ್ದೇಶವಿರುತ್ತದೆ. ಉಳಿದಂತೆ ಖಾಸಗಿ ಪತ್ರದ ಎಲ್ಲ ನಿಯಮಗಳು ಅನ್ವಯಿಸುತ್ತವೆ. ಆದರೂ ಕೆಲವು ಬದಲಾವಣೆಗಳನ್ನು ಗಮನಿಸಬಹುದು. ಖಾಸಗಿ ಪತ್ರದಲ್ಲಿ ನಾವು ಯಾರಿಗೆ ಪತ್ರ ಬರೆಯುತ್ತೇವೆಯೋ ಅವರ ವಿಳಾಸವನ್ನು ಕೊನೆಯಲ್ಲಿ ಮಾತ್ರ ಬರೆಯುತ್ತೇವೆ. ಆದರೆ ವ್ಯಾವಹಾರಿಕ ಪತ್ರದಲ್ಲಿ ವಿಳಾಸವನ್ನು ಎರಡನೆಯ ಹಂತದಲ್ಲಿ ಬರೆಯುತ್ತೇವೆ.

**ಪ್ರಥಮ ಹಂತ:–** ಬರೆಯುವವರ ವಿಳಾಸವು/ಶಿರೋನಾಮೆಯು 'ಲೆಟರ್ ಹೆಡ್'ನಲ್ಲಿ ಇದ್ದರೆ ದಿನಾಂಕವನ್ನು ಮಾತ್ರ ಸೂಚಿಸಿದರೆ ಸಾಕು. ಮುದ್ರಿತ ವಿಳಾಸವಿಲ್ಲದಿದ್ದರೆ ಪತ್ರದ ಬಲಭಾಗದಲ್ಲಿ ಅಥವಾ ಎಡಭಾಗದಲ್ಲಿ ವಿಳಾಸ ಬರೆಯಬೇಕು.

**ಎರಡನೆಯ ಹಂತ:–** ಯಾರಿಗೆ ಪತ್ರ ಬರೆಯುತ್ತೇವೆಯೋ ಅವರ ವಿಳಾಸವನ್ನು ಎಡಭಾಗದಲ್ಲಿ ಬರೆಯಬೇಕು.

**ಮೂರನೆಯ ಹಂತ:–** ಮಾನ್ಯರೆ ಅಥವಾ ಮಹನೀಯರೆ ಎಂದು ಸಂಬೋಧಿಸಬೇಕು.

**ನಾಲ್ಕನೆಯ ಹಂತ:–** ಇಲ್ಲಿ ಪತ್ರದ ವಿಷಯವಿರಬೇಕು. ಖಾಸಗಿ ಪತ್ರದಲ್ಲಿ ವಿಷಯ ಎಂಬ ಹಂತ ಇರುವುದಿಲ್ಲ. ಪತ್ರದ ಸಾರವನ್ನು ಮೂರು ನಾಲ್ಕು ಪದಗಳಲ್ಲಿ ಹೇಳುವ ಕ್ರಮವಿದು.

**ಐದನೆಯ ಹಂತ:–** ಇಲ್ಲಿ ಪತ್ರದ ಒಡಲು ಬರಬೇಕು. ಒಡಲು ಪತ್ರದ ಅತಿಮುಖ್ಯಭಾಗ. ವಿಷಯವನ್ನು ವಿವರಿಸುವುದು ಇಲ್ಲಿಯೇ. ಪತ್ರದಲ್ಲಿ ಹೇಳಬೇಕಾದ ವಿಷಯವನ್ನು ಪೂರ್ತಿಯಾಗಿ ಇಲ್ಲಿ ಬರೆಯಬೇಕು.

**ಆರನೆಯ ಹಂತ:–** 'ವಂದನಾಪೂರ್ವಕ'/ 'ವಂದನೆಗಳೊಂದಿಗೆ' ಎಂದು ಬರೆಯಬೇಕು. ಈ ಪದದೊಂದಿಗೆ ಪತ್ರದ ಮುಕ್ತಾಯವಾಗಬೇಕು. ವ್ಯಾವಹಾರಿಕ ಪತ್ರಗಳಲ್ಲಿ ಸಾಮಾನ್ಯವಾಗಿ ಬಳಸುವ ಪದಗಳೆಂದರೆ ಧನ್ಯವಾದಗಳು, ವಂದನೆಗಳೊಂದಿಗೆ.

**ಏಳನೆಯ ಹಂತ:–** ಪತ್ರದ ಕೊನೆಗೆ ಬಲಭಾಗದಲ್ಲಿ ನಿಮ್ಮ ನಂಬುಗೆಯ / ನಿಮ್ಮ ವಿಶ್ವಾಸಿ ಎಂದು ಬರೆದು ಅದರ ಕೆಳಗೆ ಸಹಿ ಹಾಕಬೇಕು. (ಸಹಿ ಮಾಡಿದ ಅನಂತರ ತಮ್ಮ ಹುದ್ದೆಯ ಮೊಹರು ಇದ್ದರೆ ಹಾಕಬೇಕು.)

ವಿಳಾಸವನ್ನು ೨ನೆಯ ಹಂತದಲ್ಲಿ ಬರೆದಂತೆಯೇ ಲಕೋಟೆಯ ಮೇಲೆಯೂ ಬರೆಯಬೇಕು.

©KTBS Not to be republished

**ಮಾದರಿ ಅರ್ಜಿ ಪತ್ರ:–**

**ನಿಮ್ಮ ಊರಿನ ಹಾಳಾಗಿರುವ ರಸ್ತೆಯನ್ನು ದುರಸ್ತಿಗೊಳಿಸಲು ಗ್ರಾಮ ಪಂಚಾಯಿತಿಯವರಿಗೆ ಬರೆದ ಮನವಿಪತ್ರ.**

**ಇವರಿಂದ** **ದಿನಾಂಕ: ೨೨–೧೧–೨೦೨೨**

ವಿನಯ್‌ಕುಮಾರ್, ಗ್ರಾಮಸ್ಥ,
ಕಾವಡಿ ಅಗ್ರಹಾರ,
ಕೆಂಪಾಪುರ.

**ಇವರಿಗೆ**

ಅಧ್ಯಕ್ಷರು,
ಗ್ರಾಮ ಪಂಚಾಯಿತಿ,
ಕಾವಡಿ ಅಗ್ರಹಾರ.

**ಮಾನ್ಯರೇ,**

**ವಿಷಯ:** ಹಾಳಾಗಿರುವ ರಸ್ತೆಯನ್ನು ದುರಸ್ತಿ ಮಾಡಿಸುವ ಬಗ್ಗೆ.

ಈ ವರ್ಷ ನಮ್ಮ ಕೆಂಪಾಪುರದಲ್ಲಿ ಅತಿವೃಷ್ಟಿಯಿಂದಾಗಿ ರಸ್ತೆಗಳೆಲ್ಲಾ ಹಾಳಾಗಿವೆ. ರಸ್ತೆಯಲ್ಲಿ ಹೊಂಡಗುಂಡಿಗಳು ಉಂಟಾಗಿವೆ. ರಸ್ತೆಯಲ್ಲಿ ಸರಾಗವಾಗಿ ನಡೆದಾಡಲು ಆಗುತ್ತಿಲ್ಲ. ರಾತ್ರಿಯ ವೇಳೆ ನಡೆದಾಡುವಾಗ ಹಲವರು ಬಿದ್ದು ಕೈಕಾಲು ಮುರಿದುಕೊಂಡಿದ್ದಾರೆ. ಇದರಿಂದ ಭಯದ ಸ್ಥಿತಿಯಲ್ಲಿ ಸಾರ್ವಜನಿಕರಿದ್ದಾರೆ. ಈ ವಿಚಾರ ತಮ್ಮ ಗಮನಕ್ಕೂ ಬಂದಿದೆ. ಆದರೆ ಯಾವ ಕ್ರಮವನ್ನೂ ಕೈಗೊಳ್ಳದಿರುವುದು ಬೇಸರ ತಂದಿದೆ.

ಇನ್ನಾದರೂ ಗಮನಹರಿಸಿ ಸೂಕ್ತ ಕ್ರಮ ಕೈಗೊಂಡು, ಹಾಳಾಗಿರುವ ರಸ್ತೆಗಳನ್ನು ಸರಿಪಡಿಸಿ ಅನುಕೂಲ ಮಾಡುವಿರೆಂದು ನಿರೀಕ್ಷಿಸುತ್ತೇನೆ. ಇದರೊಂದಿಗೆ ಸಾರ್ವಜನಿಕರಿಂದ ಸಹಿ ಸಂಗ್ರಹಿಸಿದ ದಾಖಲೆ ಪತ್ರಗಳನ್ನು ಲಗತ್ತಿಸಲಾಗಿದೆ.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**
**ಸಹಿ**
**(ವಿನಯ್ ಕುಮಾರ್)**

©KTBS
Not to be republished

## ಭಾಷಾ ಆಟಗಳು.

**ಅ. ಕೆಳಗಿನ ಪದಗಳಲ್ಲಿ ಬಳಕೆಯಾಗಿರುವ ಅಕ್ಷರಗಳನ್ನು ಹೇಗಾದರೂ ಜೋಡಿಸಿ ಅರ್ಥವತ್ತಾದ ಪೂರ್ಣಪದಗಳನ್ನು ರಚಿಸಿರಿ.**

ಸಹಾಯಕ್ಕೆ ಮಾದರಿ ಗಮನಿಸಿರಿ.

**ಮಾದರಿ:–** ಯಜಮಾನ– ಮಾನ, ಜನ, ಜಯ, ನಯ, ಜಮಾನ, ಮಾಯ.

ಅ. ನರಕವಾಸ

ಆ. ದಶರಥಸುತಮಹಾಯಾನ

ಇ. ರಸಕವಳಮೆಲ್ಲು

ಈ. ರಸಪಾಕನಳಪಾಕ

**ಆ. ಇಲ್ಲಿ ಚೆಲ್ಲಾಪಿಲ್ಲಿಯಾಗಿ ಹರಡಿರುವ ಅಕ್ಷರಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿದರೆ ನಿಮಗೆ ಪದಗಳು ಗೊತ್ತಾಗುತ್ತವೆ. ಹುಡುಕಿ ಸರಿಪಡಿಸಬಲ್ಲಿರಾ!**

೧. ಪ್ರ ರ್ಯ ಕೃ ದ ತಿ ಸೌಂ–

೨. ಚಿ ಮ ಳೆ ರೂ ಕ್ಕ ಲ್ಲ ಕ್ಕ –

೩. ಸ ದ್ಯೆ ನ ವ ಮಾ ರು –

೪. ಮ ಹ ವಾ ದು ನೋ ರ ದು–

೫. ಸ್ನೇ ಸ ಗೆ ದ ಹ ಯಿಂ ಲಿ –

### ಯೋಜನೆ

- ವಿವಿಧ ನಮೂನೆಯ ಪತ್ರಗಳನ್ನು ಬರೆಯಿರಿ. (ವ್ಯಾವಹಾರಿಕ, ಖಾಸಗಿ, ಆದೇಶ)

### ಓದಿಗೆ ಮನ್ನಣೆ :

- ನಮ್ಮ ನಾಡಿನ ಅನೇಕ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ತಿಳಿದುಕೊಳ್ಳಿರಿ.
- ಚಾರಣಕ್ಕೆ ಪ್ರಸಿದ್ಧವಾದ ಯಾಣ, ಕೆಮ್ಮಣ್ಣುಗುಂಡಿಯಂಥ ಸ್ಥಳಗಳ ಬಗ್ಗೆ ಓದಿ ತಿಳಿದುಕೊಳ್ಳಿರಿ.

### ಶುಭ ನುಡಿ :

- ದೇಶ ಸುತ್ತು ಅನುಭವ ಪಡೆ.
- ಪ್ರಕೃತಿ ಸೌಂದರ್ಯವನ್ನು ನೋಡಿ ಆನಂದಿಸಬೇಕೇ ಹೊರತು ಹಾಳು ಮಾಡಬಾರದು.
- ಪ್ರಕೃತಿ ಬೆಳೆಯಲಿ, ಜೀವರಾಶಿ ಉಳಿಯಲಿ.

* * * * *

©KTBS Not to be republished

# ೮. ಕರ್ನಾಟಕ ಏಕೀಕರಣ

H7H5D8

– ಸಮಿತಿ ರಚನೆ

**ಪ್ರವೇಶ:** ಕನ್ನಡನಾಡು ಕನ್ನಡಿಗರ ನಾಡು. ಅದು ಹರಿದು ಚಿಂದಿಯಾದ ಕಾಲವೊಂದಿತ್ತು. ಕನ್ನಡಿಗರು ಚಳುವಳಿಯ ಮೂಲಕ ನ್ಯಾಯ ಪಡೆಯಲು ಹೋರಾಟ ನಡೆಸಿದರು. ಅಂದಿನ ಏಕೀಕರಣ ಚಳುವಳಿಯನ್ನು ಇಂದೂ ನಾವು ಸ್ಮರಿಸಿಕೊಳ್ಳಬೇಕು. ಕನ್ನಡ ನಾಡಿಗೆ ಇತರ ಭಾಷಿಕರಿಂದ ಪದೇ ಪದೇ ಆಘಾತ ಒದಗಿಬಂದಿರುವುದನ್ನು ಗಮನಿಸುತ್ತಾ ಬಂದಿದ್ದೇವೆ. ಮಾತೃಭಾಷೆಗೆ ಅನ್ಯಾಯವಾದಾಗ ಒಕ್ಕೊರಲಿನಿಂದ ಪ್ರತಿಭಟಿಸಬೇಕು ಎಂಬುದು ಪ್ರಸ್ತುತ ಪಾಠದ ಆಶಯ.



©KTBS Not to be republished

ಮಕ್ಕಳೆಲ್ಲ ತರಗತಿ ಕೋಣೆಯಲ್ಲಿ ಕುಳಿತಿದ್ದಾರೆ. ರೇಡಿಯೋ ಸಿದ್ಧವಾಗಿದೆ. ಶಿಕ್ಷಕರು "ಮಕ್ಕಳೇ, ಇದೀಗ ರೇಡಿಯೋದಲ್ಲಿ ನಮ್ಮ ಕನ್ನಡನಾಡು ಹೇಗೆ ಉದಯವಾಯಿತು ಎಂಬುದರ ಬಗ್ಗೆ ಹಿರಿಯರೊಬ್ಬರು ಮಾತನಾಡುತ್ತಾರೆ. ಯಾರೂ ಗಲಾಟೆ ಮಾಡಬಾರದು. ಸುಮ್ಮನಿದ್ದು ಆಲಿಸಿರಿ. ಬಳಿಕ ನಿಮ್ಮ ಅನಿಸಿಕೆಗಳನ್ನು ಹೇಳಬಹುದು" ಎಂದು ರೇಡಿಯೋ ಕೀಲಿ ತಿರುಗಿಸಿದರು. ಸರಿಯಾದ ಸಮಯಕ್ಕೆ ರೇಡಿಯೋದಲ್ಲಿ "ಆಕಾಶವಾಣಿ, ಇದೀಗ ಮಕ್ಕಳ ಕಾರ್ಯಕ್ರಮ. ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸಿದ ಹಿರಿಯರೊಬ್ಬರು ತಮ್ಮ ಅನುಭವಗಳನ್ನು ನಿಮ್ಮ ಮುಂದೆ ಇದೀಗ ಪ್ರಸ್ತುತಪಡಿಸುತ್ತಾರೆ. ಆಲಿಸಿರಿ" ಎಂಬ ನುಡಿ ಹರಿದುಬಂತು.

"ಪ್ರೀತಿಯ ಮುದ್ದು ಮಕ್ಕಳೆ, ನೀವೀಗ ಕರ್ನಾಟಕ ಏಕೀಕರಣದ ಬಗ್ಗೆ ಆಲಿಸಲು ಬಹಳ ಕುತೂಹಲಭರಿತರಾಗಿದ್ದೀರಿ, ಅಲ್ಲವೇ? ನಮ್ಮ ಕರ್ನಾಟಕದ ಕನ್ನಡ ಮಾತನಾಡುವ ಜನರೆಲ್ಲ

ಒಂದೇ ಪ್ರದೇಶಕ್ಕೆ ಸೇರಬೇಕೆಂಬ ಇಚ್ಛೆ ನಮ್ಮೆಲ್ಲರದಾಗಿತ್ತು. ಇದು ನಮ್ಮದೇ ನೆಲ ಎಂದು ಹೇಳಿಕೊಳ್ಳಲು ಎಲ್ಲ ಕನ್ನಡಿಗರಿಗೆ ಅವಕಾಶವಿರಲಿಲ್ಲ. ಕಾರಣವೇನೆಂದರೆ ಮೈಸೂರು ಸಂಸ್ಥಾನ ಹೊರತುಪಡಿಸಿ ಉಳಿದ ಕನ್ನಡದ ಪ್ರದೇಶಗಳೆಲ್ಲ ಮುಂಬೈ, ಮದ್ರಾಸ್, ಕೊಡಗು ಮತ್ತು ಇತರ ಸಂಸ್ಥಾನಗಳಲ್ಲಿ ಹಂಚಿಹೋಗಿತ್ತು. ಆಗ ಬ್ರಿಟಿಷರ ಆಡಳಿತವಿತ್ತು. ಅವರ ಆಡಳಿತದಲ್ಲಿ ನಮಗೆ ಒಟ್ಟಾಗಲು ಅವಕಾಶವೇ ಇರಲಿಲ್ಲ. ನಮ್ಮ ಕನ್ನಡಿಗರು ಪರಕೀಯರಂತೆ ಜೀವನ ನಡೆಸುವ ಅಸಹನೀಯ ಪರಿಸ್ಥಿತಿ ಎದುರಾಗಿತ್ತು.

ಮಕ್ಕಳೇ, ನಮ್ಮ ಕನ್ನಡ, ಕರ್ನಾಟಕ ಸುಮಾರು ಎರಡುಸಾವಿರ ವರ್ಷಗಳ ಇತಿಹಾಸ ಹೊಂದಿದೆ. ಹಲವು ಸಾಮ್ರಾಜ್ಯಗಳ ಆಳ್ವಿಕೆಯ ಅನಂತರ ಕನ್ನಡದ ಅಸ್ತಿತ್ವ ಮೈಸೂರು ಸಂಸ್ಥಾನಕ್ಕೆ ಮಾತ್ರ ಸೀಮಿತವಾಗಿತ್ತು. ಆ ಸಂದರ್ಭದಲ್ಲಿ ಸಮಗ್ರ ಕನ್ನಡಕ್ಕಾಗಿ ಕೆಲವು ಮಹನೀಯರು ಹೋರಾಟ ನಡೆಸಿದರು. ಇಂಥವರಲ್ಲಿ ರಾ.ಹ.ದೇಶಪಾಂಡೆ, ರೊದ್ದ ಶ್ರೀನಿವಾಸ ರಾವ್, ಆಲೂರು ವೆಂಕಟರಾಯ, ಡೆಪ್ಯೂಟಿ ಚೆನ್ನಬಸಪ್ಪ ಮೊದಲಾದವರು ಅಗ್ರಗಣ್ಯರು.

ಮಕ್ಕಳೇ, ಈ ಕನ್ನಡನಾಡು ಏಕೀಕರಣಗೊಳ್ಳಲು ಮತ್ತು ಬ್ರಿಟಿಷರ ವಿರುದ್ಧ ಹೋರಾಡಲು ಕನ್ನಡಿಗರಿಗೆ ಪ್ರೇರಣೆಯಾದ ಘಟನೆಯ ಬಗ್ಗೆ ಹೇಳುತ್ತೇನೆ. ಬ್ರಿಟಿಷರದ್ದು ಒಡೆದು ಆಳುವ ನೀತಿ. ಅದರಂತೆಯೆ ೧೯೦೫ರ ಆಗಸ್ಟ್ ೧೬ರಂದು ಬ್ರಿಟಿಷ್ ಸರ್ಕಾರ ಬಂಗಾಳ ರಾಜ್ಯ ವಿಭಜನೆಗೆ ಮುಂದಾಯಿತು. ಇದನ್ನು ಪ್ರತಿಭಟಿಸಿದ ಬಂಗಾಳಿಗರು 'ವಂಗಭಂಗ' ಎನ್ನುವ ಬೃಹತ್ತಾದ ಚಳುವಳಿಯನ್ನು ನಡೆಸಿದರು. ಇದಕ್ಕೆ ಮಣಿದ ಸರ್ಕಾರ ೧೯೧೧ರಲ್ಲಿ ಪುನಃ ಬಂಗಾಳವನ್ನು ಒಂದು ಮಾಡಿತು. ನೋಡಿ ಮಕ್ಕಳೇ, ಈ ಘಟನೆಯಿಂದ ಪ್ರೇರಿತರಾಗಿ ಕನ್ನಡದ ಕಟ್ಟಾಳುಗಳು ಕನ್ನಡಿಗರನ್ನು ಒಂದು ಮಾಡುವ ಹೋರಾಟವನ್ನು ಪ್ರಾರಂಭಿಸಿದರು.

ಇದಕ್ಕಾಗಿ ಕಾರ್ಯಪ್ರವೃತ್ತರಾದ ರಾ.ಹ.ದೇಶಪಾಂಡೆ ಹಾಗೂ ಸಮಾನ ಮನಸ್ಕ ಕನ್ನಡಿಗರು ಧಾರವಾಡದಲ್ಲಿ ೨೦-೦೭-೧೮೯೦ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು. ಈ ಸಂಘವು ಕನ್ನಡದಲ್ಲಿ ಶಿಕ್ಷಣ, ಕನ್ನಡದಲ್ಲಿ ಸ್ವತಂತ್ರ ಕೃತಿಗಳ ರಚನೆ ಹಾಗೂ ೧೮೯೬ರಲ್ಲಿ 'ವಾಗ್ಭೂಷಣ' ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿತು. ಇದು ಕನ್ನಡಿಗರೆಲ್ಲ ಒಂದಾಗಲು ಪ್ರೇರಣೆ ನೀಡಿತು.

ಇದೇ ಸಮಯದಲ್ಲಿ ಆಲೂರು ವೆಂಕಟರಾಯರು, ಗದಿಗೆಯ್ಯ ಹೊನ್ನಾಪುರಮಠ, ಕಡಪಾ ರಾಘವೇಂದ್ರರಾಯ ಮುಂತಾದವರು ಸೇರಿಕೊಂಡು ೧೯೧೬ರಲ್ಲಿ 'ಕರ್ನಾಟಕ ಸಭೆ' ಎಂಬ ಸಂಸ್ಥೆಯನ್ನು ಕಟ್ಟಿದರು. ಇದಕ್ಕೆ ರಾಜಕೀಯ ಬೆಂಬಲವೂ ಇತ್ತು. ಆ ಕಾಲದಲ್ಲಿ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಬಿರುಸಿನ ಚಳುವಳಿ ನಡೆಯುತ್ತಿತ್ತು. ಅದರ ನಡುವೆಯೂ ನಮ್ಮ ಕರ್ನಾಟಕ ಏಕೀಕರಣದ ಚಳುವಳಿಯು ಕಾವು ಪಡೆಯುತ್ತಿತ್ತು. ಈ ಹೋರಾಟದಲ್ಲಿ ನಾನೂ ಕೂಡ ಪಾಲ್ಗೊಂಡಿದ್ದೆ.

©KTBS Not to be republished

ಮಕ್ಕಳೇ, ಕರ್ನಾಟಕ ವಿದ್ಯಾವರ್ಧಕ ಸಂಘ ಆಗ ಮುಂಬೈ ಪ್ರಾಂತ್ಯದ ಧಾರವಾಡದಲ್ಲಿ ಕೆಲಸ ಮಾಡುತ್ತಿತ್ತು. ದಕ್ಷಿಣ ಭಾಗದಲ್ಲಿ ಅಂದಿನ ಮೈಸೂರು ಸಂಸ್ಥಾನದ ಕೆಲವು ಹಿರಿಯರು, ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು ಕನ್ನಡದ ಬಗ್ಗೆ ಚಿಂತಿಸಿದರು. ೧೯೧೫ರಲ್ಲಿ 'ಕರ್ನಾಟಕ ಸಾಹಿತ್ಯ ಪರಿಷತ್ತು' ಎಂಬ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು. (ಇದರ ಹೆಸರು ೧೯೩೮ರಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು' ಎಂದು ಬದಲಾಯಿತು.) ಕನ್ನಡ ನಾಡು –ನುಡಿಯ ಬೆಳವಣಿಗೆ, ಸಂರಕ್ಷಣೆ ಮತ್ತು ಕರ್ನಾಟಕ ಏಕೀಕರಣವೇ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶವಾಯಿತು. ಕನ್ನಡ ಗ್ರಂಥಗಳ ಪ್ರಕಟಣೆ, ಸಂಶೋಧನೆ, ನಿಘಂಟು ರಚನೆ ಮುಂತಾದ ಸವಾಲುಗಳನ್ನು ಗಟ್ಟಿತನದಿಂದ ಎದುರಿಸಿ ಕನ್ನಡಕ್ಕೊಂದು ನೆಲೆ ಕಲ್ಪಿಸುವಲ್ಲಿ ಸಾಹಿತ್ಯ ಪರಿಷತ್ತಿನ ಸಾಧನೆ ಅಗಾಧವಾದುದು. ಪರಭಾಷೆ ಹಾಗೂ ಸಂಸ್ಕೃತಿಯ ಕಬಂಧಬಾಹುವಿನಲ್ಲಿ ಸಿಕ್ಕಿದ್ದ ಜನಮನವನ್ನು ಒಗ್ಗೂಡಿಸಿ ಕನ್ನಡ ಮನ-ಮನೆ ಮುಟ್ಟಲು ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಲಾಯಿತು. ಕನ್ನಡಿಗರನ್ನು ಒಂದುಗೂಡಿಸಿ ಕರ್ನಾಟಕದ ಏಕೀಕರಣಕ್ಕೆ ದನಿ ಎತ್ತುವ ಮೂಲಕ ಏಕೀಕರಣದ ಬೇಡಿಕೆಗೆ ವೇದಿಕೆ ಕಲ್ಪಿಸಿತು.

ಮಕ್ಕಳೇ, ೧೯೨೪ರಲ್ಲಿ ಬೆಳಗಾವಿಗೆ ಮಹಾತ್ಮ ಗಾಂಧೀಜಿಯವರು ಆಗಮಿಸಿದ್ದರು. ಅವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಮಹಾಧಿವೇಶನ ನಡೆಯಿತು. ದೇಶೀಯ ಭಾಷೆಗಳನ್ನು ಆಧರಿಸಿ ಪ್ರಾಂತ್ಯಗಳ ವಿಂಗಡಣೆ ಆಗಬೇಕು ಎಂಬ ಅಭಿಪ್ರಾಯ ಜನಸಾಮಾನ್ಯರಲ್ಲಿತ್ತು. ಆಗ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರವ್ಯಾಪಿ ಆಂದೋಲನ ರೂಪಿಸುತ್ತಿದ್ದ ಕಾಂಗ್ರೆಸ್ ನಾಯಕರಲ್ಲಿಯೂ ಇದರ ಬಗ್ಗೆ ಒಮ್ಮತ ಮೂಡಿತ್ತು. ಆ ಸಂದರ್ಭದಲ್ಲಿ ಕರ್ನಾಟಕ ಏಕೀಕರಣಕ್ಕೂ ವಿಶೇಷ ಚಾಲನೆ ದೊರೆಯಿತು. ೨೫–೧೨–೧೯೨೪ರಂದು ಸರ್ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ಸಭೆ'ಯ ಮೊದಲ ಕಾರ್ಯಕ್ರಮ ನಡೆಯಿತು. ಅವತ್ತು ಅಲ್ಲಿ ಹುಯಿಲಗೋಳ ನಾರಾಯಣರಾಯರು ರಚಿಸಿದ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಗೀತೆಯನ್ನು ಮೊದಲಬಾರಿಗೆ ಹಾಡಲಾಯಿತು. ಈ ಸಭೆಯ ಪರಿಣಾಮವಾಗಿ ಮದ್ರಾಸ್ ಮತ್ತು ಮುಂಬೈ ವಿಧಾನ ಸಭೆಗಳಲ್ಲೂ ಕರ್ನಾಟಕ ಏಕೀಕರಣದ ವಿಷಯ ಪ್ರಸ್ತಾಪಿತಗೊಂಡಿತು.

ಮಕ್ಕಳೇ, ಕರ್ನಾಟಕ ಏಕೀಕರಣಕ್ಕೆ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಕರಾವಳಿ ಕರ್ನಾಟಕದಿಂದಲೂ ಬೆಂಬಲ ವ್ಯಕ್ತವಾಯಿತು. ಸಮಗ್ರ ಕರ್ನಾಟಕದ ಕನಸು ಹೊತ್ತ ಏಕೀಕರಣ ಚಳುವಳಿ ಕೆಲವು ವರ್ಷಗಳಲ್ಲಿ ಹೊಸ ರೂಪ ಪಡೆದುಕೊಂಡಿತು. ಹೋರಾಟಗಾರರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿತು. ನಾಯಕರ ಸಂಖ್ಯೆಯೇ ನೂರಕ್ಕೂ ಮಿಕ್ಕಿತ್ತು. ಇದರ ಫಲವಾಗಿ ಮದ್ರಾಸ್ ಮತ್ತು ಮುಂಬೈ ಪ್ರಾಂತ್ಯಗಳಲ್ಲಿ ಚಳುವಳಿ ಬಿರುಸುಗೊಂಡಿತು.

ಹೀಗೆ ಚಳುವಳಿ ಮುಂದುವರೆದಿತ್ತು. ೧೯೪೭ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂತು. ಅನಂತರ ಭಾರತ ಸರ್ಕಾರವು ಭಾಷಾವಾರು ಪ್ರಾಂತ್ಯಗಳ ರಚನೆಗೆ ನಿರ್ಧರಿಸಿತು. ಅದರಂತೆ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ೧೯೫೬ರ ನವೆಂಬರ್ ೧ ರಂದು ಒಂದೇ ರಾಜ್ಯದ

© KTBS Not to be republished

ಆಡಳಿತ ವ್ಯಾಪ್ತಿಗೆ ಬಂದರು. ಆಗ ಅದನ್ನು 'ಮೈಸೂರು ರಾಜ್ಯ' ಎಂದು ಕರೆಯಲಾಯಿತು. ಆದರೆ ಭಾಷಾವಾರು ಪ್ರಾಂತ್ಯಗಳ ರಚನೆಯ ಸಂದರ್ಭದಲ್ಲಿ ಆದ ಎಡವಟ್ಟುಗಳ ನಿಮಿತ್ತವಾಗಿ ಕನ್ನಡದ ಕೆಲವು ಭಾಗಗಳು ಈಗಲೂ ಹೊರಗಡೆಯೇ ಉಳಿದಿವೆ. ಮುಂದೆ ೧೯೭೩ರ ನವೆಂಬರ್ ೧ ರಂದು ಕನ್ನಡಿಗರೆಲ್ಲರ ಆಶಯದಂತೆ ಮೈಸೂರು ರಾಜ್ಯವು 'ಕರ್ನಾಟಕ ರಾಜ್ಯ' ಎಂಬ ಹೆಸರು ಪಡೆಯಿತು.

ಮಕ್ಕಳೇ ಕೇಳಿದಿರಲ್ಲ, ನಾನು ನಿಮಗೆ ಸಂಕ್ಷಿಪ್ತವಾಗಿ ಇದರ ಕಥೆ ಹೇಳಿದ್ದೇನೆ. ನೀವು ಈ ಬಗ್ಗೆ ಇನ್ನಷ್ಟು ಮಾಹಿತಿ ತಿಳಿದುಕೊಳ್ಳಬೇಕು. ಕರ್ನಾಟಕ ಏಕೀಕರಣದ ಕನಸನ್ನು ನನಸು ಮಾಡಲು ಇನ್ನೂ ಅನೇಕ ಕಡೆ ಚಳುವಳಿಗಳು ನಡೆದಿವೆ. ಇದಕ್ಕಾಗಿ ಹೋರಾಡಿದ ಮಹಾತ್ಮರನ್ನು ನಾವು ನೆನೆಯಬೇಕು. ಅವರ ಹಾದಿಯಲ್ಲಿ ಸಾಗಿ ನಮ್ಮ ನಾಡು, ನುಡಿ ಹಾಗೂ ಸಂಸ್ಕೃತಿಯನ್ನು ಅಖಂಡವಾಗಿರಿಸಿಕೊಳ್ಳೋಣ ಮಕ್ಕಳೆ. ನಮಸ್ಕಾರ."

**(ರೇಡಿಯೋ ಕಾರ್ಯಕ್ರಮ ಮುಗಿದ ನಂತರ ಮಕ್ಕಳು ಶಿಕ್ಷಕರೊಂದಿಗೆ ಚರ್ಚೆ ನಡೆಸಿದರು.)**

ಕ್ಷೇತ್ರ : ಬರೆಯುವುದು

ಸಾಮರ್ಥ್ಯ: ಸರಳ ಕ್ರಿಯಾತ್ಮಕ ಭಾಷಾಂಶ ನಿಯಮಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಬರವಣಿಗೆಯಲ್ಲಿ ಬಳಸುವುದು.

©KTBS Not to be republished

## ಪದಗಳ ಅರ್ಥ

ಉದಯ–ಹುಟ್ಟು, ಮೂಡು. ಆಕಾಶವಾಣಿ–ಆಕಾಶದಲ್ಲಿ ಕೇಳುವ ಧ್ವನಿ, ರೇಡಿಯೋ, ಬಾನುಲಿ. ಪ್ರಸ್ತುತಪಡಿಸು–ಪ್ರಕಟಿಸು, ಸಾದರಪಡಿಸು. ಆಲಿಸು–ಕೇಳು. ಹೊರತುಪಡಿಸಿ–ಬಿಟ್ಟು. ಕುತೂಹಲ–ಅಚ್ಚರಿ, ವಿಸ್ಮಯ. ಸಂಸ್ಥಾನ–ರಾಜ್ಯ, ದೇಶದ ಒಂದು ಭಾಗ. ಪರಕೀಯ–ಬೇರೆಯ, ಹೊರಗಿನ, ಅನ್ಯ. ಅಸಹನೀಯ–ಸಹಿಸಲು ಸಾಧ್ಯವಿಲ್ಲದ, ತಡೆಯಲಾಗದ. ಅಸ್ತಿತ್ವ–ಇರುವಿಕೆ. ಅಗ್ರಗಣ್ಯ–ಮೊಟ್ಟಮೊದಲಿನ, ಸರ್ವಶ್ರೇಷ್ಠ. ಪ್ರೇರಣೆ–ಪ್ರಚೋದನೆ, ಮುಂದಕ್ಕೆ ಹೋಗುವಂತೆ ಉತ್ತೇಜಿಸುವಿಕೆ. ವಿಭಜನೆ– ವಿಂಗಡಣೆ, ಬೇರ್ಪಡಿಸುವಿಕೆ. ಸಮಾನ ಮನಸ್ಕ–ಒಂದೇ ಬಗೆಯಲ್ಲಿ ಯೋಚನೆ ಮಾಡುವವನು, ತನ್ನಂತೆಯೇ ಅಭಿಪ್ರಾಯ ಉಳ್ಳವನು. ಕಾರ್ಯಪ್ರವರ್ತ–ಕೆಲಸ ಮಾಡಲು ಮೊದಲಾಗು. ಧ್ಯೇಯೋದ್ದೇಶ–ಗುರಿ. ನಿಘಂಟು–ಶಬ್ದಕೋಶ, ಶಬ್ದಾರ್ಥ ಸಂಗ್ರಹ. ನೆಲೆಕಲ್ಪಿಸು– ವೇದಿಕೆ ಒದಗಿಸು, ಅವಕಾಶ ಮಾಡಿಕೊಡು. ಆಯೋಜಿಸು–ಏರ್ಪಾಡುಮಾಡು, ವ್ಯವಸ್ಥೆಗೊಳಿಸು. ಆಂದೋಲನ–ಚಳುವಳಿ, ಕ್ರಾಂತಿ. ವ್ಯಾಪ್ತಿ–ವಿಸ್ತಾರ, ಮಿತಿ. ಎಡವಟ್ಟು–ರೂಢಿಗೆ ವಿರೋಧವಾದುದು, ಉಚಿತವಲ್ಲದ್ದು, ಕ್ರಮತಪ್ಪಿದ್ದು. ಅಖಂಡ–ಅವಿಚ್ಛಿನ್ನ, ಪೂರ್ಣ.

**ವಿವರ ತಿಳಿಯಿರಿ :**

- **ಒಡೆದು ಆಳುವ ನೀತಿ :** ಒಂದಾಗಿದ್ದ ರಾಜ್ಯವನ್ನು ಎರಡು ಭಾಗ ಮಾಡಿ ಆಳುವುದು. ವಿಭಜಿಸಿ ಆಳುವ ಕ್ರಮ.
- **ವಂಗ ಭಂಗ ಚಳುವಳಿ :** ಬಂಗಾಳದಲ್ಲಿ ಏಕತೆಗೆ ಭಂಗವಾದಾಗ ಮಾಡಿದ ಹೋರಾಟ.
- **ಕಬಂಧಬಾಹು :** ರಾಮಾಯಣದಲ್ಲಿ ಬರುವ ಒಬ್ಬ ಶಾಪಗ್ರಸ್ತ ಗಂಧರ್ವನ ತೋಳು. ನೀಳವಾದ ತೋಳುಗಳು, ಬಂಧಿಸುವ ಸಂಕೋಲೆ.

## ಅಭ್ಯಾಸಗಳು

**ಅ. ಹೊಂದಿಸಿ ಬರೆಯಿರಿ.**

| 'ಅ' | 'ಬ' |
|---|---|
| ೧. ೧೮೯೦ | ಅ. ಕರ್ನಾಟಕ ರಾಜ್ಯ ಎಂಬ ಹೆಸರು ಬಂದಿದ್ದು |
| ೨. ೧೯೧೬ | ಆ. ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನೆ |
| ೩. ೧೯೧೫ | ಇ. ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆ |
| ೪. ೧೯೫೬ | ಈ. ಕರ್ನಾಟಕ ಸಭೆ ಸಂಸ್ಥೆ ಪ್ರಾರಂಭ |
| ೫. ೧೯೭೩ | ಉ. ಮೈಸೂರು ರಾಜ್ಯ ಉದಯ |

©KTBS Not to be republished

**ಆ. ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

೧. ಹೋರಾಟ ೨. ಸವಾಲು ೩. ಕಲ್ಪಿಸು ೪. ಅಗ್ರಗಣ್ಯ ೫. ಪ್ರತಿಭೆ

**ಇ. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ರೇಡಿಯೋದಲ್ಲಿ ಯಾವ ನುಡಿ ಹರಿದು ಬಂತು?

೨. ಬ್ರಿಟಿಷರ ಆಡಳಿತದಲ್ಲಿ ಕನ್ನಡಿಗರು ಒಟ್ಟಾಗಿರಲು ಅವಕಾಶವೇ ಇರಲಿಲ್ಲ. ಯಾಕೆ?

೩. ಕನ್ನಡದ ಪರವಾಗಿ ಹೋರಾಟ ಮಾಡಿದವರಲ್ಲಿ ಕೆಲವರ ಹೆಸರು ತಿಳಿಸಿರಿ.

೪. ವಂಗಭಂಗ ಚಳುವಳಿಯನ್ನು ಯಾರು ನಡೆಸಿದರು?

೫. ವಿದ್ಯಾವರ್ಧಕ ಸಂಘದ ಕೆಲಸವೇನಾಗಿತ್ತು?

೬. ನಮ್ಮ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ಯಾವಾಗ ಬಂದಿತು?

**ಈ. ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕನ್ನಡನಾಡು ಏಕೀಕರಣಗೊಳ್ಳಲು ಕನ್ನಡಿಗರಿಗೆ ಪ್ರೇರಣೆಯಾದ ಘಟನೆ ಯಾವುದು?

೨. 'ಕನ್ನಡ ಸಾಹಿತ್ಯ ಪರಿಷತ್ತು' ಕರ್ನಾಟಕ ಏಕೀಕರಣದ ಬೇಡಿಕೆಗೆ ವೇದಿಕೆ ಕಲ್ಪಿಸಿದ್ದು ಹೇಗೆ?

೩. ಕರ್ನಾಟಕ ಸಭೆಯ ಮೊದಲ ಕಾರ್ಯಕ್ರಮದಲ್ಲಿ ಏನೆಲ್ಲಾ ಘಟನೆಗಳು ನಡೆದವು?

**ಉ. ಕೆಳಗಿನ ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಬಂಗಾಳದಲ್ಲಿ ನಡೆದ 'ವಂಗ ಭಂಗ' ಚಳುವಳಿಯ ಬಗ್ಗೆ ಬರೆಯಿರಿ?

**ಊ. ಕೆಳಗಿನ ಪರಿಚ್ಛೇದವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ.**

ಭಾರತದ ಜನಮಾನಸದಲ್ಲಿ ಇಂದಿಗೂ ಮುಕ್ಕಾಗದೇ ಇರುವವರಲ್ಲಿ ಲಾಲ್ ಬಹಾದ್ದೂರ್ ಶಾಸ್ತ್ರಿಗಳ ವ್ಯಕ್ತಿತ್ವವೂ ಒಂದು. ಕಡುಬಡತನದ ಮನೆಯಲ್ಲಿ ಜನಿಸಿದ ಅವರು ರಾಷ್ಟ್ರದ ಉನ್ನತ ಹುದ್ದೆಯಾದ ಪ್ರಧಾನಿ ಪದವಿಗೇರಿದರು. ಅಧಿಕಾರಾವಧಿಯಲ್ಲಿ ಸ್ವಂತಕ್ಕೊಂದು ಮನೆ ಮಾಡಿಕೊಳ್ಳಲಿಲ್ಲ. ರಾಷ್ಟ್ರದ ಜನತೆಗೆ ಅವರ ಮೇಲೆ ಅಪಾರ ವಿಶ್ವಾಸವಿತ್ತು.

ಲಾಲ್ ಬಹಾದ್ದೂರ್ ಶಾಸ್ತ್ರಿಗಳು ೧೯೦೪ ಅಕ್ಟೋಬರ್ ೨ರಂದು ವಾರಣಾಸಿ ಹತ್ತಿರದ ಮೊಗಲ್‌ಸರಾಯಿಯಲ್ಲಿ ಶಾರದಾ ಪ್ರಸಾದ, ರಾಮದುಲಾರಿ ದೇವಿಯವರ ಮಗನಾಗಿ ಜನಿಸಿದರು.

ಒಂದೂವರೆ ವರ್ಷದ ಮಗುವಾಗಿದ್ದಾಗಲೇ ತಂದೆ ತೀರಿಕೊಂಡರು. ತಾಯಿಯ ಆರೈಕೆಯಲ್ಲಿ ಅಜ್ಜನ ಮನೆಯಲ್ಲಿ ಬೆಳೆದರು. ವಿದ್ಯಾರ್ಥಿಯಾಗಿದ್ದಾಗ ಸ್ನೇಹಿತರೊಂದಿಗೆ ಜಾತ್ರೆಗೆ ಹೋಗಿದ್ದರು. ಹಿಂತಿರುಗಿ ಬರುವಾಗ ದೋಣಿ ದಾಟಿಸುವವನಿಗೆ ಕೊಡಲು ಹಣವಿರಲಿಲ್ಲ. ಗೆಳೆಯರಲ್ಲಿ ಕೈಚಾಚಲು ಮನಸ್ಸಿರಲಿಲ್ಲ. ಗಂಗಾನದಿಯನ್ನು ದಾಟಲೇಬೇಕು ಆಗ ಏನು ಮಾಡಿದರು ಗೊತ್ತೇ? ಗೆಳೆಯರ ಬಳಿ ತಡವಾಗಿ ಬರುವೆನೆಂದು ಹೇಳಿ ಸಂಜೆಯಾಗುತ್ತಿದ್ದಂತೆ ತುಂಬಿ ಹರಿಯುತ್ತಿದ್ದ ಗಂಗಾ ನದಿಯಲ್ಲಿ ಧುಮುಕಿ ಈಜಿ ಮನೆ ಸೇರಿದರು. ಜೀವನದ ಕೊನೆಯುಸಿರಿರುವವರೆಗೂ ಯಾರ ಬಳಿಯೂ ಕೈಚಾಚಲಿಲ್ಲ ನಮ್ಮ ಲಾಲ್ ಬಹಾದ್ದೂರ್ ಶಾಸ್ತ್ರಿಗಳು.

**೧. ಪ್ರಶೆಗಳಿಗೆ ಉತ್ತರಿಸಿರಿ.**

ಅ. ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಯಾವ ಉನ್ನತ ಪದವಿಗೇರಿದರು?

ಆ. ಇವರು ಎಲ್ಲಿ, ಯಾವಾಗ ಜನಿಸಿದರು?

©KTBS Not to be republished

ಇ. ತಂದೆ ತೀರಿಕೊಂಡ ಬಳಿಕ ಶಾಸ್ತ್ರಿಯವರು ಹೇಗೆ ಬೆಳೆದರು?

ಈ. 'ಅಕ್ಟೋಬರ್ ೨' ಇಬ್ಬರು ಮಹಾನ್ ವ್ಯಕ್ತಿಗಳ ಜನ್ಮದಿನ. ಅವರ ಹೆಸರೇನು?

ಉ. ದೋಣಿ ದಾಟಿಸುವವನಿಗೆ ಕೊಡಲು ಹಣವಿಲ್ಲದಾಗ ಶಾಸ್ತ್ರಿ ಏನು ಮಾಡಿದರು?

**ಊ. ದೂರದರ್ಶನ ವೀಕ್ಷಣೆಯ ಸಾಧಕ ಬಾಧಕಗಳ ಬಗ್ಗೆ ಒಂದು ಚಿಕ್ಕ ಪ್ರಬಂಧ ಬರೆಯಿರಿ.**

## ವ್ಯಾಕರಣ ಮಾಹಿತಿ

### ಸಂಸ್ಕೃತ ಸಂಧಿಗಳು

**ವೃದ್ಧಿಸಂಧಿ :** ಅ ಆ ಕಾರಗಳ ಮುಂದೆ ಏ ಐ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಐ ಕಾರವೂ ಓ ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಔ ಕಾರವು ಆದೇಶಗಳಾಗಿ ಬಂದರೆ ಅದಕ್ಕೆ ವೃದ್ಧಿಸಂಧಿ ಎನ್ನುವರು.

ಉದಾ: ಏಕ + ಏಕ = ಏಕೈಕ [ಅ + ಏ = ಐ]

- ಶಿವ + ಐಕ್ಯ = ಶಿವೈಕ್ಯ [ಅ + ಐ = ಐ]
- ವನ + ಓಷಧ = ವನೌಷಧ [ಅ + ಓ = ಔ]
- ಮಹಾ + ಔದಾರ್ಯ = ಮಹೌದಾರ್ಯ [ಆ + ಔ = ಔ]

©KTBS Not to be republished

**ಯಣ್ ಸಂಧಿ :** ಇ, ಈ, ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಇ, ಈ ಕಾರಗಳಿಗೆ 'ಯ್' ಕಾರವೂ, ಉ,ಊ ಕಾರಗಳಿಗೆ 'ವ್' ಕಾರವೂ 'ಋ' ಕಾರಕ್ಕೆ 'ರ್' ಕಾರವೂ ಆದೇಶಗಳಾಗಿ ಬಂದರೆ ಅವನ್ನು ಯಣ್ ಸಂಧಿ ಎಂದು ಕರೆಯುವರು.

**ಉದಾ:**

- ಇತಿ + ಆದಿ = ಇತ್ಯಾದಿ [ಇ + ಆ = ಯಾ]
- ಜಾತಿ + ಅತೀತ = ಜಾತ್ಯತೀತ [ಇ + ಅ = ಯ]
- ಪ್ರತಿ + ಉಪಕಾರ = ಪ್ರತ್ಯುಪಕಾರ [ಇ + ಉ = ಯ]
- ಮನು + ಅಂತರ = ಮನ್ವಂತರ [ಉ + ಅ = ವ]
- ಗುರು + ಆಜ್ಞೆ = ಗುರ್ವಾಜ್ಞೆ [ಉ + ಆ = ವಾ]
- ಪಿತೃ + ಆರ್ಜಿತ = ಪಿತ್ರಾರ್ಜಿತ [ಋ + ಆ = ರ]

**ಪ್ರಬಂಧ ರಚನೆ :**

ನಾವು ಹಿಂದಿನ ಪಾಠದಲ್ಲಿ ಪತ್ರ ಬರೆಯುವುದರ ಬಗ್ಗೆ ತಿಳಿದುಕೊಂಡಿದ್ದೇವೆ. ಇಲ್ಲಿ ನಾವು ಪ್ರಬಂಧ ರಚನೆಯ ಬಗ್ಗೆ ತಿಳಿದುಕೊಳ್ಳೋಣ.

ಅರ್ಥಪೂರ್ಣ ವಾಕ್ಯಗಳಲ್ಲಿ ನಿರ್ದಿಷ್ಟ ವಿಷಯವನ್ನು ಕ್ರಮಬದ್ಧವಾಗಿ ನಿರೂಪಿಸಿದರೆ ಅದನ್ನು ಪ್ರಬಂಧ ಎನ್ನುವರು. ಒಂದೇ ವಿಷಯವನ್ನು ಕುರಿತಾದ ಅನೇಕ ವಾಕ್ಯಗಳ ಸಮುಚ್ಚಯವೇ ಪ್ರಬಂಧವೆನಿಸುತ್ತದೆ. ಪ್ರಬಂಧ ಬರೆಯುವ ಮೊದಲು ಕೆಲವು ಸೂಚನೆಗಳನ್ನು ಅನುಸರಿಸಬೇಕು.

- **ವಿಷಯ ಸಂಗ್ರಹ :** ಬರೆಯಬೇಕಾಗಿರುವ ಪ್ರಬಂಧದ ವಿಷಯದಲ್ಲಿ ಸಾಧ್ಯವಾದಷ್ಟು ವಿಚಾರ–ಸಂಗತಿಗಳನ್ನು ಸಂಗ್ರಹಿಸಬೇಕು.

- **ಕ್ರಮ ಬದ್ಧತೆ :** ಸಂಗ್ರಹಿಸಿದ ವಿಷಯಗಳನ್ನು ಕ್ರಮವಾಗಿ ಜೋಡಿಸಿಕೊಳ್ಳಬೇಕು. ಅಂದರೆ ಯಾವ ವಿಷಯ ಮೊದಲು, ಯಾವ ವಿಷಯ ಅನಂತರ ಎಂಬುದನ್ನು ಮೊದಲೇ ನಿರ್ಧರಿಸಬೇಕು.

- **ಭಾಷೆ ಮತ್ತು ಶೈಲಿ :** ಆರಿಸಿಕೊಂಡಿರುವ ಪ್ರಬಂಧದ ವಿಷಯಕ್ಕೆ ತಕ್ಕಂತೆ ಸಮರ್ಥ ಶಬ್ದಗಳ ಬಳಕೆ, ಶುದ್ಧವಾದ ವಾಕ್ಯರಚನೆ, ಇವುಗಳಿಗೆ ಗಮನ ಕೊಡಬೇಕು. ಪ್ರಬಂಧಗಳಲ್ಲಿ ಸಂಭಾಷಣೆಯ ಶೈಲಿ ಇರುವುದಿಲ್ಲ. ಗ್ರಾಂಥಿಕ ಪದಗಳನ್ನೇ ಬಳಸಬೇಕು. ವಾಕ್ಯಗಳು ಚಿಕ್ಕದಾದಷ್ಟು ತಪ್ಪುಗಳು ಕಡಿಮೆಯಾಗುತ್ತವೆ.

ಪ್ರಬಂಧದಲ್ಲಿ ಸಾಮಾನ್ಯವಾಗಿ ಪ್ರಸ್ತಾವನೆ, ವಿಷಯ ವಿವರಣೆ ಮತ್ತು ವಿಷಯದ ಸಮಾಪ್ತಿ ಅಥವಾ ಉಪಸಂಹಾರ ಎಂಬ ಮೂರು ಪ್ರಧಾನ ಹಂತಗಳಿರುತ್ತವೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಪ್ರಬಂಧ ರಚನೆ ಮಾಡಬೇಕು. ಆಗ ಅದೊಂದು ಉತ್ತಮ ಪ್ರಬಂಧವಾಗಬಲ್ಲದು.

©KTBS Not to be republished

## ಭಾಷಾ ಆಟ

**ಅ. ಕೆಳಗಿನ ೬೪ ಅಂಕಣಗಳಲ್ಲಿ ನಮ್ಮ ರಾಷ್ಟ್ರದಲ್ಲಿ ಬಳಕೆಯಲ್ಲಿರುವ ಹಲವಾರು ಭಾಷೆಗಳು ಮನಬಂದಂತೆ ಸೇರಿಕೊಂಡಿವೆ. ಅವುಗಳನ್ನು ಗುರುತಿಸಿ ಪಟ್ಟಿ ಮಾಡಬಲ್ಲಿರಾ?**

| | | | | | | | |
|---|---|---|---|---|---|---|---|
| ಡಿ | ಕಾ | ಕೊ | ಡ | ಬಂ | ಗಾ | ಳಿ | ಧಿ |
| ಒ | ಶ್ಮೀ | ಕೊಂ | ನ್ನ | ಢು | ಜು | ಪಾ | ಸಿಂ |
| ಬಾ | ಎ | ಗೆ | ಕ | ದ | ಅ | ನೇ | ರ್ದ |
| ರ | ಪು | ಯ | ಕ್ಷಿ | ಣಿ | ಸ್ಸಾ | ಉ | ಹಿಂ |
| ದ | ಣಿ | ವು | ತೆ | ನೆ | ಮಿ | ದಿ | ತಿ |
| ಳು | ಮ | ಲ | ಯಾ | ಳಂ | ಬಿ | ರಾ | ತ್ಯ |
| ಮಿ | ಗು | ರಾ | ವ | ಣಿ | ಜ | ಜಾ | ಗ |
| ತ | ಸ್ಕೃ | ಸಂ | ಠಿ | ಗು | ಳಂ | ಬ | ಪಂ |

©KTBS Not to be republished

### ಯೋಜನೆ

- ಕರ್ನಾಟಕ ಏಕೀಕರಣಕ್ಕೆ ಹೋರಾಡಿದ ಕನ್ನಡಿಗರ ಭಾವಚಿತ್ರಗಳನ್ನು ಸಂಗ್ರಹಿಸಿ ಮತ್ತು ಆಲ್ಬಂ ರಚಿಸಿರಿ.

### ಪೂರಕ ಓದು

೧. 'ಕರ್ನಾಟಕ ಏಕೀಕರಣಕ್ಕೆ ದುಡಿದ ಮಹನೀಯರು' ಎಂಬ ಪುಸ್ತಕವನ್ನು ಓದಿರಿ.

೨. ಕನ್ನಡ ನಾಡಿನ ಉದಯಕ್ಕಾಗಿ ಹೋರಾಡಿದ ವ್ಯಕ್ತಿಗಳ ಬಗ್ಗೆ ತಿಳಿದುಕೊಳ್ಳಿರಿ.

೩. ಕನ್ನಡ ನಾಡಿನ ಕುರಿತಾದ ಗೀತೆಗಳನ್ನು ಕೇಳಿರಿ.

### ಶುಭ ನುಡಿ

೧. ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು.

೨. ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.

೩. ನಾವೆಲ್ಲೆ ಹೋದರೂ ನಮ್ಮ ಕನ್ನಡ ನಾಡನ್ನು ಮರೆಯಬಾರದು.

* * * * *

ಪದ್ಯ ಭಾಗ

# ೯. ಬೇಸಿಗೆ

– ಬಿ.ಆರ್. ಲಕ್ಷ್ಮಣರಾವ್

**ಪ್ರವೇಶ :** ಮಾನವರಾದ ನಾವು ಪ್ರಕೃತಿಯಿಂದ ಕಲಿಯಬೇಕಾದದ್ದು ಅಪಾರ. ಪ್ರಕೃತಿಯ ಪ್ರತಿಯೊಂದು ವಸ್ತುವೂ ಪರಸ್ಪರ ಸಂಬಂಧವುಳ್ಳದ್ದಾಗಿರುತ್ತವೆ. ಅಂತೆಯೇ ಋತುಮಾನಗಳು ಕೂಡ ಅವು ಬದಲಾದಂತೆ ಹವಾಮಾನವು ಏರುಪೇರಾಗುತ್ತಿರುತ್ತದೆ. ಒಮ್ಮೆ ಪ್ರಖರವಾದ ಬಿಸಿಲು, ಮತ್ತೊಮ್ಮೆ ಗಡಗಡ ನಡುಗುವ ಚಳಿ, ಮಳೆ, ಗಾಳಿ–ಹೀಗೆ ಏನೇ ಆದರೂ ಯಾವುದೇ ಕೆಲಸಕಾರ್ಯಗಳು ನಿಲ್ಲುವುದಿಲ್ಲ. ಪ್ರಕೃತಿಯು ಸಮತೋಲನವನ್ನು ಕಾಯ್ದುಕೊಂಡು ತನ್ನ ಪಾಲಿನ ಕೆಲಸವನ್ನು ಸದಾ ನಿರ್ವಹಿಸುತ್ತ ಇರುತ್ತದೆ.

ಬಂದಿದೆ ಬೇಸಿಗೆ ರಜಾ
ಇದ್ದರೂ ಬಿಸಿಲಿನ ಸಜಾ
ಬನ್ನಿ ಆಡೋಣ,
ಸೂರ್ಯನ ಮಹಿಮೆಯ ಹಾಡೋಣ.



ಏಕೆ ರವಿಗಿಂತ ತಾಪ?
ಯಾರ ಮೇಲವನ ಕೋಪ?
ಎಂದು ಹಳಿಯಬೇಡಿ,
ಸೂರ್ಯನ ತಪ್ಪು ತಿಳಿಯಬೇಡಿ,
ಮೋಡ ಕೂಡಿಸಲು, ಇಳೆಗೆ ಮಳೆ ತರಲು
ದುಡಿಯುತಿಹನು, ಪಾಪ!

ಭೂಮಿಯ ಪೋಷಕ ಸೂರ್ಯ
ಭೂಮಿಗವನು ಅನಿವಾರ್ಯ
ಹೊಗಳಿಕೆ ಬೇಕಿಲ್ಲ,
ತೆಗಳಿದರೆ ಅವ ಕುಗ್ಗುವುದಿಲ್ಲ.
ಬೆಳಕ ನೀಡುವನು, ಬಿಸಿಯನೂಡುವನು
ಮರೆಯದೆ ಕರ್ತವ್ಯ.

©KTBS Not to be republished

ಇಂಥ ಬಿರು ಬಿಸಿಲಿನಲ್ಲಿ
ಮರಾ ಗಿಡಾ ಪೊದೆ ಬಳ್ಳಿ
ಕಂಗಾಲಾಗಿಲ್ಲ,
ನೋಡಿ ರಂಗಾಗಿವೆ ಎಲ್ಲ
ಚಿಗುರು ಹೂತೊಟ್ಟು, ಹಣ್ಣು ಮಿಡಿ ಬಿಟ್ಟು,
ಇವೆ ಸಂಭ್ರಮದಲ್ಲಿ.



ಸೂರ್ಯನಿಂದ ಕಲಿಯೋಣ.
ಪ್ರಕೃತಿಯಂತೆ ನಲಿಯೋಣ.
ಕಷ್ಟಗಳಿಗಂಜದೆ,
ನಮ್ಮ ಕರ್ತವ್ಯ ಮರೆಯದೆ,
ನಲಿಯುತ ಬಾಳಿ, ನಲಿವನು ಹಂಚಿ,
ಧನ್ಯತೆ ಗಳಿಸೋಣ.

**ಕ್ಷೇತ್ರ** : ಓದುವುದು
**ಸಾಮರ್ಥ್ಯ** : ಅಕ್ಷರಗಳ ಧ್ವನಿ ವ್ಯತ್ಯಾಸವನ್ನು ಅರ್ಥಮಾಡಿಕೊಂಡು ಓದುವುದು

©KTBS Not to be republished

**ಕವಿ ಕೃತಿ ಪರಿಚಯ:**



**ಬಿ.ಆರ್. ಲಕ್ಷ್ಮಣರಾವ್** ಅವರು **ಚಿಕ್ಕಬಳ್ಳಾಪುರ ಜಿಲ್ಲೆಯ ಚೀಮಂಗಲ ಗ್ರಾಮ**ದಲ್ಲಿ **೦೯-೦೯-೧೯೪೬**ರಲ್ಲಿ ಜನಿಸಿದರು. ತಂದೆ ಬಿ.ಆರ್.ರಾಜಾರಾವ್, ತಾಯಿ ವೆಂಕಟಲಕ್ಷ್ಮಮ್ಮ. ಲಕ್ಷ್ಮಣರಾವ್ ನಿವೃತ್ತ ಉಪಾಧ್ಯಾಯರಾಗಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಮಾಡುತ್ತಿದ್ದಾರೆ. ಇವರು **'ಗೋಪಿ ಮತ್ತು ಗಾಂಡಲೀನ, ಟುವಟಾರ, ಇವಳು ನದಿಯಲ್ಲ, ಸುಬ್ಬಾಭಟ್ಟರ ಮಗಳೇ, ಭಾರತ ಬಿಂದು ರಶ್ಮಿ, ಹನಿಗವಿತೆಗಳು, ವಿನೋದ ಕವಿತೆಗಳು,** ಮುಂತಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ಕತೆ, ಕಾದಂಬರಿ, ಅನುವಾದ, ಲೇಖನಸಂಕಲನಗಳನ್ನು ರಚಿಸಿದ್ದಾರೆ. **'ನನಗ್ಯಾಕೋ ಡೌಟು', 'ಭಲೇ ಮಲ್ಲೇಶಿ'** ಎಂಬ ನಾಟಕಗಳನ್ನು ಬರೆದಿದ್ದಾರೆ. ಭಾವಗೀತೆಗಳ ಧ್ವನಿ ಸಾಂದ್ರಿಕೆಗಳು(ಸಿ.ಡಿ), ಜನಪ್ರಿಯ ದೂರದರ್ಶನ ಧಾರಾವಾಹಿ ಶೀರ್ಷಿಕೆ ಗೀತೆಗಳು ಹಾಗೂ ಜನಪ್ರಿಯ ಚಲನಚಿತ್ರಗೀತೆಗಳನ್ನು ರಚಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

**'ಬೇಸಿಗೆ'** ಎಂಬ ಪದ್ಯವನ್ನು **'ಸುಬ್ಬಾಭಟ್ಟರ ಮಗಳೇ'** ಎಂಬ ಭಾವಗೀತೆಗಳ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಪದಗಳ ಅರ್ಥ

ಸಜಾ – ಶಿಕ್ಷೆ. ಮಹಿಮೆ – ಹಿರಿಮೆ, ಮಹತ್ವ. ರವಿ – ಭಾನು, ಸೂರ್ಯ, ನೇಸರು. ತಾಪ– ಬಿಸಿ, ಶಾಖ. ಹಳಿ – ದೂಷಿಸು, ನಿಂದಿಸು. ಇಳೆ – ಭೂಮಿ, ಧರೆ. ಪೋಷಕ – ಸಲಹುವಾತ, ಪಾಲಕ. ಅನಿವಾರ್ಯ– ಅತ್ಯಗತ್ಯ. ಹೊಗಳು – ಕೊಂಡಾಡು, ಬಣ್ಣಿಸು. ತೆಗಳು – ಹೀಯಾಳಿಸು, ನಿಂದಿಸು. ಮಿಡಿ – ಹೀಚು, ಕಸುಗಾಯಿ. ಊಡು – ಉಣಿಸು, ತಿನ್ನಿಸು. ಕರ್ತವ್ಯ – ಕೆಲಸ, ಜವಾಬ್ದಾರಿ. ಬಿರು – ರಭಸ, ಬಿರುಸು. ಸಂಭ್ರಮ – ಉತ್ಸಾಹ, ಸಡಗರ. ಧನ್ಯತೆ –ಸಂತೃಪ್ತಿ.

## ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

೧. ಸೂರ್ಯ ಏಕೆ ದುಡಿಯುತ್ತಿದ್ದಾನೆ?

೨. ಭೂಮಿಯ ಪೋಷಕ ಯಾರು?

೩. ಸೂರ್ಯ ಮರೆಯದೆ ಯಾವ ಕರ್ತವ್ಯ ಮಾಡುವನು?

೪. ಬಿರು ಬಿಸಿಲಿಗೆ ಯಾವುವು ಕಂಗಾಲಾಗಿಲ್ಲ?

೫. ಸೂರ್ಯನಿಂದ ಮಕ್ಕಳು ಕಲಿಯಬೇಕಾದ್ದೇನು?

**ಆ. ಕೆಳಗಿನ ಪದಗಳಿಗೆ ತಲಾ ಎರಡು ಸಮಾನಾರ್ಥಕ ಪದಗಳನ್ನು ಬರೆಯಿರಿ.**

೧. ಸೂರ್ಯ    ೨. ಇಳೆ    ೩. ಪ್ರಕೃತಿ    ೪. ಸಂಭ್ರಮ

**ಇ. ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ಬರೆಯಿರಿ.**

೧) ಪೋಷಕರು    ೨) ಕರ್ತವ್ಯ    ೩) ಸಂಭ್ರಮ    ೪) ಧನ್ಯತೆ

**ಈ. ಬೇಸಿಗೆ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

©KTBS Not to be republished

## ವ್ಯಾಕರಣ ಮಾಹಿತಿ

**ಪ್ರಾಸಾಕ್ಷರಗಳು**

**ಕೆಳಗಿನ ಪದ್ಯವನ್ನು ಗಮನಿಸಿರಿ.**

**ಉತ್ತಮರ ಗೆಳೆತನ ಪುತ್ಥಳಿ ಬಂಗಾರ**
**ಮತ್ತಹೀನರ ಗೆಳೆತನ । ಮಾಡಿದರ**
**ಹಿತ್ತಾಳಿಗಿಂತ ಬಲುಹೀನ.**

ಇಲ್ಲಿ 'ತ್ತ' ಅಕ್ಷರವು ಪದ್ಯದ ಎಲ್ಲ ಸಾಲುಗಳಲ್ಲಿ ಪುನರಾವರ್ತಿತವಾಗಿ ಬಂದಿದೆ. ಇದು ಪ್ರಾಸಾಕ್ಷರ.

ಪದ್ಯದ ನಿರ್ದಿಷ್ಟ ಸ್ಥಳದಲ್ಲಿ ಬರುವ ಪುನರಾವರ್ತಿತ ಅಕ್ಷರಗಳನ್ನು ಪ್ರಾಸಾಕ್ಷರ ಎನ್ನುವರು.

ಸಾಮಾನ್ಯವಾಗಿ ಪ್ರಾಸಾಕ್ಷರಗಳು ಪದ್ಯದ ಸಾಲುಗಳಲ್ಲಿ ಮೊದಲು ಮತ್ತು ಕೊನೆಯಲ್ಲಿ ಬರುತ್ತವೆ. ಇದಕ್ಕೆ ಅನುಗುಣವಾಗಿ ಪ್ರಾಸಗಳಲ್ಲಿ ಆದಿಪ್ರಾಸ ಹಾಗೂ ಅಂತ್ಯಪ್ರಾಸಗಳಿರುತ್ತವೆ.

ಪದ್ಯದ ಪ್ರತಿಯೊಂದು ಸಾಲಿನ ಎರಡನೆಯ ಅಕ್ಷರವು ಪುನರಾವರ್ತಿತವಾದರೆ ಅದು ಆದಿಪ್ರಾಸ. (ಪದ್ಯವನ್ನು ಗಮನಿಸಿರಿ.)

ಕೊನೆಯ ಅಕ್ಷರವು ಪುನರಾವರ್ತಿತವಾದರೆ ಅದು ಅಂತ್ಯಪ್ರಾಸ;

ಒಂದು ಉದಾಹರಣೆಯನ್ನು ನೋಡೋಣ :

ನೀರವ್ವ ಗಂಗವ್ವ

ಮಳಿಯಾಗಿ ಬಾರವ್ವ

ಹೊಳಿಯಾಗಿ ಹರಿಯವ್ವ

ಇಲ್ಲಿ 'ವ್ವ' ಎಂಬ ಅಕ್ಷರವು ಪದ್ಯದ ಪ್ರತಿ ಸಾಲಿನ ಕೊನೆಯಲ್ಲಿ ಪುನರಾವರ್ತಿತವಾಗಿದೆ. ಹೀಗಾಗಿ ಇದು 'ಅಂತ್ಯಪ್ರಾಸ'ವೆನಿಸುವುದು.

©KTBS Not to be republished

**ಅ. ಆವರಣದಿಂದ ಸೂಕ್ತ ಪದ ಆರಿಸಿ ಖಾಲಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.**

೧. ಕನ್ನಡ ವರ್ಣಮಾಲೆಯಲ್ಲಿ ...............ಅಕ್ಷರಗಳಿವೆ. (೪೮, ೪೯, ೫೨)

೨. ಹ್ರಸ್ವ ಸ್ವರಕ್ಕೆ ಉದಾಹರಣೆ..................... (ಇ, ಐ. ಓ)

೩. ಅನುಸ್ವಾರ, ವಿಸರ್ಗವನ್ನು ................ಕರೆಯುತ್ತಾರೆ. (ಸ್ವರ, ವ್ಯಂಜನ, ಯೋಗವಾಹ)

೪. ವ್ಯಂಜನಗಳಿಗೆ ಸ್ವರ ಸೇರಿ ಆಗುವ ಅಕ್ಷರಗಳನ್ನು ............................ಎನ್ನುವರು. (ಗುಣಿತಾಕ್ಷರ, ಸಂಯುಕ್ತಾಕ್ಷರ, ಮಹಾಪ್ರಾಣಾಕ್ಷರ)

೫. ವಿಜಾತೀಯ ಒತ್ತಕ್ಷರವುಳ್ಳ ಪದಕ್ಕೆ ಉದಾಹರಣೆ................. (ಹಗ್ಗ, ಶಕ್ತಿ, ಸುಣ್ಣ)

ಆ. ಈ ಪದಗಳಲ್ಲಿರುವ ಅಕ್ಷರಗಳನ್ನು ಬಿಡಿಸಿ ಬರೆಯಿರಿ.

**ಉದಾ:** ಸಹಾಯ: ಸ್+ಅ, ಹ್+ಆ, ಯ್+ಅ.

೧. ಆಭರಣ: ೨. ಅವಲಕ್ಕಿ: ೩. ಸಂಭ್ರಮ: ೪. ಪರಮಾಶ್ಚರ್ಯ:

ಇ. 'ಬೇಸಿಗೆ' ಪದ್ಯವನ್ನು ರಾಗಬದ್ಧವಾಗಿ ಹಾಡಿರಿ.

ಈ. ಸೂರ್ಯ, ಚಂದ್ರ, ಭೂಮಿ, ಕುರಿತಾದ ಚುಟುಕುಗಳನ್ನು ರಚಿಸಿರಿ.

ಉದಾ: ಬಾನಿಗೆ ಬಣ್ಣವ ಕೊಟ್ಟವರಾರು.
ಭುವಿಯಲಿ ಮಜ್ಜಿಗೆ ಎರೆದವರಾರು
ಚಳಿಯ ಹಿತವನು ತಂದವರಾರು
ಚಂದ್ರ.......ನಮ್ಮ ಒಲವಿನ ಚಂದ್ರ.

ಉ. ಈ ಪದಗಳನ್ನು ಗಮನವಿಟ್ಟು ಓದಿ ಅರ್ಥ ಗ್ರಹಿಸಿರಿ.

©KTBS Not to be republished

| | |
|---|---|
| ವರುಣ– ಮಳೆದೇವತೆ | ವರ್ಣ–ಬಣ್ಣ, ಅಕ್ಷರ. |
| ಕೃತಜ್ಞತೆ–ಉಪಕಾರ ಸ್ಮರಣೆ ಇರುವ | ಕೃತಘ್ನತೆ– ಉಪಕಾರ ಸ್ಮರಣೆ ಇಲ್ಲದ. |
| ವಂದಿಸು–ನಮಸ್ಕರಿಸು, | ಹೊಂದಿಸು– ಜೋಡಿಸು |
| ಅರ್ತಿ–ಪ್ರೀತಿ | ಅರ್ಥಿ– ಬೇಡುವವರು |
| ಪಾವನ– ಪವಿತ್ರ | ಪವನ– ಗಾಳಿ |
| ಎಲರು–ಗಾಳಿ | ಎಲ್ಲರೂ–ಸರ್ವರು |
| ಆಡು–ಆಟ, ಮೇಕೆ | ಹಾಡು– ಗಾಯನ |

**ಇಂತಹ ಹತ್ತು ಪದಗಳನ್ನು ಹುಡುಕಿ ಅರ್ಥ ಬರೆಯಿರಿ.**

**ಚಟುವಟಿಕೆ**

ಕಾಗದ ಅಥವಾ ರಿಬ್ಬನ್ ತುಂಡೊಂದನ್ನು ಬಾಯಿಯ ಹತ್ತಿರ ಹಿಡಿದುಕೊಳ್ಳಿ. 'ಕ' ದಿಂದ 'ಮ' ವರೆಗೆ ಅಕ್ಷರಗಳನ್ನು ಉಚ್ಚಾರಣೆ ಮಾಡಿರಿ. ಅಲ್ಪ ಪ್ರಾಣಾಕ್ಷರಗಳನ್ನು ಉಚ್ಚರಿಸಿದಾಗ ಕಾಗದ ಅಥವಾ ರಿಬ್ಬನ್ ತುಂಡು ಹೆಚ್ಚು ಅಲುಗಾಡುವುದಿಲ್ಲ. ಮಹಾಪ್ರಾಣಾಕ್ಷರಗಳನ್ನು ಉಚ್ಚರಿಸಿದಾಗ ಕಾಗದ ಅಥವಾ ರಿಬ್ಬನ್ ತುಂಡು ಹೆಚ್ಚು ಅಲುಗಾಡುವುದನ್ನು ಗಮನಿಸಿ. ಹೀಗೆ ಅಕ್ಷರಗಳನ್ನು ಉಚ್ಚರಿಸಿ ಅಲ್ಪ ಪ್ರಾಣ ಮತ್ತು ಮಹಾಪ್ರಾಣಾಕ್ಷರಗಳನ್ನು ಪಟ್ಟಿ ಮಾಡಿರಿ.

**ಯೋಜನೆ**

- ಸೂರ್ಯ, ಚಂದ್ರರ ಕುರಿತಾದ ಪದ್ಯಗಳನ್ನು ಸಂಗ್ರಹಿಸಿ ಬರೆಯಿರಿ (ಕನಿಷ್ಟ ಆರು ಇರಲಿ)
- ಸೂರ್ಯ, ಚಂದ್ರ, ಬಾವುಟ, ರಾಷ್ಟ್ರಲಾಂಛನ, ರಾಷ್ಟ್ರಪಕ್ಷಿ, ರಾಷ್ಟ್ರಪ್ರಾಣಿ, ರಾಷ್ಟ್ರಪುಷ್ಪ– ಇವುಗಳ ಚಿತ್ರ ಬರೆದು ಬಣ್ಣ ತುಂಬಿರಿ.

©KTBS Not to be republished

**ಪೂರಕ ಓದು**

೧. ಪ್ರಕೃತಿಗೆ ಸಂಬಂಧಿಸಿದ ಕವಿತೆಗಳನ್ನು ಸಂಗ್ರಹಿಸಿ ಓದಿರಿ.

೨. ಕಪ್ಪು ಕುಂಕುಮ ಕೆಂಪು ಕುಂಕುಮ, ಕಾಗೆ ಪುಕ್ಕ ಗುಬ್ಬಿ ಪುಕ್ಕ–ಇಂಥ ನಾಲಿಗೆ ಸುರುಳಿಗಳನ್ನು ಸಂಗ್ರಹಿಸಿ ಗಟ್ಟಿಯಾಗಿ ಓದಿರಿ.

೩. ಸೂರ್ಯ, ಚಂದ್ರರ ಕುರಿತಾದ ಪದ್ಯಗಳನ್ನು ಸಂಗ್ರಹಿಸಿ ಓದಿರಿ.

**ಶುಭ ನುಡಿ**

೧. ಕರ್ತವ್ಯಕ್ಕೆ ಮಿಗಿಲಾದುದು ಯಾವುದೂ ಇಲ್ಲ.

೨. ಕಾಯಕವೇ ಕೈಲಾಸ.

೩. ನಾವು ನಮ್ಮ ಕಾಲ ಮೇಲೆ ನಿಲ್ಲೋಣ.

* * * * *

# ೧೦. ಮಂಗಳ ಗ್ರಹದಲ್ಲಿ ಪುಟ್ಟಿ

W6W2X7

– ಸಿ. ಎಂ. ಗೋವಿಂದರೆಡ್ಡಿ

**ಪ್ರವೇಶ :** ಮಕ್ಕಳ ಮನಸ್ಸಿನಲ್ಲಿ ಕುತೂಹಲಭರಿತ ಪ್ರಶ್ನೆಗಳು ಹುಟ್ಟುತ್ತವೆ. ವಿವಿಧ ಕಲ್ಪನೆಗಳು ಕಾಣಿಸುತ್ತವೆ. ಹೊಸ ಹೊಸ ಕನಸುಗಳು ಗೂಡು ಕಟ್ಟುತ್ತವೆ. ಮಕ್ಕಳು ತಮ್ಮ ಕಲ್ಪನೆಯಲ್ಲಿ ನಿರ್ಜೀವ ವಸ್ತುಗಳೊಂದಿಗೂ ಮನಬಿಚ್ಚಿ ಮಾತಾಡಬಲ್ಲರು! ಅಪರಿಚಿತ ಸನ್ನಿವೇಶಗಳೂ ಸಹ ಅವರ ಕನಸುಗಳಲ್ಲಿ ಹತ್ತಿರಕ್ಕೆ ಬಂದುಬಿಡುತ್ತವೆ. ಹೀಗಿರುವ ಅವರ ಕಲ್ಪನೆಗಳಿಗೆ ಮತ್ತಷ್ಟು ಗರಿಗಳನ್ನು ಕಟ್ಟಿ ಇನ್ನಷ್ಟು ಎತ್ತರಕ್ಕೆ ಹಾರಲು ಪ್ರೋತ್ಸಾಹಿಸಿ ಆ ಮೂಲಕ ಪ್ರಸ್ತುತತೆಯ ಅರಿವು ಮೂಡಿಸುವುದು ಇಲ್ಲಿನ ಆಶಯವಾಗಿದೆ.

ಆಗಸದಲ್ಲಿ ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ? ಇದು ಕಷ್ಟ.



ಒಂದಿನ ಇದ್ದಕ್ಕಿದ್ದಂತೆ
ಪುಟ್ಟಿಗೆ ರೆಕ್ಕೆಯು ಬಂದಿತ್ತು.
ಹಕ್ಕಿಯ ಹಾಗೆ ಹಾರುವ ಮನಕೆ
ಹೆಚ್ಚಿನ ಹರುಷವ ತಂದಿತ್ತು.



ಕೂಡಲೆ ಪುಟ್ಟಿ ಥಣ್ಣನೆ ಜಿಗಿದು
ಆಗಸದೊಡಲಿಗೆ ಹಾರಿದಳು.
ಹಾರುತ ತೇಲುತ ಮುಂದಕೆ ಸಾಗಿ
ಚಂದ್ರನ ಮಡಿಲನು ಸೇರಿದಳು

ಚಂದ್ರನ ಮೇಲೆ ನೆಟ್ಟಗೆ ನಿಂತು
ಭೂಮಿಯ ಕಡೆಗೆ ನೋಡಿದರೆ
ನೇರಳೆ ಬಣ್ಣದ ಚೆಂಡಿನ ಹಾಗೆ
ಕಂಡಿತು ಅವಳಿಗೆ ನಮ್ಮ ಧರೆ

©KTBS Not to be republished

ಚಂದ್ರನ ಬಿಟ್ಟು ಮೇಲಕೆ ಹಾರಿ
ಸೇರಲು ಮಂಗಳನಂಗಳವ
ಕೆಂಪಗೆ ಬಣಬಣಗುಟ್ಟುತಲಿತ್ತು
ಕಾಣಲಿಲ್ಲ ಯಾವುದೆ ಜೀವ



ಪುಟ್ಟಿಯು ಕಂಡಳು ಮಂಗಳನಲ್ಲಿ
'ಯೋಗಿ' ಹೆಸರಿನ ಹೆಬ್ಬಂಡೆ
ಒಡನೆ ಕೇಳಿದಳು ಕೆಂಪು ಬಂಡೆಯನು
'ನೀನು ಹೇಗೆ ಇಲ್ಲಿಗೆ ಬಂದೆ?'

ಬಂಡೆಯು ಕಣ್ಣೀರನು ಸುರಿಸುತ್ತಾ
ಹೇಳಿತು ಪುಟ್ಟಿಗೆ ನೋವಿನಲಿ
'ಪುಟ್ಟಿಯೇ, ನಮ್ಮೀ ಮಂಗಳ ಗ್ರಹದ
ದುರಂತ ಕಥೆಯನು ಕೇಳಿ ತಿಳಿ'

ಹಿಂದೊಂದು ಕಾಲದಿ ಈ ಗ್ರಹದಲ್ಲಿ
ಇತ್ತು ಜೀವಜಲ ಹಸಿರು ಮರ
ಆಗಿನ ಜನತೆಯು ನಾಡನು ಕಟ್ಟಲು
ಮರಗಳ ಕಡಿಯೆ ಬಂತು ಬರ

ಮಳೆ ಬೆಳೆ ಕಾಣದೆ ಜೀವಿಯು ಅಳಿದು
ಬಂದಿತು ನಮಗೆ ಇಂಥ ಸ್ಥಿತಿ
'ನಿಮ್ಮ ಭೂಮಿಯಲಿ ಗಿಡಮರ ಅಳಿದರೆ
ಮುಂದೆ ಒಂದು ದಿನ ಇದೇ ಗತಿ'

©KTBS
Not to be republished

ಬಣಬಣಗುಟ್ಟುವ ಬಯಲನು ಕಂಡು
ಢವಢವಗುಟ್ಟಿತು ಎಳೆ ಹೃದಯ
ಹಸಿರನು ಅಳಿಸದೆ ಗಿಡಮರ ಬೆಳೆಸಿ
ಉಳಿಸುವೆವೆಂದಳು ಈ ಧರೆಯ



ಭೂಮಿಗೆ ಬಂದು ಜನತೆಯ ಕಂಡು
ಹಸಿರನು ಉಳಿಸಲು ಬೇಡಿದಳು
ತಾನು ಕೂಡ ಎಳೆ ಸಸಿಗಳ ನೆಟ್ಟು
ಬೆಳೆಸುತ ಕುಣಿ ಕುಣಿದಾಡಿದಳು.

**ಕ್ಷೇತ್ರ** : ಆಲಿಸುವುದು

**ಸಾಮರ್ಥ್ಯ** : ಅಪರಿಚಿತ ಸನ್ನಿವೇಶ ಹಾಗೂ ಘಟನೆ ನಡೆದ ಸಂದರ್ಭದ ಸಂಭಾಷಣೆ ಮತ್ತು ಚರ್ಚೆಯನ್ನು ಆಲಿಸಿ ಅರ್ಥಮಾಡಿಕೊಳ್ಳುವುದು

**ಕವಿ ಕೃತಿ ಪರಿಚಯ:**



**ಸಿ.ಎಂ. ಗೋವಿಂದರೆಡ್ಡಿಯವರು ೧೧-೦೮-೧೯೬೮ರಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಚೆನ್ನಿಗರಾಯಪುರ** ಎಂಬ ಊರಿನಲ್ಲಿ ಜನಿಸಿದರು. ಪ್ರಸ್ತುತ ಇವರು ಬೆಂಗಳೂರಿನ ಕಾಡುಗೋಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಕ್ಕಳ ಸಾಹಿತ್ಯ ರಚನೆಯಲ್ಲಿ ವಿಶೇಷ ಆಸಕ್ತಿ ಹೊಂದಿದ ಇವರು **'ಬಣ್ಣದ ಚಿಟ್ಟೆ' 'ಮಕ್ಕಳ ಮಂದಾರ' 'ಪದ್ಯ ಹೇಳುವ ಮರ'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **'ಪರ್ಲ ಕಾವ್ಯ ಪ್ರಶಸ್ತಿ', 'ಸಿಸು ಸಂಗಮೇಶ ದತ್ತಿ ಬಹುಮಾನ' ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ಸೇರಿದಂತೆ ವಿವಿಧ ಬಹುಮಾನಗಳು ದೊರೆತಿವೆ.

ಪ್ರಸ್ತುತ ಪದ್ಯವನ್ನು **'ಮಕ್ಕಳ ಮಂದಾರ'** ಎಂಬ ಕೃತಿಯಿಂದ ಆಯ್ಕೆಮಾಡಿಕೊಳ್ಳಲಾಗಿದೆ.

©KTBS Not to be republished

## ಪದಗಳ ಅರ್ಥ

ಆಗಸ- ಆಕಾಶ, ಗಗನ. ಇಷ್ಟ-ಇಚ್ಛೆ, ಮೆಚ್ಚುಗೆ. ರೆಕ್ಕೆ-ಹಕ್ಕಿಗಳ ಪುಕ್ಕ, ಗರಿ. ಒಡಲು-ಶರೀರ, ಹೊಟ್ಟೆ. ಸಾಗು-ಚಲಿಸು, ಮುಂದೆ ಹೋಗು. ಮಡಿಲು-ಉಡಿ. ಧರೆ-ನೆಲ, ಭೂಮಿ. ಹೆಬ್ಬಂಡೆ-ದೊಡ್ಡದಾದ ಬಂಡೆ, ವಿಸ್ತಾರವಾದ ಕಲ್ಲು. ಬರ-ಬರಗಾಲ, ಕ್ಷಾಮ. ಅಳಿ-ಸಾಯು, ನಾಶಹೊಂದು. ಗತಿ-ಸ್ಥಿತಿ, ದಾರಿ. ಬಯಲು-ಅಂಗಳ, ಮೈದಾನ. ಉಳಿಸು-ರಕ್ಷಿಸು, ಕಾಪಾಡು. ನೆಡು-ನಾಟು.

**ವಿವರ ತಿಳಿಯಿರಿ:**

**ಪುಟ್ಟಿ** = ಮಕ್ಕಳನ್ನು ಕರೆಯುವ ಒಂದು ಆಪ್ತ ಸಂಬೋಧನೆ.

**ಮಂಗಳನಂಗಳ** = ಮಂಗಳ ಗ್ರಹದ ಬಯಲು, ಮಂಗಳ ಗ್ರಹದ ವಿಸ್ತಾರ ಪ್ರದೇಶ.

**ಬಣಬಣಗುಟ್ಟು** = ಖಾಲಿ ಖಾಲಿಯಾಗಿ ಕಾಣು, ನೀರವತೆಯಿಂದ ಕೂಡಿರು.

**ಯೋಗಿ ಹೆಸರಿನ ಬಂಡೆ** = ಮಂಗಳ ಗ್ರಹದಲ್ಲಿ ಕಂಡುಬಂದಿದೆ ಎನ್ನಲಾದ ಒಂದು ದೊಡ್ಡ ಬಂಡೆ.

**ದುರಂತ** = ದುಃಖದಲ್ಲಿ ಮುಗಿಯುವ, ಕಷ್ಟದಲ್ಲಿ ಕೊನೆಗೊಳ್ಳುವ.

**ಢವಢವಗುಟ್ಟು** = ಒಮ್ಮೆಲೆ ಭಯವಾಗು, ಹೃದಯ ಜೋರಾಗಿ ಹೊಡೆದುಕೊಳ್ಳು.

## ಅಭ್ಯಾಸಗಳು

**ಅ. ಬಿಟ್ಟ ಸ್ಥಳವನ್ನು ತುಂಬಿರಿ.**

೧. ಒಂದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ____________ ಬಂದಿತ್ತು.

೨. ಹಾರುತ ತೇಲುತ ಮುಂದಕೆ ಸಾಗಿ ಚಂದ್ರನ ____________ ಸೇರಿದಳು.

೩. ಪುಟ್ಟಿಯೇ ನಮ್ಮೀ ಮಂಗಳಗ್ರಹದ ದುರಂತ ____________ ಕೇಳಿ ತಿಳಿ.

೪. ಹಸಿರನು ಅಳಿಸದೆ ಗಿಡಮರ ಬೆಳೆಸಿ ಉಳಿಸುವೆವೆಂದಳು ಈ ____________

**ಆ. ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಪುಟ್ಟಿಗೆ ಯಾರ ಹಾಗೆ ಹಾರುವ ಮನಸ್ಸಿತ್ತು?

೨. ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಎಲ್ಲಿಗೆ ಸೇರಿದಳು?

೩. ಪುಟ್ಟಿ ಯೋಗಿಗೆ ಏನೆಂದು ಕೇಳಿದಳು?

೪. ಮಂಗಳ ಗ್ರಹದಲ್ಲಿ ಬರ ಏಕೆ ಬಂದಿತು?

೫. ಪುಟ್ಟಿ ಜನರಲ್ಲಿ ಏನನ್ನು ಉಳಿಸಲು ಬೇಡಿದಳು?

©KTBS Not to be republished

**ಇ. ಪದ್ಯಭಾಗವನ್ನು ಪೂರ್ಣಗೊಳಿಸಿರಿ.**

೧. ಆಗಸದಲ್ಲಿ ____________________

____________________

____________________

____________________ ಇದು ಕಷ್ಟ.

೨. ಮಳೆಬೆಳೆ ____________________

____________________

____________________

____________________ ಇದೇ ಗತಿ.

**ಈ. ಸಿ.ಎಂ.ಗೋವಿಂದರೆಡ್ಡಿಯವರ ಸ್ಥಳ, ಕಾಲ, ಕೃತಿಗಳ ವಿವರ ತಿಳಿಸಿರಿ.**

**ಉ. ನಾಮಪದ, ನಾಮಪ್ರಕೃತಿ, ಮತ್ತು ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ.**

೧. ಗಗನ + ಅನ್ನು = ಗಗನವನ್ನು

೨. ಶಾಲೆ + ಇಂದ = ಶಾಲೆಯಿಂದ

**ಊ. ಕೊಟ್ಟಿರುವ ವಾಕ್ಯಗಳಲ್ಲಿರುವ ಗುಣವಾಚಕ(ವಿಶೇಷಣ)ಗಳನ್ನು ಗುರುತಿಸಿರಿ.**

ಉದಾ: ವಿವೇಕನಿಗೆ ಅಪಾರ ಬುದ್ಧಿವಂತಿಕೆಯಿದೆ. – ಅಪಾರ

೧. ರಫೀಕ್‌ನದು ದೊಡ್ಡಮನೆ. ______________

೨. ಅವಳಿಗೆ ಹಸಿರು ಬಣ್ಣ ಇಷ್ಟ. ______________

೩. ಪುಟ್ಟಿಯು ಕಂಡಳು ಕೆಂಪು ಬಂಡೆಯನು. ______________

**ಋ. ಕೊಟ್ಟಿರುವ ವಾಕ್ಯಗಳಲ್ಲಿ ಸಂಖ್ಯಾವಾಚಕಗಳನ್ನು ಗುರುತಿಸಿ ಬರೆಯಿರಿ.**

೧. ಡೇವಿಡ್‌ನ ಊರಿನಲ್ಲಿ ನೂರು ಹಸುಗಳಿವೆ. ______________

೨. ಪೂರ್ಣಚಂದ್ರನು ಬೆಳಿಗ್ಗೆ ಐದು ಗಂಟೆಗೆ ಏಳುತ್ತಾನೆ. ______________

೩. ಒಂದು ದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ರೆಕ್ಕೆಯು ಬಂದಿತ್ತು. ______________

©KTBS Not to be republished

**ಎ. ಕೊಟ್ಟಿರುವ ಸನ್ನಿವೇಶ/ ಘಟನೆಯನ್ನು ಬೇರೆಯವರಿಂದ ಓದಿಸಿರಿ. ಚೆನ್ನಾಗಿ ಆಲಿಸಿರಿ. ಕೆಳಗೆ ಕೊಟ್ಟಿರುವ ಪ್ರಶ್ನೆಗೆ ಉತ್ತರಿಸಿರಿ.**

ಚಾರ್ಲ್ಸ್ ಡಾರ್ವಿನ್‌ರ ಮೊಮ್ಮಕ್ಕಳು ಒಂದು ಸಲ ತಮ್ಮ ತಾತನನ್ನು ಕೀಟಲೆ ಮಾಡುವುದಕ್ಕಾಗಿ ಒಂದು ಹೂಟ ಹೂಡಿದರು. ಒಂದು ಜೀರುಂಡೆಯನ್ನು ಹಿಡಿದು ತಂದು ಅದರ ರೆಕ್ಕೆಗಳನ್ನು ಕಿತ್ತು ಹಾಕಿದರು. ಅದಕ್ಕೆ ಚಿಟ್ಟೆಯೊಂದರ ರೆಕ್ಕೆಗಳನ್ನು ಅಂಟಿಸಿದರು. ಅಂಟಿಸುವಿಕೆಯನ್ನು ಬಹಳ ಚತುರತೆಯಿಂದ ಮಾಡಿದ್ದರಿಂದ ಅದು ಒಂದು ನೈಜವಾದ ಆದರೆ ಅಪರೂಪವಾದ ಕೀಟದಂತೆ ಕಾಣುತ್ತಿತ್ತು. ಅದನ್ನು ಅವರು ಡಾರ್ವಿನ್‌ರ ಬಳಿಗೆ ಕೊಂಡೊಯ್ದು "ತಾತ, ಇದು ಯಾವ ಜಾತಿಯ ಕೀಟ?" ಎಂದು ಕೇಳಿದರು. ಡಾರ್ವಿನ್ನರು ಅದನ್ನು ಒಂದು ನಿಮಿಷ ಪರೀಕ್ಷಿಸಿ ನೋಡಿ "ಒಂದು ಹೊಸ ಕೀಟ ಜಾತಿಯನ್ನೆ ಪತ್ತೆ ಮಾಡಿ ಬಿಟ್ಟಿದ್ದೀರಲ್ಲ, ತುಂಬಾ ಸಂತೋಷ. ಇದು ನಿಮಗೆ ಎಲ್ಲಿ ಸಿಕ್ಕಿತು? ನೀವು ನೋಡಿದಾಗ ಇದು ಏನು ಮಾಡುತ್ತಿತ್ತು?" ಎಂದು ಕೇಳಿದರು. ತಾತ ನಮ್ಮ ಬಲೆಗೆ ಬಿದ್ದರೆಂದು ಬಹು ಸಂತೋಷಪಟ್ಟ ಆ ಮಕ್ಕಳು "ನಮ್ಮ ಮನೆಯ ಹಿತ್ತಲ ತೋಟದಲ್ಲಿ ಸಿಕ್ಕಿತು. ಗಿಡದ ಎಲೆಯ ಮೇಲೆ ಕುಳಿತಿತ್ತು. ನಾವು ನೋಡಿದಾಗ ಇದು ಹಮ್ ಮಾಡುತ್ತಿತ್ತು (ಗುಂಯ್‌ಗುಡು)" ಎಂದರು. ಅದಕ್ಕೆ ಡಾರ್ವಿನ್ನರು "ಓಹೋ, ಸರಿ ಮತ್ತೆ. ಹಾಗಾದರೆ ಇದು ಹಮ್‌ಬಗ್" (ಹಮ್‌ಬಗ್=ಗುಂಯ್‌ಗುಡುವ ಹುಳು) ಎಂದರು.

**ಪ್ರಶ್ನೆಗಳು:**

೧. ಡಾರ್ವಿನ್ನರು ಹೊಸ ಕೀಟವನ್ನು 'ಹಮ್‌ಬಗ್' ಎಂದು ಏಕೆ ಕರೆದರು?

೨. ಮಕ್ಕಳು ಚಿಟ್ಟೆಯ ರೆಕ್ಕೆಯನ್ನು ಯಾವುದಕ್ಕೆ ಅಂಟಿಸಿದರು?

## ವ್ಯಾಕರಣ ಮಾಹಿತಿ

### ದ್ವಿರುಕ್ತಿ

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ :**

➢ ಶಿಕ್ಷಕರು ಮತ್ತೆ ಮತ್ತೆ ವಿವರಣೆ ನೀಡಿದರು.

➢ ಷರೀಫನು ನಗುತ್ತ ನಗುತ್ತ ಮಾತನಾಡಿದನು.

ಮೇಲಿನ ವಾಕ್ಯಗಳಲ್ಲಿ 'ಮತ್ತೆ', 'ನಗುತ್ತ' ಎಂಬ ಪದಗಳು ಎರಡೆರಡು ಬಾರಿ ಬಳಕೆಯಾಗಿವೆ. ಇವುಗಳನ್ನು 'ದ್ವಿರುಕ್ತಿ' ಎನ್ನುವರು.

**(ದ್ವಿ–ಎರಡು, ಉಕ್ತಿ–ಮಾತು)**

ಸಾಮಾನ್ಯವಾಗಿ ವಿಷಯಕ್ಕೆ ಒತ್ತುಕೊಡಲು ದ್ವಿರುಕ್ತಿಗಳನ್ನು ಬಳಸುತ್ತಾರೆ. ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ.

➢ ಇತ್ತ ಕಡೆಗೆ **ಬೇಗಬೇಗ** ಬಾ.

➢ ಗುಡ್ಡಗಳಲ್ಲಿ **ದೊಡ್ಡದೊಡ್ಡ** ಕಲ್ಲುಗಳಿವೆ.

ಇಲ್ಲಿ **'ಬೇಗಬೇಗ', 'ದೊಡ್ಡದೊಡ್ಡ'** ಎಂಬ ಪದಗಳು ದ್ವಿರುಕ್ತಿಗಳಾಗಿವೆ.

### ಜೋಡುನುಡಿ :

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ :**

➢ "ಚಿಕ್ಕ ಮಕ್ಕಳಿಗೆ ವೇಷಭೂಷಣಗಳನ್ನು ನಾವು ತೊಡಿಸುತ್ತೇವೆ" ಎಂದನು ಪಿಂಟೋ.

➢ ಉಪವಾಸದ ರಾತ್ರಿ ಹಣ್ಣುಹಂಪಲು ತಿನ್ನುತ್ತಾರೆ.

ಮೇಲಿನ ವಾಕ್ಯಗಳಲ್ಲಿ 'ವೇಷಭೂಷಣ', 'ಹಣ್ಣು ಹಂಪಲು' – ಈ ಪದಗಳಲ್ಲಿ ಎರಡು ಬೇರೆಬೇರೆ ಪದಗಳಿದ್ದು ಅವು ಜೊತೆಜೊತೆಯಾಗಿ ಬಳಕೆಯಾಗಿವೆ. ಇವು ಜೋಡುನುಡಿಗಳು.

ಸಾಮಾನ್ಯವಾಗಿ ಮಾತುಗಳನ್ನು, ವಿಷಯಗಳನ್ನು ಮೆರುಗುಗೊಳಿಸಲು ಜೋಡುನುಡಿಗಳನ್ನು ಬಳಸುತ್ತಾರೆ. ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ.

©KTBS Not to be republished

➢ ಎಲ್ಲರೂ ತಮ್ಮ **ನೋವುನಲಿವು**ಗಳನ್ನು ಹಂಚಿಕೊಂಡರು.

➢ ಅವರು **ಊರುಕೇರಿ** ತಿರುಗಿ ಬಂದರು.

ಇಲ್ಲಿ **'ನೋವುನಲಿವು,' 'ಊರುಕೇರಿ'** ಎಂಬ ಪದಗಳು ಜೋಡುನುಡಿಗಳಾಗಿವೆ.

**ಅನುಕರಣಾವ್ಯಯ :**

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ.**

➢ ಹಂಪಣ್ಣನು **ಸರಸರ** ಹೆಜ್ಜೆ ಹಾಕಿದನು.

➢ ಗಾಳಿಯು **ಸುಯ್ಯನೆ** ಬೀಸಿತು.

ಮೇಲಿನ ವಾಕ್ಯಗಳಲ್ಲಿ 'ಸರಸರ,' 'ಸುಯ್ಯನೆ' ಈ ಪದಗಳಿಗೆ ನಿರ್ದಿಷ್ಟವಾದ ಅರ್ಥವಿಲ್ಲ. ಇವು ಧ್ವನಿವಿಶೇಷಣವನ್ನು ಅನುಕರಣ ಮಾಡಿದವುಗಳಾಗಿವೆ. ಇವು ಅನುಕರಣಾವ್ಯಯಗಳು.

ಸಾಮಾನ್ಯವಾಗಿ ಧ್ವನಿವಿಶೇಷಣಗಳನ್ನು ಕೇಳಿದಂತೆ ಪುನಃ ಅನುಕರಣೆ ಮಾಡುವಾಗ ಅನುಕರಣಾವ್ಯಯಗಳನ್ನು ಬಳಸುತ್ತಾರೆ. ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ

➢ ಮಳೆಯ ಹನಿಗಳು **ಪಟಪಟನೆ** ಬಿದ್ದವು.

➢ ನೀರು **ಜುಳುಜುಳು** ಎಂದು ಹರಿಯಿತು.

ಇಲ್ಲಿ **'ಪಟಪಟನೆ', 'ಜುಳುಜುಳು'** ಎಂಬ ಪದಗಳು ಅನುಕರಣಾವ್ಯಯಗಳಾಗಿವೆ.

©KTBS Not to be republished

**ಭಾಷಾ ಆಟಗಳು**

ಅ. ವಿದ್ಯಾರ್ಥಿಗಳನ್ನು ಎರಡು ಗುಂಪುಗಳನ್ನಾಗಿ ಮಾಡಿಕೊಂಡು ಒಂದೇ ರೀತಿಯ ಅಪರಿಚಿತ ಸನ್ನಿವೇಶದ ಚಿತ್ರವನ್ನು ವೀಕ್ಷಿಸಲು ಅವಕಾಶ ನೀಡಿ, ಸರದಿಯಂತೆ ಚರ್ಚಿಸಲು/ ಮಾತನಾಡಲು ಹೇಳುವುದು. ಸರದಿ ಬಂದಾಗ ಮಾತನಾಡದೆ ಇದ್ದರೆ ಅವರು ಆಟದಿಂದ ಹೊರಗೆ ಹೋಗುವುದು.

ತಂಡ ಒಂದರಿಂದ ಒಬ್ಬರಾದ ಅನಂತರ ತಂಡ ಎರಡರಿಂದ ಒಬ್ಬರು ಮಾತನಾಡುವುದು.

**ಸನ್ನಿವೇಶದ ಚಿತ್ರಗಳು:**

೧. ವಿಮಾನ ನಿಲ್ದಾಣ

೨. ಬಂದರು

೩. ಪೌರಾಣಿಕ ನಾಟಕದ ಒಂದು ಸನ್ನಿವೇಶ

೪. ಉಪಗ್ರಹ ಉಡಾವಣೆಯ ದೃಶ್ಯ
೫. ವಸ್ತು ಪ್ರದರ್ಶನದ ಚಿತ್ರಗಳು
೬. ಕೃಷಿ ಯಂತ್ರೋಪಕರಣಗಳು
೭. ಕಾರ್ಖಾನೆಗಳು
೮. ಮಾಲ್‌ಗಳು

## ಯೋಜನೆ

- ನಿಮಗೆ ಅಪರಿಚಿತವೆನಿಸುವ ಸನ್ನಿವೇಶದ ಚಿತ್ರಗಳನ್ನು ಸಂಗ್ರಹಿಸಿರಿ.
- ಎರಡು ಪ್ರಾಣಿ, ಪಕ್ಷಿಗಳ, ಮನುಷ್ಯನ, ಗೊಂಬೆಯ ಚಿತ್ರಗಳನ್ನು ಹಾಳೆಯ ಎದುರು ಬದುರು ಅಂಟಿಸಿರಿ. ಅವು ಏನು ಸಂಭಾಷಣೆ ನಡೆಸಬಹುದು ಎಂದು ಊಹಿಸಿ. ಅವುಗಳ ಮಾತುಗಳನ್ನು ಬರೆಯಿರಿ.

## ಪೂರಕ ಓದು

- ಅಪರಿಚಿತ ಸನ್ನಿವೇಶಗಳ ಕುರಿತಾದ ಲೇಖನಗಳನ್ನು ಓದಿರಿ.
- 'ಮಂಗಳಗ್ರಹದಲ್ಲಿ ಪುಟ್ಟಿ' ಹಾಡನ್ನು ಅಭಿನಯಿಸಿರಿ.
- ಆಕಾಶವಾಣಿ, ದೂರದರ್ಶನದಲ್ಲಿ ಪ್ರಸಾರವಾಗುವ ವಿವಿಧ ಸಂಭಾಷಣೆ, ಚರ್ಚೆಗಳನ್ನು ಆಲಿಸಿರಿ.

©KTBS Not to be republished

## ಶುಭ ನುಡಿ

- ಕನಸುಗಳನ್ನು ಕಟ್ಟಬೇಕು. ಅವುಗಳನ್ನು ನನಸು ಮಾಡಬೇಕು.
- ಅಪರಿಚಿತವಾಗಿರುವುದನ್ನು ಅರಿಯಬೇಕು. ಅದು ಪರಿಚಿತವಾಗುತ್ತದೆ.
- ಕಗ್ಗಲ್ಲಿನಲ್ಲಿ ಸುಂದರ ಮೂರ್ತಿಗಳು ಅರಳುತ್ತವೆ.

* * * * *

# ೧೧. ನಮ್ಮದೇನಿದೆ? (ಪದ್ಯ)

C2N4T2

– ನಿರ್ಮಲಾ ಸುರತ್ಕಲ್

**ಪ್ರವೇಶ :** ಪ್ರಪಂಚದಲ್ಲಿರುವ ಎಲ್ಲ ಸಂಪತ್ತುಗಳೂ ತನ್ನವೇ, ಇಲ್ಲಿರುವ ಸಕಲ ಜೀವರಾಶಿಯೂ ತನಗಾಗಿಯೇ ಜೀವನ ನಡೆಸುತ್ತಿದೆ ಎಂಬ ಭಾವನೆ ಮನುಷ್ಯನಲ್ಲಿ ಇತ್ತೀಚೆಗೆ ಹೆಚ್ಚುತ್ತಿದೆ. ಇದರಿಂದ ಆತನ ಮನಸ್ಸು ಸಂಕುಚಿತಗೊಳ್ಳುತ್ತಿದೆ. ಸ್ವಾರ್ಥವು ನೆಲೆಗೊಳ್ಳುತ್ತಿದೆ. ಐಹಿಕ ಸುಖಸಂಪತ್ತುಗಳನ್ನು ಸಂಗ್ರಹಿಸುವುದೇ ಮನುಷ್ಯನ ಗುರಿಯಾಗುತ್ತಿದೆ. ಆದರೆ ಜಗತ್ತಿನ ಉಳಿದೆಲ್ಲ ಜೀವಿಗಳೂ ಸಂಪತ್ತಿನ ಕ್ರೋಢೀಕರಣ ಮಾಡದೆ ಸರಳವಾಗಿ ಬದುಕುತ್ತಿವೆ. ತಮ್ಮ ಬದುಕಿಗೆ ಬೇಕಾದ್ದಷ್ಟನ್ನು ಮಾತ್ರ ಬಳಸಿಕೊಂಡು ಉಳಿದುವನ್ನು ಜಗತ್ತಿಗೇ ಬಿಡುತ್ತಿವೆ. "ಬದುಕು ಮತ್ತು ಬದುಕಲು ಬಿಡು" ಎಂಬ ಸಂದೇಶವನ್ನು ಪ್ರಕೃತಿಯೇ ಮನುಷ್ಯನಿಗೆ ಹೇಳುವಂತಿದೆ. ಪ್ರಸ್ತುತ ಕವಿತೆಯು ಮನುಷ್ಯನು ಸಕಲ ಜೀವರಾಶಿಗಳ ಜೊತೆ ಹೊಂದಿಕೊಂಡು ಬಾಳಬೇಕೆಂಬ ಆಶಯವನ್ನು ಹೊಂದಿದೆ.



ಹಣ್ಣು, ಹೂವು ಕೊಡುವ ಮರ
ಸೊಪ್ಪು, ಸೌದೆ ಕೊಡುವ ಮರ
ಧಗೆಗೆ ನೆರಳನೀವ ಮರ
"ನನ್ನದೆಲ್ಲ!" ಅನ್ನಲಿಲ್ಲ ಒಮ್ಮೆಯಾದರೂ.

ಹಾಲು ಕೊಡುವ ತ್ಯಾಗಿ ದನ
ಮೊಸರು, ಬೆಣ್ಣೆ ಅದರ ಋಣ!
ಗೊಬ್ಬರವೂ ಅದರ ದಾನ
"ನನ್ನದೆಲ್ಲ!" ಅನ್ನಲಿಲ್ಲ ಒಮ್ಮೆಯಾದರೂ!

ಮಳೆ ಕೊಡುವ ಕರಿಯ ಮೋಡ
ಬಿಸಿಲು ಕೊಡುವ ಸೂರ್ಯ ಕೂಡ
ತಂಪು ಸುರಿವ ಚಂದ್ರ ಕೂಡ
ನಮ್ಮದೆನ್ನಲಿಲ್ಲವಲ್ಲ ಒಮ್ಮೆಯಾದರೂ!

ನೀರು ಕೊಡುವ ನದಿ, ಬಾವಿ
ಹೂವು ಕೊಡುವ ಗಿಡ, ಬಳ್ಳಿ
ಹೊತ್ತು ಪೊರೆವ ಭೂಮಿತಾಯಿ
"ನನ್ನದು", "ನನ್ನದು" ಅನ್ನಲಿಲ್ಲ ಒಮ್ಮೆಯಾದರೂ!

©KTBS Not to be republished

ಪ್ರಾಣಿ, ಪಕ್ಷಿ, ಸಸ್ಯವರ್ಗ
ನದಿ, ಬಾನು, ಕಾಡು, ಭೂಮಿ
ಸೂರ್ಯ, ಚಂದ್ರ ಯಾರಿಗಿರದ
"ನಾನು", "ನನ್ನದು" ಮಾತು ಮಾತ್ರ ನಮ್ಮದಲ್ಲವೆ?

ಎಲ್ಲರಿಂದ ನಾವು ತಾನೆ?
ಎಲ್ಲ ಇದ್ರೆ ನಾವು ತಾನೆ?
ನಮ್ಮದೇನು, ಹೇಳು ನೀನೇ
ಕೋಟೆ ಕಟ್ಟಿ ನಮ್ಮದೆನುವ ಭ್ರಮೆ ಮಾತ್ರವೇ!

**ಕ್ಷೇತ್ರ :** **ಬರೆಯುವುದು**
**ಸಾಮರ್ಥ್ಯ :** **ಆಲಿಸಿದ ಮತ್ತು ಓದಿದ ವಿಷಯಗಳನ್ನು ಸೂಕ್ತ ಲೇಖನ ಚಿಹ್ನೆಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳಲ್ಲಿ ಬರೆಯುವುದು.**

©KTBS Not to be republished

**ಕವಿ ಕೃತಿ ಪರಿಚಯ:**



**ನಿರ್ಮಲಾ ಸುರತ್ಕಲ್ :** **(ಜನನ ೧೯೫೯ ಮೇ ೩೧)** ಅವರು ಮೂಲತಃ **ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ನಿಡ್ಪುರ ಗ್ರಾಮ**ದವರು. ತಂದೆ ಶ್ರೀಧರ ನಾಯಕ್ ಮತ್ತು ತಾಯಿ ಇಂದಿರಾ. ಸುರತ್ಕಲ್ ಅವರ ವಿದ್ಯಾಭ್ಯಾಸ ಎಸ್ಸೆಸ್ಸೆಲ್ಸಿಯವರೆಗೆ. ಅವರು ಪ್ರಸ್ತುತ ಮಂಗಳೂರಿನ ಶಕ್ತಿನಗರದ ಶಕ್ತಿ ರೆಸಿಡೆನ್ಷಿಯಲ್ ಸ್ಕೂಲ್ ಏಂಡ್ ಕಾಲೇಜಿನ ಹುಡುಗಿಯರ ವಸತಿನಿಲಯದಲ್ಲಿ ನಿಲಯಪಾಲಕಿಯಾಗಿದ್ದಾರೆ. **"ಪಾತರಗಿತ್ತಿ ಪಕ್ಕಾ", "ಅ ಆ ಇ ಈ ಉ ಊ", "ಪುಟ್ಟಪುಟ್ಟಿ ಗುಬ್ಬಾಗಿ", "ಸಕ್ರೆ ಮೂಟೇ ಯಾರಿಗ್ಬೇಕೂ...?", "ಚೀಂ ಚೀಂ ಚಿಕ್ಕ ಗುಬ್ಬಿ"** ಇತ್ಯಾದಿ ಹಲವು ಮಕ್ಕಳ ಕೃತಿಗಳನ್ನು ಬರೆದಿದ್ದಾರೆ. **ಬಾಲವಿಕಾಸ ಅಕಾಡೆಮಿಯಿಂದ ಎರಡು ಬಾರಿ ಮಕ್ಕಳ ಚಂದಿರ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಮಕ್ಕಳ ಸಾಹಿತ್ಯ ಪ್ರಶಸ್ತಿ, ಪುತ್ತೂರಿನ ಬೋಳಂತಕೋಡಿ ಕನ್ನಡ ಪ್ರಶಸ್ತಿ, ಡಿಸೋಜಾ-ಎಚ್ ಎಸ್.ವಿ ಪುವಾಣಿ ಸಾಹಿತ್ಯ ಪುರಸ್ಕಾರ**-ಇತ್ಯಾದಿ ಪ್ರಶಸ್ತಿಗಳು ಇವರಿಗೆ ದೊರೆತಿದೆ. ಆಕಾಶವಾಣಿಯಲ್ಲಿ ಇವರ ಲೇಖನಗಳು ಮತ್ತು ಕವನಗಳು ಬಿತ್ತರಗೊಂಡಿವೆ.

## ಪದಗಳ ಅರ್ಥ

ಸೌದೆ – ಕಟ್ಟಿಗೆ; ಧಗೆ – ಉರಿ, ಬಿಸಿಲು; ಪೊರೆವ – ಆಸರೆ ನೀಡುವ; ಭ್ರಮೆ – ಹುಸಿ ನಂಬಿಕೆ.

## ಅಭ್ಯಾಸಗಳು

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

೧. ಮರವು ಮನುಷ್ಯನಿಗೆ ಏನೇನು ಕೊಡುತ್ತದೆ?

೨. ಹಸುವಿನಿಂದ ಮನುಷ್ಯನು ಪಡೆಯುವ ಪ್ರಯೋಜನಗಳು ಯಾವುವು?

೩. ಗಿಡಬಳ್ಳಿಗಳು ಏನನ್ನು ಕೊಡುತ್ತವೆ?

೪. ಪ್ರಕೃತಿಯಲ್ಲಿ ನಾನು, ನನ್ನದು ಎಂಬ ಮಾತಿಲ್ಲದೆ ಉಪಕರಿಸುತ್ತಿರುವವರು ಯಾರು ಯಾರು?

೫. ಯಾವುದನ್ನು ಕವಿ ಮನುಷ್ಯನ ಭ್ರಮೆ ಎನ್ನುತ್ತಾರೆ?

**ಆ. ಸ್ವಂತ ವಾಕ್ಯದಲ್ಲಿ ಬಳಸಿರಿ.**

೧. ತ್ಯಾಗ    ೨. ಪೊರೆ    ೩. ದಾನ    ೪. ಕೋಟೆ

**ಇ. ಈ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

**ಈ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.**

ನೀರು ಕೊಡುವ ______________________

______________________

______________________

______________________ ಅನ್ನಲಿಲ್ಲ ಒಮ್ಮೆಯಾದರೂ !

ಎಲ್ಲರಿಂದ ______________________

______________________

______________________

______________________ ಭ್ರಮೆ ಮಾತ್ರವೇ !

©KTBS Not to be republished

## ವ್ಯಾಕರಣ ಮಾಹಿತಿ

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ :**

೧. **ಒಂದಾನೊಂದು ಕಾಲದಲ್ಲಿ ಒಂದು ದಟ್ಟವಾದ ಅರಣ್ಯವಿತ್ತು.**

೨. **ಲಘುಪತನಕ ಮರದ ಮೇಲಕ್ಕೆ ಹಾರಿತು.**

**ಇಲ್ಲಿ ವಾಕ್ಯದ ಕೊನೆಯಲ್ಲಿ ಪೂರ್ಣವಿರಾಮ ಚಿಹ್ನೆ (.) ಬಳಕೆಯಾಗಿದೆ.** ಇದನ್ನು **'ಬಿಂದು'** ಎಂದೂ ಕರೆಯುತ್ತಾರೆ. ಇದು ವಾಕ್ಯದ ಪೂರ್ಣಾರ್ಥ ಕ್ರಿಯೆಯನ್ನು ಸೂಚಿಸುತ್ತದೆ. ಇದು ವಾಕ್ಯದ ಕೊನೆಯಲ್ಲಿ ಬಳಕೆಯಾಗುತ್ತದೆ.

೩. **ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ.**

೪. **ಅಷ್ಟು ಸಾಕು; ಮುಂದಿನದು ನನಗೆ ಬಿಡು.**

**ಇಲ್ಲಿ ವಾಕ್ಯದ ನಡುವೆ 'ಅರ್ಧವಿರಾಮ ಚಿಹ್ನೆ' (;) ಬಳಕೆಯಾಗಿದೆ.** ಇದು ಪ್ರಧಾನ ವಾಕ್ಯಗಳಲ್ಲಿನ ಉಪವಾಕ್ಯಗಳ ಅಂತ್ಯದಲ್ಲಿ ಬಳಕೆಯಾಗುತ್ತದೆ.

೫. **ಮಂಥರಕ, ಹಿರಣ್ಯರೋಮ, ಲಘುಪತನಕ ಮತ್ತು ಚಿತ್ರಾಂಗ ನಾಲ್ವರು ಗೆಳೆಯರು.**

೬. **ಬೇಡನು ಕೂಡಲೆ ಮಂಥರಕನನ್ನೂ, ಬಲೆಯನ್ನೂ, ನೆಲಕ್ಕಿಳಿಸಿ ಹೊರಟನು.**

**ಇಲ್ಲಿ ವಾಕ್ಯದ ನಡುನಡುವೆ ಅಲ್ಪವಿರಾಮ ಚಿಹ್ನೆ (,) ಬಳಕೆಯಾಗಿದೆ.** ಇದು ಸಂಬೋಧನೆಯ ಮುಂದೆ, **ಕರ್ತೃ, ಕರ್ಮ, ಕ್ರಿಯಾಪದ**ಗಳಿಗೆ ವಿಶೇಷಣಗಳು ಬಂದಾಗ ಬಳಕೆಯಾಗುತ್ತದೆ. ಹಾಗೂ ಕೊನೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಅಗತ್ಯಕ್ಕೆ ಹೊಂದಿಕೊಂಡು ಬಳಕೆಯಾಗುತ್ತದೆ.

©KTBS Not to be republished

೭. **ನೀನು ಏಕೆ ಓಡೋಡಿ ಬಂದೆ?**

೮. **ಯಾರಿವರು? ಎಲ್ಲಿಂದ ಬಂದರು?**

**ಇಲ್ಲಿ ವಾಕ್ಯದ ಕೊನೆಯಲ್ಲಿ 'ಪ್ರಶ್ನಾರ್ಥಕ ಚಿಹ್ನೆ' (?) ಬಳಕೆಯಾಗಿದೆ.** ಇದು ಪ್ರಶ್ನೆ ಕೇಳುವ ಸಂದರ್ಭದಲ್ಲಿ ಪದ ಅಥವಾ ವಾಕ್ಯದ ಅಂತ್ಯದಲ್ಲಿ ಬಳಕೆಯಾಗುತ್ತದೆ.

೯. **ಅಬ್ಬಾ! ಎಂಥ ಸೊಗಸಾದ ಹಾಡು!**

೧೦. **ಆಹಾ! ಎಂಥ ಸುಂದರ ದೃಶ್ಯ!**

**ಇಲ್ಲಿರುವ ವಾಕ್ಯದಲ್ಲಿ 'ಭಾವಸೂಚಕ ಚಿಹ್ನೆ' (!) ಬಳಕೆಯಾಗಿದೆ.** ಇದನ್ನು **'ಆಶ್ಚರ್ಯಸೂಚಕ ಚಿಹ್ನೆ'** ಎಂದೂ ಹೇಳುತ್ತಾರೆ. ಇದು ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಬಳಕೆಯಾಗುತ್ತದೆ.

ಸಂದರ್ಭಕ್ಕೆ ತಕ್ಕಂತೆ ಬರವಣಿಗೆಯಲ್ಲಿ ಲೇಖನ ಚಿಹ್ನೆಗಳನ್ನು ಬಳಸಬೇಕು. ಇದರಿಂದ ಸ್ಪಷ್ಟವಾಗಿ ಓದಲು, ಅರ್ಥ ತಿಳಿಯಲು ಸಾಧ್ಯವಾಗುತ್ತದೆ. ಇನ್ನೂ ಕೆಲವು ಲೇಖನ ಚಿಹ್ನೆಗಳಿವೆ. ಅವುಗಳ ವಿವರಣೆಯನ್ನು ಮುಂದೆ ತಿಳಿಯೋಣ.

* * * * *

# ೧೨. ಕಂಬಳಿಹುಳು ಮತ್ತು ಚಿಟ್ಟೆ

V2J6S6

– ಎನ್. ಶ್ರೀನಿವಾಸ ಉಡುಪ

**ಪ್ರವೇಶ :** ಬಣ್ಣಬಣ್ಣದ ಚಿಟ್ಟೆ ತನ್ನ ಜೀವನದ ಪ್ರಾರಂಭದಲ್ಲಿ ಕಂಬಳಿಹುಳುವಿನ ರೂಪದಲ್ಲಿರುತ್ತದೆ. ಕಾಲಾಂತರದಲ್ಲಿ ರೆಕ್ಕೆಗಳನ್ನು ಮೂಡಿಸಿಕೊಂಡು ಆಕರ್ಷಕ ಚಿಟ್ಟೆಯಾಗಿ ಬದಲಾಗುತ್ತದೆ. ಹೀಗೆ ಯಾವುದೇ ವ್ಯಕ್ತಿಯ ಜೀವನದಲ್ಲಿಯೂ ಕೂಡ ಹಲವು ಹಂತಗಳು ಇದ್ದೇ ಇರುತ್ತವೆ. ಹಾಗಾಗಿ ನಮ್ಮ ಸದ್ಯದ ಸ್ಥಿತಿಯ ಬಗ್ಗೆ ಕೊರಗದೆ ಮುಂದಿನ ದಿನಗಳು ಉತ್ತಮವಾಗಿರುತ್ತವೆ ಎಂಬ ಆಶಾಭಾವವು ಯಾವತ್ತೂ ನಮ್ಮದಾಗಿರಬೇಕು ಎಂಬ ಸಂದೇಶವು ಈ ಕವಿತೆಯಲ್ಲಿದೆ.



ಕಂಬಳಿಹುಳುವು ಅಳುತ್ತ ಹೇಳಿತು:
"ಅಮ್ಮಾ ತಾಯಿ, ಚಿಟ್ಟೆ,
ಎಷ್ಟು ಚಂದ ನೀ! ನನಗೆ ಯಾಕೆ ಈ
ಕೆಟ್ಟ ರೂಪ ಕೊಟ್ಟೆ?

"ಕಪ್ಪಗಿರುವ ಮೈ! ಅದರ ಮೇಲೆ
ಮುಳ್ಳಂತೆ ಬೆಳೆದ ರೋಮ!
ಎಷ್ಟು ಕಾಲುಗಳೊ! ಹೇಗೆ ಎಣಿಸಲಿ?
ಅಯ್ಯೋ, ರಾಮ ರಾಮ!

"ಗೋಲಿ ಥರದ ಕಣ್ಣೆರಡು, ಮತ್ತೆ ಈ
ಪೊರಕೆಯಂಥ ಮೀಸೆ!
ನಿನ್ನ ಹಾಗೆ ತೆಳು ರೆಕ್ಕೆ ಪಡೆದು
ಮೇಲಕ್ಕೆ ಹಾರಲಾಸೆ!"

ಚಿಟ್ಟೆ ಹೇಳಿತು: "ಆತುರ ಬೇಡ,
ತಾಳಿಕೊಳ್ಳಬೇಕು;
ರೋಮ ಉದುರಿ, ಚೆಲು ರೆಕ್ಕೆ
ಮೂಡುವುದು; ಹಂಬಲವಿರಬೇಕು,

"ಮೇಲಕ್ಕೇರುವ ಪ್ರಯತ್ನ ಮಾಡು;
ಎಲ್ಲವು ಸಾಧ್ಯ, ಮಗು!
ಅಳುತ್ತ ಕುಳಿತರೆ ಏನಾಗುವುದು?
ಎಲ್ಲಿ, ಕೊಂಚ ನಗು!"

**ಕ್ಷೇತ್ರ** : **ಮಾತನಾಡುವುದು.**

**ಸಾಮರ್ಥ್ಯ** : **ಇತರರೊಡನೆ ಮಾತನಾಡುವಾಗ ಸೌಜನ್ಯ ಸೂಚಕ ಪದಗಳನ್ನು ಬಳಸುವುದು.**

©KTBS Not to be republished

**ಕವಿ ಕೃತಿ ಪರಿಚಯ:**



**ಎನ್. ಶ್ರೀನಿವಾಸ ಉಡುಪ (ಜನನ: ೧೯೩೭ ಆಗಸ್ಟ್ ೧೭, ಮರಣ: ೨೦೨೦ ಎಪ್ರಿಲ್ ೧೧) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ನೊಣಬೂರು** ಎಂಬ ಗ್ರಾಮದವರು. ತಂದೆ ವೆಂಕಟೇಶ ಉಡುಪ, ತಾಯಿ ಮಹಾಲಕ್ಷ್ಮಮ್ಮ. ಉಡುಪರು ತೀರ್ಥಹಳ್ಳಿ, ಶಿವಮೊಗ್ಗಗಳಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿ, ನಿವೃತ್ತಿಯ ಬಳಿಕ ಬೆಂಗಳೂರಿನಲ್ಲಿ ನೆಲೆಸಿದ್ದರು. ಕವಿತೆ, ಅನುವಾದ, ಮಕ್ಕಳ ಸಾಹಿತ್ಯ, ಅಂಕಣ ಬರಹ ಹೀಗೆ ಅನೇಕ ಪ್ರಕಾರಗಳಲ್ಲಿ ಬರವಣಿಗೆ ಮಾಡಿರುವರು. "**ಕನ್ನಡ ನಾಡಿನ ಕೂಸುಮರಿ**", "**ಕುಂಭಕರ್ಣನ ನಿದ್ದೆ**", "**ಪಾಪು ಪದ್ಯಗಳು**", "**ಗೂಬಜ್ಜಿಯ ಗೊರಕೆ**", "**ಹಿಡಿಂಬನ ತೋಟ**" – ಇವು ಮಕ್ಕಳಿಗಾಗಿ ಪ್ರಕಟವಾಗಿರುವ ಅವರ ಕೆಲವು ಕೃತಿಗಳು. ಅವರ ಸಾಹಿತ್ಯಕೃಷಿಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಕಾಂತಾವರ ಕನ್ನಡ ಸಂಘದ ವಾರ್ಷಿಕ ಗೌರವ ಪ್ರಶಸ್ತಿ, ಶಿವಮೊಗ್ಗೆಯ ಕರ್ನಾಟಕ ಸಂಘದ **ಶಿವರಾಮ ಕಾರಂತ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ರತ್ನಾಕರವರ್ಣಿ ದತ್ತಿ ಪ್ರಶಸ್ತಿಗಳು** ಒಳಗೊಂಡಂತೆ ಹಲವು ಮನ್ನಣೆಗಳು ಸಂದಿವೆ.

## ಪದಗಳ ಅರ್ಥ

ರೋಮ – ಮೈಯಲ್ಲಿ ಬೆಳೆಯುವ ಕೂದಲು; ಪೊರಕೆ – ಧೂಳು ಜಾಡಿಸುವ ಸಾಧನ, ಕಸಬರಗೆ; ಆತುರ – ಗಡಿಬಿಡಿ; ತಾಳಿಕೊಳ್ಳು – ನಿಧಾನಿಸು; ಹಂಬಲ – ಆಸೆ; ಕೊಂಚ – ಸ್ವಲ್ಪ.

## ಅಭ್ಯಾಸಗಳು

### ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

೧. ಕಂಬಳಿಹುಳು ಅಳುತ್ತಾ ತನ್ನಮ್ಮನಲ್ಲಿ ಏನು ಹೇಳಿತು?

೨. ಕಂಬಳಿಹುಳು ಹೇಗಿದೆ? ವಿವರಿಸಿ.

೩. ಕಂಬಳಿಹುಳುವಿನ ಮೀಸೆ ಹೇಗಿದೆ?

೪. ಕಂಬಳಿಹುಳುವಿನ ಆಸೆ ಏನು?

೫. ಅಮ್ಮ ಚಿಟ್ಟೆ ಕಂಬಳಿಹುಳುವಿಗೆ ಏನುತ್ತರ ಕೊಟ್ಟಿತು?

### ಆ. ಬಿಟ್ಟಸ್ಥಳ ತುಂಬಿರಿ.

೧. ಕಪ್ಪಗಿರುವ ಮೈ, ಅದರ ಮೇಲೆ ______ ಬೆಳೆದ ರೋಮ!

೨. ನಿನ್ನ ಹಾಗೆ ______ ಪಡೆದು ಮೇಲಕ್ಕೆ ಹಾರಲಾಸೆ!

೩. ಮೇಲಕ್ಕೇರುವ ______ ಮಾಡು, ಎಲ್ಲವು ಸಾಧ್ಯ ಮಗು!

### ಇ. ಈ ಪದಗಳನ್ನು ಬಿಡಿಸಿ ಬರೆಯಿರಿ.

೧. ಕಪ್ಪಗಿರುವ

೨. ಕಣ್ಣೆರಡು

೩. ಹಾರಲಾಸೆ

೪. ಹಂಬಲವಿರಬೇಕು

೫. ಮೇಲಕ್ಕೇರುವ

©KTBS Not to be republished

ಈ. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ.

ಚಿಟ್ಟೆ ಹೇಳಿತು: ______________

______________________

______________________

____________ ಹಂಬಲವಿರಬೇಕು.

ಮೇಲಕ್ಕೇರುವ ______________

______________________

______________________

______________ ಕೊಂಚ ನಗು!

ಉ. ಪೂರಕ ಚಟುವಟಿಕೆ:

೧. ಕಂಬಳಿಹುಳು ಹೇಗೆ ಚಿಟ್ಟೆಯಾಗುತ್ತದೆ ಎಂಬುದನ್ನು ವಿಜ್ಞಾನ ಶಿಕ್ಷಕರಲ್ಲಿ ಕೇಳಿ ತಿಳಿಯಿರಿ.

೨. ಕಂಬಳಿಹುಳು ನಿಜಕ್ಕೂ ಕೆಟ್ಟರೂಪದಲ್ಲಿದೆಯೇ? – ಇದರ ಬಗ್ಗೆ ಗುಂಪು ಚರ್ಚೆ ನಡೆಸಿ.

೩. ಚಿಟ್ಟೆಯ ಜೀವನಚಕ್ರದ ವಿವಿಧ ಹಂತಗಳನ್ನು ತೋರಿಸುವ ಅಂದವಾದ ಚಿತ್ರಪಟ ಬರೆದು ಸಿದ್ಧಗೊಳಿಸಿ.

೪. ಕಂಬಳಿಹುಳವು ಚಿಟ್ಟೆಯಾಗುವ ಹಂತವನ್ನು ರೂಪಾಂತರ ಎನ್ನುತ್ತಾರೆ. ಇದೇ ರೀತಿ ರೂಪಾಂತರಗೊಳ್ಳುವ ಬೇರೆ ಯಾವೆಲ್ಲ ಜೀವಿಗಳಿವೆ? ಮಾಹಿತಿ ಸಂಗ್ರಹಿಸಿ.

## ವ್ಯಾಕರಣ ಮಾಹಿತಿ

**ನಾವು ಹಿಂದಿನ ಪಾಠದಲ್ಲಿ ಕೆಲವು ಲೇಖನ ಚಿಹ್ನೆಗಳನ್ನು ಪರಿಚಯ ಮಾಡಿಕೊಂಡಿದ್ದೇವೆ. ಈಗ ಇನ್ನೂ ಕೆಲವು ಲೇಖನ ಚಿಹ್ನೆಗಳನ್ನು ತಿಳಿಯೋಣ.**

©KTBS Not to be republished

**ಕೆಳಗಿನ ವಾಕ್ಯಗಳನ್ನು ಗಮನಿಸಿರಿ :**

೧. **ನೌಕಾಸೇನೆ :–** ಭಾರತೀಯ ನೌಕಾಸೇನೆ ಭೂಸೇನೆಯಷ್ಟೇ ಹಳೆಯದು. ಜಲಮಾರ್ಗದಲ್ಲಿ ವೈರಿಗಳನ್ನು ತಡೆಯಲು ನೌಕಾಸೇನೆ ಬಳಕೆಯಾಗುತ್ತದೆ.

ಇಲ್ಲಿ ವಾಕ್ಯದ ಶಿರೋನಾಮೆಯ ಅನಂತರ ವಿವರಣಾತ್ಮಕ ಚಿಹ್ನೆ (:–) ಬಳಕೆಯಾಗಿದೆ. ಅಭಿಪ್ರಾಯದ ವಿವರಣೆ ಇಂತಿದೆ ಎನ್ನುವುದನ್ನು ತಿಳಿಸುವ ಸಂದರ್ಭದಲ್ಲಿ ಈ ಚಿಹ್ನೆ ಬಳಕೆಯಾಗುತ್ತದೆ.

೨. ಒಂದು ಬಿಲದೊಳಗೆ 'ಹಿರಣ್ಯರೋಮ' ಎಂಬ ಮೂಷಿಕವು ಮನೆಮಾಡಿಕೊಂಡಿತ್ತು.

ಮೇಲಿನ ವಾಕ್ಯದಲ್ಲಿ 'ಹಿರಣ್ಯರೋಮ' ಈ ಪದಕ್ಕೆ ವಾಕ್ಯವೇಷ್ಟನ ಚಿಹ್ನೆ (' ') ಬಳಕೆಯಾಗಿದೆ. ಇದು ಪಾರಿಭಾಷಿಕ/ಪ್ರಧಾನ/ವಿಶಿಷ್ಟ ಪದಗಳನ್ನು ಬರೆಯುವಾಗ ಬಳಕೆಯಾಗುತ್ತದೆ.

೩. "ಸ್ವಾಮಿ, ನನಗೆ ಅದೃಷ್ಟವಿಲ್ಲ. ಈಗಲೂ ನನ್ನ ಹೃದಯ ಅವನಿಗಾಗಿ ಮಿಡಿಯುತ್ತಿದೆ. ಗಂಧರ್ವಸೇನ ನನ್ನ ಪ್ರೀತಿಯ ಕತ್ತೆ" ಎಂದು ಮಡಿವಾಳ್ತಿ ಬೊಬ್ಬಿಟ್ಟು ಅತ್ತಳು.

ಮೇಲಿನ ವಾಕ್ಯದಲ್ಲಿ ಉದ್ಧರಣ ಚಿಹ್ನೆ (" ") ಬಳಕೆಯಾಗಿದೆ. ಇದು ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಹೇಳುವಾಗ ಬಳಕೆಯಾಗುತ್ತದೆ.

೪. ನರಿಯು ಕೊಕ್ಕರೆ(ನೀರುಹಕ್ಕಿ)ಯನ್ನು ಹಿಡಿಯಲು ಹೊಂಚು ಹಾಕಿತು.

ಮೇಲಿನ ವಾಕ್ಯದಲ್ಲಿ ಆವರಣ ಚಿಹ್ನೆ ( ) ಬಳಕೆಯಾಗಿದೆ. ಇದು ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಕೆಯಾಗುತ್ತದೆ.

©KTBS Not to be republished

* * * * *

# ೧೩. ಹೊಸ ಬಾಳು

E5G7N5

– ಬಿ.ಎಸ್. ಕುರ್ಕಾಲ

**ಪ್ರವೇಶ :** ಇಂದಿನ ಯಂತ್ರ ಯುಗದ ದಿನಗಳಲ್ಲಿ ಪಕ್ಷಿ ಸಂಕುಲ ವಿನಾಶದತ್ತ ಸರಿಯುತ್ತಿದೆ. ಅದರಲ್ಲೂ ನಿರುಪದ್ರವಿ ಜೀವಿ ಗುಬ್ಬಚ್ಚಿಗಳು ನಗರ ಸಂಸ್ಕೃತಿಯ ಅಬ್ಬರದಲ್ಲಿ ಕೊಚ್ಚಿ ಹೋಗುತ್ತಿವೆ. ಪಕ್ಷಿಗಳು ದುರಂತದೆಡೆಗೆ ಸಾಗುವುದು ನಿಜಕ್ಕೂ ನೋವುಂಟು ಮಾಡುವ ಸಂಗತಿ. ಎಲ್ಲೋ ಮರೆಯಾದ ಗುಬ್ಬಚ್ಚಿಗಳನ್ನು ನಮ್ಮ ಮನೆಗಳಿಗೆ ಮರಳಿ ಕರೆತರೋಣ. ನಿಸರ್ಗದ ಮುಗ್ಧ ಜೀವಿ ಪಕ್ಷಿಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಜನ ಜಾಗೃತಿ ಮೂಡಿಸುವುದು ಅವಶ್ಯವಾಗಿದೆ.

ಮನೆಯ ಅಂಗಳದಲ್ಲಿ
ಗುಬ್ಬಿ, ದೇವರ ಹಕ್ಕಿ
ಚೀಂವ್ ಚೀಂವ್ ಎನ್ನುತ್ತ ಹಾಡುತಿತ್ತು
ಚಾವಡಿಯ ಗೋಡೆಯಲಿ
ಗಾಂಧಿ ತಾತನ ಚಿತ್ರ
ಗುಬ್ಬಚ್ಚಿಯನು ನಗುತ ನೋಡುತಿತ್ತು



©KTBS Not to be republished



ಪುಟ್ಟ ಹಕ್ಕಿಯು ತನ್ನ
ಕಾದಲನ ಕರೆಯುತ್ತ
ಬಿದ್ದಿರುವ ಕಾಳುಗಳ ಹುಡುಕುತಿತ್ತು
ಕಳ್ಳ ಹೆಜ್ಜೆಯ ಬೆಕ್ಕು
ಹೊಂಚು ಹಾಕುತ ಬರಲು
ಬುರ್ರನೆ ಹಾರಿ ತಾ ಪಾರಾಗುತಿತ್ತು

ಕರುಣೆ ತುಂಬಿದ ಕಣ್ಣು
ನವಿರಾದ ಹೂ ನಗೆಯು
ಮನೆ ಮಂದಿಗಳನೆಲ್ಲ ಸೆಳೆವ ನೋಟ
ಸರ್ವರೊಳು ಸವಿನುಡಿಯ
ಸಲ್ಲಾಪವಾಡುತಿಹ
ಹಕ್ಕಿ ಜೋಡಿಯು ಮನಕೆ ಮೋಜಿನಾಟ

ಗುಬ್ಬಚ್ಚಿ ಬಲು ಚುರುಕು
ಪಾದರಸದಾ ಸೆಳಕು
ತನ್ನ ಇನಿಯನ ಕೂಡಿ ಆಡುತಿತ್ತು
ಜೊತೆಯಾಗಿ ಹಾರಾಡಿ
ಜೊತೆಯಲ್ಲೆ ವಿಹರಿಸುತ
ಅಂಗಳಕೆ ಶೋಭೆಯನು ನೀಡುತಿತ್ತು



ಅಚ್ಚು ಮೆಚ್ಚಿನ ಜೋಡಿ
ಅನುಕೂಲ ದಾಂಪತ್ಯ
ಬೆರಗುಗೊಳಿಸುವ ಪ್ರತಿಭೆ ಗುಬ್ಬಿಗಳಿಗೆ
ಉಭಯ ಪಕ್ಷಿಗಳಲ್ಲಿ
ಮಿಗಿಲು ಯಾವುದು ಎಂದು
ಹೇಳಲಾಗದು ಬುದ್ಧಿ ಜೀವಿಗಳಿಗೆ

ಅರಳೆ ಹುಲುಕಡ್ಡಿಗಳ
ಹುಡುಕಿ ಸಂಗ್ರಹಿಸುತ್ತ
ಹಕ್ಕಿಗಳು ಕಟ್ಟಿದವು ಮನೆಯೊಂದನು
ಗಾಂಧಿ ಚಿತ್ರದ ಹಿಂದೆ
ಸಜ್ಜಾದ ಗೂಡಿನಲಿ
ಹೂಡಬೇಕೆಂಬಾಸೆ ಹೊಸ ಬಾಳನು

©KTBS Not to be republished

**ಕ್ಷೇತ್ರ** : ಬರೆಯುವುದು.
**ಸಾಮರ್ಥ್ಯ** : ಪಾಠದಲ್ಲಿ ಬರುವ ವಿಚಾರಗಳನ್ನು ಕಥೆ, ಸಂಭಾಷಣೆ, ಸಾರಾಂಶ ರೂಪದಲ್ಲಿ ಬರೆಯುವುದು.

**ಕವಿ ಕೃತಿ ಪರಿಚಯ:**



**ಹೊರನಾಡಾದ ಮುಂಬಯಿಯಲ್ಲಿ** ನೆಲೆಗೊಂಡಿರುವ ಬಿ.ಎಸ್. ಕುರ್ಕಾಲರ ನಿಜನಾಮಧೇಯ **ಭುಜಂಗಶೆಟ್ಟಿ. ಜನನ: ೧೯೩೨ ಜುಲೈ ೧೭.** ಇವರ ತಂದೆ ಕುರ್ಕಾಲು ಗಣಪಯ್ಯಶೆಟ್ಟಿ, ತಾಯಿ ಲಕ್ಷ್ಮಿಶೆಡ್ತಿ. ಹುಟ್ಟೂರಾದ ಉಡುಪಿಯ ಪಾಜಕದಿಂದ ೧೯೬೬ರಲ್ಲಿ ಮುಂಬಯಿಗೆ ಹೋದವರು ಅಲ್ಲಿ ಶಿಕ್ಷಕ ವೃತ್ತಿ ಕೈಗೊಂಡರು. ನಟ, ನಾಟಕಕಾರ, ನಿರ್ದೇಶಕ, ಕವಿ, ಪತ್ರಿಕಾ ಸಂಪಾದಕ, ಅಂಕಣಕಾರ, ಯಕ್ಷಗಾನ ಅರ್ಥಧಾರಿ– ಹೀಗೆ ವಿವಿಧ ವಲಯಗಳಲ್ಲಿ ಅವರ ಸೇವೆ ಸಂದಿದೆ. ನನ್ನ ನಿನ್ನ ಅಂತರಂಗ, ಶ್ರಾವಣ ಲಹರಿ, ಬರೆಯುವೆನು ನಿನಗಾಗಿ, ರಾಗ ರಶ್ಮಿ ಮುಂತಾದ ಕವನ ಸಂಕಲನಗಳೂ ಸೇರಿದಂತೆ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ.

**ಕನ್ನಡ ಸಾಹಿತ್ಯ ಪರಿಷತ್ತು, ಮುಂಬಯಿ ಕರ್ನಾಟಕ ಸಂಘ** ಮುಂತಾದ ಅನೇಕ ಸಂಘ ಸಂಸ್ಥೆಗಳು ಇವರಿಗೆ ಪ್ರಶಸ್ತಿಗಳನ್ನಿತ್ತು ಸನ್ಮಾನಿಸಿವೆ. ಪ್ರಸ್ತುತ ಪದ್ಯವನ್ನು ಕುರ್ಕಾಲ ಅವರ **'ಬರೆಯುವೆನು ನಿನಗಾಗಿ'** ಕವನಸಂಕಲನದಿಂದ ಆರಿಸಲಾಗಿದೆ.

## ಪದಗಳ ಅರ್ಥ

ಚಾವಡಿ–ಜಗಲಿ, ಹಳ್ಳಿಯಲ್ಲಿ ಪಂಚಾಯತಿ ನಡೆಯುವ ಸ್ಥಳ. ಕಾದಲ–ಇನಿಯ, ಪ್ರೀತಿಸುವಾತ. ಹೊಂಚು–ಉಪಾಯ ಮಾಡು, ರಹಸ್ಯ ಕಾರ್ಯ ನಡೆಸು. ಸರ್ವರೊಳು–ಎಲ್ಲರೊಳು. ಕರುಣೆ–ಕನಿಕರ, ದಯೆ. ಮೋಜು–ವಿನೋದ, ತಮಾಷೆಯಾಟ. ಸಜ್ಜು–ಸಿದ್ಧತೆ, ತಯಾರಿ. ಸೆಳಕು–ಚುರುಕು, ಚಟುವಟಿಕೆ. ಬೆರಗು–ಆಶ್ಚರ್ಯ, ವಿಸ್ಮಯ, ಸೋಜಿಗ. ಶೋಭೆ–ಸೊಗಸು, ಸೊಬಗು. ಮಿಗಿಲು–ಶ್ರೇಷ್ಠವಾದುದು. ಸಂಗ್ರಹಿಸು– ಒಟ್ಟುಮಾಡು, ಕೂಡಿಸು. ಉಭಯ–ಎರಡು, ಜೋಡಿ. ಅರಳೆ–ಹತ್ತಿ. ಹುಲು–ಹುಲ್ಲು, ಲಘುವಾದ.

**ವಿವರ ತಿಳಿಯಿರಿ:**

**ಸಲ್ಲಾಪವಾಡು**–ಹಿತವಾದ ಮಾತುಗಳನ್ನು ವಿನಿಮಯ ಮಾಡುವುದು.

**ಅನುಕೂಲ ದಾಂಪತ್ಯ**– ಗಂಡ ಹೆಂಡತಿಯರು ಪರಸ್ಪರ ಅರಿತುಕೊಂಡು ಬಾಳುವೆ ನಡೆಸುವುದು.

## ಅಭ್ಯಾಸಗಳು

**ಅ. ಬಿಟ್ಟ ಸ್ಥಳಗಳನ್ನು ಸರಿಯಾದ ಪದಗಳಿಂದ ಭರ್ತಿಮಾಡಿರಿ.**

೧. ಗಾಂಧೀ ತಾತನ.............................ಗುಬ್ಬಚ್ಚಿಯನು.................................. ನೋಡುತ್ತಿತ್ತು.

೨. ಬೆಕ್ಕು.............................ಹಾಕುತ ಬರಲು.............................ಹಾರಿ ತಾ ಪಾರಾಗುತ್ತಿತ್ತು.

೩. ಸಲ್ಲಾಪವಾಡುತಿಹ.............................ಜೋಡಿಯು.............................. ಮೋಜಿನಾಟ.

೪. ಅಚ್ಚು...................ಜೋಡಿ ಅನುಕೂಲ ...................ಬೆರಗುಗೊಳಿಸುವ ಪ್ರತಿಭೆ ಗುಬ್ಬಿಗಳಿಗೆ.

೫. ಸಜ್ಜಾದ..............................ನಲಿ ಹೂಡಬೇಕೆಂಬಾಸೆ .............................. ಬಾಳನು.

**ಆ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಗೋಡೆಯ ಮೇಲೆ ಯಾರ ಚಿತ್ರವಿತ್ತು?

೨. ಪುಟ್ಟಹಕ್ಕಿಯು ಏನನ್ನು ಹುಡುಕುತ್ತಿತ್ತು?

೩. ಗುಬ್ಬಚ್ಚಿಗಳದ್ದು ಯಾವ ಬಗೆಯ ದಾಂಪತ್ಯ?

೪. ಗುಬ್ಬಚ್ಚಿಗಳು ಏನನ್ನು ಸಂಗ್ರಹಿಸುತ್ತಿದ್ದವು?

೫. ಈ ಕವನವನ್ನು ಯಾವ ಸಂಕಲನದಿಂದ ಆರಿಸಲಾಗಿದೆ?

**ಇ. ಎರಡು-ಮೂರು ವಾಕ್ಯದಲ್ಲಿ ಉತ್ತರಿಸಿರಿ.**

೧. ಗುಬ್ಬಚ್ಚಿಯು ಮನೆಯ ಅಂಗಳಕ್ಕೆ ಶೋಭೆ ಹೇಗೆ ತರುತ್ತಿತ್ತು?

೨. ಗುಬ್ಬಚ್ಚಿಯ ಪ್ರತಿಭೆಯನ್ನು ಕವಿ ಹೇಗೆ ವಿವರಿಸಿದ್ದಾರೆ?

**ಈ. ಈ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿರಿ.**

೧. ಪಾತ್ರಾಭಿನಯ　　೨. ಮಹರ್ಷಿ

೩. ಶಬ್ದಾಲಂಕಾರ　　೪. ಚತುರೋಕ್ತಿ

©KTBS Not to be republished

**ಉ. ಇವುಗಳಿಗೆ ತಲಾ ಎರಡು ಉದಾಹರಣೆಗಳನ್ನು ಬರೆಯಿರಿ.**

೧. ಸವರ್ಣದೀರ್ಘ ಸಂಧಿ    ೨. ಗುಣಸಂಧಿ

**ಊ. ನುಡಿಗಟ್ಟಿನ ಸಹಾಯದಿಂದ ವಾಕ್ಯ ರಚಿಸಿರಿ.**

೧. ಹೊಂಚುಹಾಕು    ೨. ಬೆಕ್ಕಸಬೆರಗಾಗು

೩. ಮನೆಮಂದಿ    ೪. ಹುಲುಕಡ್ಡಿ

**ಋ. ಅಂಕಣದಲ್ಲಿರುವ ಅಕ್ಷರಗಳನ್ನು ಹೇಗೆ ಬೇಕಾದರೂ/ ಎಲ್ಲಿಂದ ಬೇಕಾದರೂ ಉಪಯೋಗಿಸಿ ೫೦ಕ್ಕಿಂತ ಹೆಚ್ಚು ಶಬ್ದಗಳನ್ನು ಮಾಡಬಹುದು. ನೀವೆಷ್ಟು ಮಾಡಬಲ್ಲಿರಿ? ಅತಿ ಹೆಚ್ಚು ಪದ ರಚಿಸಿದವರಿಗೆ ಮೆಚ್ಚುಗೆ ವ್ಯಕ್ತಪಡಿಸಿರಿ.**

**ಉದಾ :** ದೊಡ್ಡ, ಮೊಗ್ಗು.

| | | | | |
|---|---|---|---|---|
| ಚ | ಕ್ಕ | ಚೊ | ಅ | ಮ |
| ರೆ | ಸ | ಳು | ಗ್ಗು | ರ |
| ಜ | ಹೆ | ಣ | ಮೊ | ಹಿ |
| ಬೆ | ಕ | ಚ್ಚು | ವ | ತ |
| ನು | ಗ | ಡ್ಡ | ದೊ | ಗು |

©KTBS Not to be republished

## ವ್ಯಾಕರಣ ಮಾಹಿತಿ

**ಸಮಾಸ :** ಕೆಳಗಿನ ಪದಗಳನ್ನು ಗಮನಿಸಿರಿ.

- ಅರಸನ + ಮನೆ = ಅರಮನೆ.
- ಹಿರಿದು + ಮರ = ಹೆಮ್ಮರ.
- ಗಿಡವೂ + ಮರವೂ + ಬಳ್ಳಿಯೂ = ಗಿಡಮರಬಳ್ಳಿಗಳು.
- ಕೈಯನ್ನು + ಮುಗಿ = ಕೈಮುಗಿ.

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕೆ ಲೋಪಬಾರದ ರೀತಿಯಲ್ಲಿ ಸಮಾಸ ಪದಗಳಾಗುತ್ತವೆ. ಇವುಗಳಿಗೆ 'ಸಮಸ್ತಪದಗಳು' ಎಂದೂ ಕರೆಯುತ್ತಾರೆ. ಸಮಾಸಪದವನ್ನು ಬಿಡಿಸಿ ಬರೆಯುವುದಕ್ಕೆ 'ವಿಗ್ರಹ ವಾಕ್ಯ' ಎನ್ನುವರು.

**ಉದಾ:** ತಲೆಯಲ್ಲಿ + ನೋವು = ತಲೆನೋವು

ಇಲ್ಲಿ 'ತಲೆನೋವು' ಎಂಬ ಪದವನ್ನು 'ವಿಗ್ರಹವಾಕ್ಯ' ಮಾಡಿ ಬರೆಯಲಾಗಿದೆ. ಮೊದಲನೆಯ ಪದವನ್ನು 'ಪೂರ್ವಪದ'ವೆಂದೂ ಎರಡನೆಯ ಪದವನ್ನು 'ಉತ್ತರಪದ'ವೆಂದೂ ಕರೆಯುವರು.

**ಸಮಾಸಗಳಲ್ಲಿ ಎಂಟು ವಿಧ.**

- ತತ್ಪುರುಷಸಮಾಸ
- ಕರ್ಮಧಾರೆಯಸಮಾಸ
- ದ್ವಿಗುಸಮಾಸ
- ದ್ವಂದ್ವಸಮಾಸ
- ಅಂಶಿಸಮಾಸ
- ಬಹುವ್ರೀಹಿಸಮಾಸ
- ಕ್ರಿಯಾಸಮಾಸ
- ಗಮಕಸಮಾಸ

**ಭಾಷಾ ಆಟ**

ಅ. ಶಿಕ್ಷಕರು ಬಾಯಾರಿದ ಕಾಗೆಯ ಕಥೆಯನ್ನು ಹೇಳುವುದು. ಅನಂತರ ವಿದ್ಯಾರ್ಥಿಗಳು ಕಥೆಯನ್ನು ತಮ್ಮ ಮಾತಿನಲ್ಲಿ ಬರೆಯುವುದು.

ಆ. ವೈದ್ಯ-ರೋಗಿ ಸಂಭಾಷಣೆಯನ್ನು ಮಕ್ಕಳಿಂದ ಮಾಡಿಸುವುದು.

**ಉದಾ:-** **ವೈದ್ಯ:** (ಒಬ್ಬ ಹುಡುಗನನ್ನು ಮಲಗಿಸಿ ಸ್ಟೆಥೋಸ್ಕೋಪ್ ಇಟ್ಟು ನೋಡುತ್ತಾ ಏನಾಗಿದೆ ನಿನಗೆ?

**ರೋಗಿ:** (ನಡುಗುತ್ತ) ನನಗೆ ರಾತ್ರಿಯೆಲ್ಲ ಚಳಿಜ್ವರ ಬಂದಿತು.

**ವೈದ್ಯ:** ನಾಲಿಗೆ ಚಾಚು.

**ರೋಗಿ:** (ನಾಲಿಗೆ ಚಾಚುತ್ತ ಒಂಥರ ಧ್ವನಿ ಹೊರಡಿಸುವನು)

**ವೈದ್ಯ:** (ಮಾತ್ರೆ ಚೀಟಿ ಬರೆಯುತ್ತ) ಈ ಮಾತ್ರೆ ತೆಗೆದುಕೋ ಸರಿಯಾಗುತ್ತದೆ.

(ಇನ್ನೊಂದು ಸಂದರ್ಭವನ್ನು ಮಕ್ಕಳೇ ಬರೆಯಬೇಕು.)

©KTBS Not to be republished

## ಯೋಜನೆ

- ನಿಮಗೆ ಗೊತ್ತಿರುವ ಪಕ್ಷಿಗಳ ಚಿತ್ರಗಳನ್ನು ಸಂಗ್ರಹಿಸಿ ಚಿತ್ರಸಂಪುಟ ತಯಾರಿಸಿರಿ.
- ಪರಿಸರ ಸಂರಕ್ಷಣೆಗೆ ನೀವು ಕೈಗೊಂಡ ಕಾರ್ಯಗಳನ್ನು ಪಟ್ಟಿ ಮಾಡಿರಿ.

## ಪೂರಕ ಓದು

- ಕೆ.ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ' ಕವನ ಸಂಕಲನ ಓದಿರಿ.
- ಹೊರನಾಡ ಕನ್ನಡಿಗರು ಬರೆದ ಸಾಹಿತ್ಯ ಕೃತಿಗಳನ್ನು ಸಂಪಾದಿಸಿ ಓದಿರಿ.
- ಹನಿಗವನಗಳನ್ನು ಸಂಗ್ರಹಿಸಿ ಓದಿರಿ.

## ಶುಭ ನುಡಿ

- ನುಡಿಯಲು ಒಳ್ಳೆಯ ಮಾತುಗಳು ಇರುವಾಗ ಕೆಟ್ಟ ಮಾತುಗಳನ್ನು ಆಡುವುದೇಕೆ?
- ಆತ್ಮಶಕ್ತಿ ಇರುವವರನ್ನು ಯಾವ ದುಷ್ಟಶಕ್ತಿಯೂ ನಾಶಗೊಳಿಸಲಾರದು.
- ಗೌರವಕೊಟ್ಟು ಗೌರವ ಪಡೆಯೋಣ.

* * * * *

# ೧೪. ಗಂಗವ್ವ ತಾಯಿ

A1Y4C5

– ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ

**ಪ್ರವೇಶ :** ಪಂಚಭೂತಗಳಲ್ಲಿ ಜಲವು ಒಂದು. ಜಲದ ಇನ್ನೊಂದು ಹೆಸರು ಗಂಗೆ. ಇಳಿದು ಬಾ ತಾಯಿ ಇಳಿದು ಬಾ ಎಂಬುದಾಗಿ ದ.ರಾ.ಬೇಂದ್ರೆಯವರು ಗಂಗೆಯನ್ನು ಭೂಮಿಗೆ ಆಹ್ವಾನಿಸಿದ್ದರು. ನೀರಿಲ್ಲದೆ ಬರ ಬಂದಾಗಲೆಲ್ಲ ಮತ್ತೆ ಮತ್ತೆ ಕವಿಗಳು ಗಂಗೆಯನ್ನು ಭೂಮಿಗೆ ಬರುವಂತೆ ಆಹ್ವಾನಿಸುತ್ತಾರೆ. ನೀರಿಲ್ಲದಿದ್ದರೆ ಬದುಕೇ ದುಸ್ತರ. ನೀರು ಭೂಮಿಗಿಳಿದು ಬಂದು ನೆಲದಲ್ಲಿ ಹರಿಯುವ ಕ್ರಮವೇ ಒಂದು ಅದ್ಭುತ ಕಾವ್ಯ. ಮನುಷ್ಯ ಹಾಗೂ ನೀರಿನ ಪರಸ್ಪರ ಸಂಬಂಧವನ್ನು ಮೆಲುಕು ಹಾಕುವ ಕವನವಿದು.



ಬಾ ತಾಯಿ ಬಾ ತಾಯಿ
ಬಾರವ್ವ ತಾಯಿ
ಗಂಗವ್ವ ತಾಯಿ
ನೀರವ್ವ ತಾಯಿ

ನೆಲದ ಕಣ ಕಣದಾಗ
ಮನದ ಪದ ಪದರಾಗ
ತುಂಬವ್ವ ತಾಯಿ
ಜೀವನಾ ನೀನೆಮಗೆ
ನೀಡವ್ವ ತಾಯಿ

ನೀನೊಬ್ಬಳಿದ್ದರೆ
ಜಗದಾಗ ನಭದಾಗ
ಜಳ ಜಳ ಜಳ ಜಳ
ಜಲ ಜಲ ತಾಯಿ
ಹೊಳೆಯವ್ವ ತಾಯಿ
ನೀರವ್ವ ತಾಯಿ

ನೆಲದ ಒಳಹೊರಗೆಲ್ಲ
ಪ್ರಾಣದಾ ತುಂಬೆಲ್ಲ
ನಗುನಗುತ ನಲಿಯುತ್ತ
ಪುಟಿಯುತ್ತ ಕುಣಿಯುತ್ತ
ಚಿಮ್ಮುತ್ತ ಜಿಗಿಯುತ್ತ
ಹರಿಯುತ್ತ ಸುರಿಯುತ್ತ
ಧೋ ಧೋ ಬಾರವ್ವ
ನೀರವ್ವ ಬಾರವ್ವ

© KTBS Not to be republished

ಒಣಗೀದ ನೆಲದಾಗ
ಹಸಿ ಹಸಿರು ನೆಡಲಾಕ
ಉಸಿರುಸಿರು ಉಳಿಸಾಕ
ಕೊಳೆಯೆಲ್ಲ ತೊಳಿಯಾಕ



ಭರಭರ ಥರಥರ
ಜೀವದಾ ತುಣುಕಾಗಿ
ಮೈ ಮನಸ ಹೊಲಸೆಲ್ಲ
ತೊಳಿಯವ್ವ ತಾಯಿ
ನೀರವ್ವ ತಾಯಿ
ಗಂಗವ್ವ ತಾಯಿ

ಬಾರವ್ವ ತಾಯಿ
ಗಂಗವ್ವ ಮಾಯಿ
ಬಾ ತಾಯಿ ಬಾ ತಾಯಿ
ನೀರವ್ವ ತಾಯಿ

ನೀರವ್ವ ಗಂಗವ್ವ
ಮಳಿಯಾಗಿ ಬಾರವ್ವ
ಹೊಳಿಯಾಗಿ ಹರಿಯವ್ವ
ಒಣಗೀದ ನೆಲದಾಗ
ಹಸುರಾಗಿ ಹೊಳಿಯವ್ವ
ಕಲಕಲ ನದಿಯಾಗಿ
ಹನಿ ಹನಿ ಕಣ ಕಣ

ಬಾ ತಾಯಿ ಬಾ ತಾಯಿ
ಬಾರವ್ವ ತಾಯಿ
ಗಂಗವ್ವ ತಾಯಿ

**ಕ್ಷೇತ್ರ :** **ಮಾತನಾಡುವುದು.**
**ಸಾಮರ್ಥ್ಯ :** **ಹೊಸ ವಿಷಯಗಳನ್ನು ಗಮನವಿಟ್ಟು ಆಲಿಸಿ ಮಾತಿನಲ್ಲಿ ಸ್ಪಷ್ಟವಾಗಿ ಪ್ರಕಟಿಸುವುದು.**

**ಕವಿ ಕೃತಿ ಪರಿಚಯ :**



**ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರು** ಕನ್ನಡದ ಪ್ರಮುಖ ಕವಿ, ವಿಮರ್ಶಕ, ಅಂಕಣಕಾರ ಹಾಗೂ ಅನುವಾದಕರು. **ಧಾರವಾಡ ಸನಿಹದ ಯಾದವಾಡದಲ್ಲಿ ೩-೧೧-೧೯೩೯** ಬಸೆಟ್ಟೆಪ್ಪ ಹಾಗೂ ಗಿರಿಜಾದೇವಿಯವರ ಮಗನಾಗಿ ಜನಿಸಿದರು. ಧಾರವಾಡದ ವಿದ್ಯಾಗಿರಿಯ **'ಹೂಮನೆ'**ಯಲ್ಲಿ ನೆಲೆಗೊಂಡಿರುವ ಡಾ. ಪಟ್ಟಣಶೆಟ್ಟಿಯವರು ೬೦ಕ್ಕಿಂತ ಹೆಚ್ಚು ಕನ್ನಡ ಮತ್ತು ೧೦ರಷ್ಟು ಹಿಂದೀ ಪುಸ್ತಕಗಳನ್ನು ರಚಿಸಿದ್ದಾರೆ. **'ನೀನಾ', 'ಔರಂಗಜೇಬ', 'ಪರದೇಸಿ ಹಾಡುಗಳು', 'ಅಯಸ್ಕಾಂತ', 'ಇಷ್ಟು ಹೇಳಿದ ಮೇಲೆ', 'ಅಪರಂಪಾರ' ಮುಂತಾದ ಕವನ ಸಂಗ್ರಹಗಳು, 'ಮಾವ', 'ಹಕ್ಕಿಗಳು' ಮುಂತಾದ ಕಥಾಸಂಗ್ರಹಗಳು, 'ಅನುಶೀಲನ', 'ರಂಗಾಯಣ', 'ಪರಿಭಾವನ', 'ವಿವೇಚನ' ಮುಂತಾದ ವಿಮರ್ಶಾಕೃತಿಗಳು, 'ಆಷಾಢದ ಒಂದು ದಿನ', 'ಆಧೇಅಧೂರೇ', 'ಅಂಧಯುಗ', 'ಮುದ್ರಾರಾಕ್ಷಸ', 'ಶಸ್ತ್ರಸಂತಾನ', 'ಕೋರ್ಟ್ ಮಾರ್ಷಲ್', 'ಚೋರ ಚರಣದಾಸ', 'ಆಕಾಶಭೇರಿ', 'ಕಾಲ ಕೆಳಗಿನ ನೆಲ'** ಮುಂತಾದ ಅನುವಾದ ನಾಟಕಗಳು ಮುಖ್ಯವಾದವುಗಳು.

೧೯೯೬ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ **'ಗೌರವ ಫೆಲೋಶಿಪ್',** ೧೯೯೮ರಲ್ಲಿ **ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ** ಇತ್ಯಾದಿ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯ ಮತ್ತು ಕನ್ನಡ ಸಲಹಾ ಮಂಡಳಿಯ ಸಂಚಾಲಕರಾಗಿದ್ದರು.

ಪ್ರಸ್ತುತ **'ಗಂಗವ್ವ ತಾಯಿ'** ಕವನವನ್ನು ಇವರ **'ನಿನ್ನ ಮರೆಯೂ ಮಾತು'** ಎಂಬ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

©KTBS Not to be republished

## ಪದಗಳ ಅರ್ಥ

ದುಸ್ತರ– ಕಠಿಣ, ಕಷ್ಟಸಾಧ್ಯ. ಕಣ– ಅತ್ಯಂತ ಸೂಕ್ಷ್ಮವಾದ ಅಂಶ. ಪ್ರಾಣ– ಜೀವ, ಜೀವ ಉಳಿಯಲು ಕಾರಣವಾದ ಒಂದು ವಾಯು. ನಭ–ಆಕಾಶ, ಗಗನ, ಅಂಬರ. ಹೊಳೆ– ನದಿ, ಮಿನುಗು. ಕುಣಿ–ಕುಳಿ, ಹೊಂಡ, ನರ್ತಿಸು. ಕೊಳೆ– ಕಲ್ಮಷ, ಹೊಲಸು. ಚಿಮ್ಮು–ಹಾರು, ಜಿಗಿ, ನೆಗೆ. ತೊಳೆ–ನೀರಿನಿಂದ ಸ್ವಚ್ಛಗೊಳಿಸು. ಮಾಯ–ಇದ್ದಕ್ಕಿದ್ದಂತೆ ಕಾಣೆಯಾಗುವುದು, ಮರೆಯಾಗಿರುವುದು. ಹರಿ–ಓಡು, ಪ್ರವಹಿಸು, ಹೋಗು. ತುಣುಕು– ಚೂರು, ತುಂಡು.

**ವಿವರ ತಿಳಿಯಿರಿ:**

**ಗಂಗವ್ವ–** ಭಾರತದ ನೆಲದಲ್ಲಿ ಹರಿಯುವ ನೀರನ್ನು ಗಂಗೆ ಅಥವಾ ಗಂಗವ್ವ ಎಂದು ಕರೆಯುವರು. ಉತ್ತರ ಭಾರತದ ಪ್ರಮುಖ ನದಿಯೊಂದಕ್ಕೆ 'ಗಂಗಾ ನದಿ' ಎಂದು ಹೆಸರಿದೆ.

**ಪದಪದರಾಗ–** ಪ್ರತಿ ಹಂತ ಹಂತಗಳಲ್ಲಿಯೂ, ಪೊರೆಪೊರೆಗಳಲ್ಲಿಯೂ.

©KTBS Not to be republished

## ಅಭ್ಯಾಸಗಳು

**ಅ. ಬಿಟ್ಟಸ್ಥಳವನ್ನು ಕೆಳಗೆ ನೀಡಲಾದ ಸೂಕ್ತ ಪದಗಳಿಂದ ಭರ್ತಿಮಾಡಿರಿ.**

೧. ಬಾರವ್ವ ತಾಯಿ __________ ತಾಯಿ.
೨. ಹೊಳೆಯವ್ವ ತಾಯಿ __________ ತಾಯಿ.
೩. ಮೈಮನಸ ಹೊಲಸೆಲ್ಲ __________ ತಾಯಿ.
೪. ನೀರವ್ವ ಗಂಗವ್ವ __________ ಬಾರವ್ವ.
೫. ಒಣಗೀದ ನೆಲದಾಗ __________ ಹೊಳೆಯವ್ವ.
(ನೀರವ್ವ, ಹಸುರಾಗಿ, ಗಂಗವ್ವ, ತೊಳೆಯವ್ವ, ಮಳಿಯಾಗಿ, ಸುರಿಯುತ್ತ)

**ಆ. ಸಮಾನಾರ್ಥಕ ಪದಗಳನ್ನು ಬರೆಯಿರಿ.**

೧. ನೀರು  ೨. ನಭ  ೩. ಕುಣಿ  ೪. ತಾಯಿ

**ಇ. ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ನೀರು ಎಲ್ಲೆಲ್ಲಿ ತುಂಬಬೇಕು ಎಂದು ಕವಿ ಹೇಳುತ್ತಾರೆ?
೨. ನೀರು ಹೇಗೆಲ್ಲ ಹರಿದು ಬರಬೇಕೆಂದು ಕವಿ ವಿನಂತಿಸಿಕೊಂಡಿದ್ದಾರೆ?
೩. ಒಣಗಿದ ನೆಲದಲ್ಲಿ ನೀರು ಹೇಗೆ ಹೊಳೆಯಬೇಕು ಎಂದು ಕವಿ ಹೇಳುತ್ತಾರೆ?
೪. ಈ ಕವನವನ್ನು ಬರೆದವರು ಯಾರು?

**ಈ. ಕೊಟ್ಟಿರುವ ಮಾತನ್ನು ಯಾರು ಯಾರಿಗೆ ಯಾವಾಗ ಹೇಳಿದರು?**

೧. ನೆಲದ ಕಣಕಣದಾಗ ಮನದ ಪದಪದರಾಗ.

೨. ಹರಿಯುತ್ತ ಸುರಿಯುತ್ತ ಧೋಧೋ ಬಾರವ್ವ.

೩. ಒಣಗೀದ ನೆಲದಾಗ ಹಸಿರುಸಿರು ಉಳಿಸಾಕ.

೪. ಜೀವದಾ ತುಣಕಾಗಿ ಮೈಮನಸ ಹೊಲಸೆಲ್ಲ.

**ಉ. ಎರಡು–ಮೂರು ವಾಕ್ಯದಲ್ಲಿ ಉತ್ತರಿಸಿರಿ.**

೧. ಗಂಗವ್ವ ಇದ್ದರೆ ಎಲ್ಲೆಲ್ಲಿ, ಏನೇನು ಆಗುವುದೆಂದು ಕವಿ ಹೇಳಿದ್ದಾರೆ?

೨. ನೀರು ಯಾವ ಯಾವ ಕೆಲಸಕ್ಕೆ ಬೇಕು ಎಂದು ಕವಿ ಹೇಳಿದ್ದಾರೆ?

**ಊ. ಕೊಟ್ಟಿರುವ ಪದ್ಯದಲ್ಲಿ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.**

ಬೆಳ್ಳಾನ ಎರಡೆತ್ತು ಬೆಳ್ಳಿಯ ಬಾರುಕೋಲು
ಹಳ್ಳಾದ ಮಾಗಿ ಹೊಡೆದಾವು । ಎತ್ತಿನ
ತೆಳ್ಳಾನ ಹೊಟ್ಟೆ ಹಸಿದಾವು.

**ಋ. ಪ್ರಾಸಪದವನ್ನು ಹೊಂದಿದ ಒಂದು ಪದ್ಯವನ್ನು ಸಂಗ್ರಹಿಸಿರಿ. ಅದು ಯಾವ ಪ್ರಾಸದಲ್ಲಿದೆ ಎಂಬುದನ್ನು ಗುರುತಿಸಿರಿ.**

**ಎ. ನೀರಿನ ಉಪಯೋಗವನ್ನು ಸಂಗ್ರಹ ರೂಪದಲ್ಲಿ ತಿಳಿಸಿರಿ.**

©KTBS Not to be republished

**ಭಾಷಾ ಆಟಗಳು**

**ಅ.** ಮಕ್ಕಳು ವೃತ್ತಾಕಾರವಾಗಿ ನಿಲ್ಲಲಿ. ಅದರಲ್ಲಿ ಒಬ್ಬರಿಗೆ ಒಂದು ವಿಷಯವನ್ನು ಸ್ಪಷ್ಟವಾದ ವಾಕ್ಯದಲ್ಲಿ ಇತರರಿಗೆ ಕೇಳದಂತೆ ಹೇಳಿರಿ. ಆ ವಿದ್ಯಾರ್ಥಿಯು ಅದೇ ವಾಕ್ಯವನ್ನು ಪಕ್ಕದಲ್ಲಿರುವವರಿಗೆ ಗುಟ್ಟಾಗಿ ಹೇಳಲಿ. ಹಾಗೆಯೇ ಆ ವಾಕ್ಯವನ್ನು ಒಬ್ಬರಿಂದ ಒಬ್ಬರಿಗೆ ಹೇಳುತ್ತ ಸಾಗಲಿ. ಕೊನೆಯಲ್ಲಿರುವ ವಿದ್ಯಾರ್ಥಿಯು ತಾನು ಕೇಳಿಸಿಕೊಂಡದ್ದನ್ನು ಜೋರಾಗಿ ಎಲ್ಲರಿಗೂ ಕೇಳುವಂತೆ ಹೇಳಲಿ. ಮೊದಲು ಹೇಳಿದ ವಾಕ್ಯವನ್ನು ಕೊನೆಯ ವಿದ್ಯಾರ್ಥಿ ಹೇಳಿದ ವಾಕ್ಯವನ್ನು ಹೋಲಿಸಿರಿ. ಹೀಗೆಯೇ ಬೇರೆ ಬೇರೆ ವಾಕ್ಯಗಳನ್ನು ಹೇಳುತ್ತ ಆಟ ಆಡಿರಿ.

**ಆ.** 'ನೀರು ಅತ್ಯಮೂಲ್ಯ ಸಂಪನ್ಮೂಲ' ಈ ವಿಷಯದ ಕುರಿತು ಚರ್ಚಾಸ್ಪರ್ಧೆ ಏರ್ಪಡಿಸಿರಿ.

**ಇ.** ಜಲಸಂರಕ್ಷಣೆ, ನೀರಿನ ಮೂಲಗಳ ಸ್ವಚ್ಛತೆ ಕುರಿತು ಭಾಷಣ ಮಾಡಿರಿ.

## ಯೋಜನೆ

- ಕರ್ನಾಟಕದಲ್ಲಿ ಹರಿಯುವ ನದಿಗಳ ಹೆಸರನ್ನು ಪಟ್ಟಿಮಾಡಿರಿ.
- ದ.ರಾ.ಬೇಂದ್ರೆಯವರು ಬರೆದ 'ಇಳಿದು ಬಾ ತಾಯಿ' ಕವನವನ್ನು ಸಂಗ್ರಹಿಸಿ ಹಾಡಿರಿ.

## ಪೂರಕ ಓದು

- ಜನಪದ ಕಾವ್ಯದಲ್ಲಿ ಬರುವ ಮಳೆಗೆ ಸಂಬಂಧಿಸಿದ ಪದ್ಯಗಳನ್ನು ಸಂಗ್ರಹಿಸಿ ಓದಿರಿ.
- ಮಳೆಯಿಂದ ಭೂಮಿಯ ಮೇಲೆ ಆಗುವ ಪರಿಣಾಮಗಳನ್ನು ತಿಳಿಯಿರಿ.

## ಶುಭ ನುಡಿ

- ಗಾಳಿ, ನೀರಿಗೆ ಜಾತಿ–ಮತವಿಲ್ಲ.
- ಜಲವು ಸಕಲ ಜೀವರಾಶಿಗಳ ರಕ್ಷಕ.
- ನದಿಗಳು ನಾಗರಿಕತೆಯ ತೊಟ್ಟಿಲು.

©KTBS Not to be republished

## ವ್ಯಾಕರಣ ಮಾಹಿತಿ

### ದೇಶಿಯ, ಅನ್ಯದೇಶಿಯ ಪದಗಳು

**ಕೆಳಗೆ ಕೊಟ್ಟಿರುವ ಪದಗಳನ್ನು ಗಮನಿಸಿರಿ.**

**ಕದ, ಅಂಗಳ, ಚೆನ್ನಾಗಿ, ಮೂಡಣ, ಮರ–ಈ ಪದಗಳೆಲ್ಲ ಅಚ್ಚಗನ್ನಡ ಪದಗಳು. ಇವುಗಳು ದೇಶೀ ಪದಗಳು.**

**ಭೂಮಿ, ಮಿತ್ರ, ಕಾಗದ, ಮೇಜು, ರಸ್ತೆ– ಈ ಪದಗಳೆಲ್ಲ ಅಚ್ಚಗನ್ನಡ ಪದಗಳಲ್ಲ. ಇವುಗಳು ಅನ್ಯದೇಶೀಯ ಪದಗಳು.**

ನಾವು ಕನ್ನಡದಲ್ಲಿ ಬಳಸುವ ಅಚ್ಚಗನ್ನಡ ಪದಗಳು ದೇಶೀಪದಗಳು. ಇವು ಮೂಲ ಕನ್ನಡ ಭಾಷೆಯ ಪದಗಳಾಗಿವೆ. ನಾವು ಬಳಸುವ ಎಲ್ಲಾ ಪದಗಳು ಮೂಲ ಕನ್ನಡ ಪದಗಳಲ್ಲ. ಕೆಲವು ಪದಗಳು ಬೇರೆ ಭಾಷೆಯಿಂದ ಬಂದಿವೆ. ಇವು ಕನ್ನಡಕ್ಕೆ ಬಂದು ಕನ್ನಡ ಪ್ರತ್ಯಯಗಳನ್ನು ಹೊಂದಿ ಕನ್ನಡ ಶಬ್ದಗಳೇ ಆಗಿವೆ. ಇವುಗಳೆಲ್ಲ ಅನ್ಯದೇಶೀಯ ಪದಗಳು.

ಕನ್ನಡಕ್ಕೆ ಸಂಸ್ಕೃತ, ಅರೇಬಿಕ್, ಪರ್ಷಿಯನ್, ಪೋರ್ಚುಗೀಸ್, ಇಂಗ್ಲಿಷ್ ಮೊದಲಾದ ಭಾಷೆಗಳಿಂದ ಸಾವಿರಾರು ಪದಗಳು ಬಂದಿವೆ. ಇದರಿಂದ ಕನ್ನಡ ಭಾಷೆಯ ಸಂಪತ್ತು ಹೆಚ್ಚಿದೆ.

ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ.

**ಅ) ದೇಶೀ ಪದಗಳು–** ಬೆಲ್ಲ, ನೀರು, ಹುಲ್ಲು, ಹೊಲ, ಆಟ ಮೊದಲಾದವು.

**ಆ) ಅನ್ಯದೇಶೀಯ ಪದಗಳು–**

- ಸಂಸ್ಕೃತ ಭಾಷೆಯಿಂದ ಬಂದ ಪದಗಳು :– ಸಂಗಮ, ಕುಮಾರ, ಅರಣ್ಯ, ಸಹೋದರಿ ಮೊದಲಾದವು.
- ಇಂಗ್ಲಿಷ್ ಭಾಷೆಯಿಂದ ಬಂದ ಪದಗಳು :– ಲೈಟು, ಬ್ಯಾಂಕು, ಪೆನ್ನು, ಬುಕ್ಕು, ಸ್ಕೂಲು, ಬಸ್ಸು ಮೊದಲಾದವು.
- ಪೋರ್ಚುಗೀಸ್ ಭಾಷೆಯಿಂದ ಬಂದ ಪದಗಳು :– ಅಲಮಾರು, ಪಾದ್ರಿ, ಸಾಬೂನು, ಬಟಾಟೆ, ಅನಾನಸು ಮೊದಲಾದವು.
- ಪರ್ಷಿಯನ್ ಭಾಷೆಯಿಂದ ಬಂದ ಪದಗಳು :– ದಿವಾನ, ಸರದಾರ, ದವಲತ್ತು, ಸರಕಾರ, ತಹಸೀಲ್ದಾರ ಮೊದಲಾದವು.

©KTBS Not to be republished

* * * * *

# ೧೫. ಹೃದಯ ವಚನಗಳು


H5E2Z2

– ಅಮೃತ ಸೋಮೇಶ್ವರ

**ಪ್ರವೇಶ :** ಹೃದಯವನ್ನು ಯಾವ ರೀತಿಯಲ್ಲಿ ತರ್ಕಕ್ಕೆ ಒಡ್ಡಿದರೂ ಪೂರ್ತಿಯಾಗಿ ಅರ್ಥೈಸಿಕೊಳ್ಳುವುದು ಕಷ್ಟ. ಒಬ್ಬೊಬ್ಬರು ಒಂದೊಂದು ಬಗೆಯಾಗಿ ಅದನ್ನು ಅರ್ಥೈಸಿಕೊಳ್ಳಲು ಪ್ರಯತ್ನಪಟ್ಟಿದ್ದಾರೆ. ಹೃದಯವಂತಿಕೆ ಕೇವಲ ಮಾನವರಲ್ಲಿಯೇ ಅಲ್ಲ, ಪ್ರಾಣಿಗಳಲ್ಲಿ ಕೂಡ ಇರುತ್ತವೆ. ಹೃದಯವನ್ನು ಅರ್ಥೈಸಿಕೊಳ್ಳುವ ಪುಟ್ಟ ಪ್ರಯತ್ನವೊಂದು ಈ ಆಧುನಿಕ ವಚನಗಳಲ್ಲಿವೆ.

ಒಂಬತ್ತು ತಡವೆ ಉಪಕರಿಸಿ ಒಮ್ಮೆ ತಪ್ಪಲು, ಮೊದಲಿನೆಲ್ಲವ ಮರೆವರಯ್ಯ
ಹತ್ತು ಬಾರಿ ಮೆಚ್ಚಿ ಮತ್ತೊಂದು ಬಾರಿ ಟೀಕಿಸಲು, ಕೆರಳಿ ಜರೆವರಯ್ಯ
ಸ್ತುತಿಗೆ ತಲೆಯೊಲೆಯಿಸಿ ನಲಿದೊಲಿವುದಯ್ಯ ಲೋಕ
ಓಲೈಕೆಯ ಚಾಳಿಯ ದೂರೀಕರಿಸಯ್ಯ ಸ್ತೋತ್ರಾತೀತ ಹೃದಯೇಶ ಸೋಮೇಶಾ॥

©KTBS Not to be republished



ನೆಗೆವ ಹುಲ್ಲೆಯಾಗುವುದೊಮ್ಮೆ ಮೊರೆವ ಹುಲಿಯಾಗುವುದೊಮ್ಮೆ
ಕೆನೆದು ಕುಪ್ಪಳಿಸುವ ಕುದುರೆಯಾಗುವುದೊಮ್ಮೆ
ಗಂಭೀರಗತಿಯ ಗಜವಾಗುವುದೊಮ್ಮೆ

ಗುಟುರುವ ಗೂಳಿಯಾಗುವುದೊಮ್ಮೆ ಚಪಲತೆಯ ಕೋತಿಯಾಗುವುದೊಮ್ಮೆ
ನಂಜಿನ ನಾಗವಾಗುವುದೊಮ್ಮೆ ನೀರೊಳಗೆ ನಿರಾಳವಿಹ ಮೀನಾಗುವುದೊಮ್ಮೆ
ಹೃದಯಕೆನಿತು ರೂಪಗಳೊ ಈ ಹದನವ ನೀನೆ ಬಲ್ಲೆ
ಬಹುರೂಪಿ ಹೃದಯೇಶ ಸೋಮೇಶಾ॥

ಎನಿತು ಭಾಷೆಗಳ ಕಲಿತಡೇನು ಹೃದಯದ ಭಾಷೆ ಕಲಿಯದನ್ನಕ?
ಎನಿತು ನುಡಿ ಸಡಗರ ತೋರ್ದಡೇನು ಎದೆಯ ಮಿಡಿತವರಿಯದನ್ನಕ?
ಎನಿತು ಶೋಧನೆಗೈದಡೇನು ಹೃದಯ ಶೋಧನೆಗೈಯದನ್ನಕ?
ಎನಿತು ಸಾಧನೆಗೈದಡೇನು ಹೃದಯದ ಬೆಸುಗೆ ಸಾಧಿತವಾಗದನ್ನಕ?
ಇವೆಲ್ಲಕ್ಕೂ ಜೀವಭಾವದಾತ ನೀನೆ ಕಾಣ ಹೃದಯೇಶ ಸೋಮೇಶಾ॥

**ಕ್ಷೇತ್ರ : ಓದುವುದು**
**ಸಾಮರ್ಥ್ಯ : ಓದಿದ ವಿಷಯಗಳ ಬಗ್ಗೆ ಆಲೋಚಿಸಿ ತಾರ್ಕಿಕವಾಗಿ ತೀರ್ಮಾನಿಸುವುದು**

©KTBS Not to be republished

**ಕವಿ ಕೃತಿ ಪರಿಚಯ :**



**ಡಾ. ಅಮೃತ ಸೋಮೇಶ್ವರ** ಅವರು **ದಕ್ಷಿಣ ಕನ್ನಡ ಜಿಲ್ಲೆಯ ಅಡ್ಕದಲ್ಲಿ ೨೭-೦೯-೧೯೩೫**ರಲ್ಲಿ ಜನಿಸಿದರು. ಕನ್ನಡ ಮತ್ತು ತುಳು ಭಾಷೆಯ ಬಗೆಗೆ ಆಳವಾದ ಅಧ್ಯಯನ ಮಾಡಿ ಅರವತ್ತಕ್ಕೂ ಮಿಕ್ಕಿ ಕೃತಿಗಳನ್ನು ರಚಿಸಿದ್ದಾರೆ. ಸಣ್ಣಕಥೆ, ಕಾದಂಬರಿ, ವಿಮರ್ಶೆ, ನಾಟಕಗಳು ಇವರ **ಆಡುಂಬೊಲ. ಉಪ್ಪುಗಾಳಿ, ಹೃದಯ ವಚನಗಳು, ತಂಬಿಲ, ರಂಗಿತ** ಇತ್ಯಾದಿ ಕವನ ಸಂಕಲನಗಳನ್ನು ರಚಿಸಿದ್ದಾರೆ. ಪ್ರಸಿದ್ಧ ಜಾನಪದ ವಿದ್ವಾಂಸರಾದ ಶ್ರೀಯುತರು ಫಿನ್‌ಲ್ಯಾಂಡ್ ಮಹಾಕಾವ್ಯ ಕಲೆವಾಲವನ್ನು ತುಳುವಿಗೆ ಅನುವಾದಿಸಿದ್ದಾರೆ. **ಎಲೆಗಳು, ರುದ್ರಶಿಲೆ ಸಾಕ್ಷಿ, ವನಮಾಲೆ, ಭಗವತಿ ಆರಾಧನೆ, ಮೋಯ ಮಲಯಾಳಿ** ನಿಘಂಟು ಮುಂತಾದವು ಅವರ ಮಹತ್ತರ ಕೃತಿಗಳು. ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. **ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ತುಳು ಸಾಹಿತ್ಯ ಅಕಾಡೆಮಿಗಳ ಗೌರವ ಪ್ರಶಸ್ತಿ**ಗಳಿಗೆ ಭಾಜನರಾದ ಶ್ರೀಯುತರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯೂ ಲಭಿಸಿದೆ. ಪ್ರಸ್ತುತ ವಚನವನ್ನು ಅಮೃತಸೋಮೇಶ್ವರ ಅವರ **'ಹೃದಯ ವಚನಗಳು'** ಎಂಬ ಸಂಕಲನದಿಂದ ಆರಿಸಲಾಗಿದೆ.

## ಪದಗಳ ಅರ್ಥ

ತಡವೆ–ಬಾರಿ, ಸಲ. ಉಪಕರಿಸು–ಉಪಕಾರ ಮಾಡು, ನೆರವು ನೀಡು. ಜರೆ– ನಿಂದಿಸು, ಬಯ್ಯು. ಸ್ತುತಿ–ಹೊಗಳಿಕೆ. ಓಲೈಸು–ಮೆಚ್ಚಿಸು. ಚಾಳಿ–ನಡವಳಿಕೆ, ವರ್ತನೆ. ಹುಲ್ಲೆ–ಜಿಂಕೆ, ಚಿಗರೆ. ಮೊರೆವ–ಗರ್ಜಿಸುವ, ಕುಪ್ಪಳಿಸು–ಹಾರು, ಜಿಗಿಯು. ಗಜ–ಆನೆ. ಗುಟುರು–ಹೂಂಕರಿಸು, ಜೋರಾಗಿ ಧ್ವನಿ ಮಾಡು. ನಂಜು–ವಿಷ. ನಿರಾಳ–ಶಾಂತಿ, ನೆಮ್ಮದಿ. ಹದನ–ರೀತಿ. ಎನಿತು–ಎಷ್ಟು. ಮಿಡಿತ–ಬಡಿತ, ಸ್ಪಂದನ. ಬೆಸುಗೆ–ಹೊಂದಿಕೆ, ಜೋಡಣೆ. ಸಾಧಿತ–ಸಾಧಿಸಿದ, ಸಿದ್ಧಿಯನ್ನು ಪಡೆದ. ದಾತ–ಒಡೆಯ, ಸ್ವಾಮಿ.

**ವಿವರ ತಿಳಿಯಿರಿ:**

- **ಸ್ತೋತ್ರಾತೀತ** :– ಹೊಗಳಿಕೆಗೆ ನಿಲುಕದ ಇಂದ್ರಿಯಗಳ ಹಿಡಿತಕ್ಕೆ ಸಿಗದ.
- **ಬಹುರೂಪಿ** :– ಹಲವು ರೂಪಗಳಿಂದ ಕೂಡಿ ಕಾಣಿಸಿಕೊಳ್ಳುವಾತ.
- **ವಚನ** :– ಹನ್ನೆರಡನೆಯ ಶತಮಾನದ ಶಿವಶರಣರು ರಚಿಸಿದ ಸಾಹಿತ್ಯ ಪ್ರಕಾರ; ಆಧುನಿಕ ಸಂದರ್ಭದಲ್ಲೂ ಅಂತಹ ವಚನಗಳು ರಚನೆಯಾಗುತ್ತಿವೆ.

## ಅಭ್ಯಾಸಗಳು

**ಅ. ಪದಗಳ ಅರ್ಥ ಬರೆಯಿರಿ.**

೧. ಉಪಕರಿಸು ೨. ಮೊರೆವ ೩. ನಿರಾಳ ೪. ಸಾಧಿತ ೫. ಬಹುರೂಪಿ

**ಆ. ಕೊಟ್ಟಿರುವ ವಚನವನ್ನು ಪೂರ್ಣಗೊಳಿಸಿರಿ:**

೧. ಎನಿತು ಭಾಷೆಗಳ ______________________

______________________ಮಿಡಿತವರಿಯದನ್ನಕ?

______________________

______________________

______________________ಹೃದಯೇಶ ಸೋಮೇಶಾ.

**ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಯಾವ ಚಾಳಿಯನ್ನು ದೂರವಿಡಿ ಎಂದು ಅಮೃತ ಸೋಮೇಶ್ವರರು ಹೇಳುತ್ತಾರೆ?

೨. ಹೃದಯದ ಬೆಸುಗೆ ಸಾಧಿತವಾಗುವುದು ಯಾವಾಗ?

೩. ಅಂಕಿತನಾಮವು ವಚನದ ಯಾವ ಭಾಗದಲ್ಲಿ ಬರುತ್ತದೆ?

೪. ನಾವು ಮೊದಲು ಯಾವ ಭಾಷೆಯನ್ನು ಕಲಿಯಬೇಕು?

೫. ಜನ ಕೆರಳಿ ಜರೆಯುವುದು ಯಾವಾಗ?

**ಈ. ಈ ವಚನವನ್ನು ಕಂಠಪಾಠ ಮಾಡಿರಿ.**

ಒಂಬತ್ತು ತಡವೆ ..........................................................................

...............................................ಹೃದಯೇಶ ಸೋಮೇಶಾ॥

©KTBS Not to be republished

**ಉ. ಕೆಳಗಿನ ಚಿಹ್ನೆಗಳನ್ನು ಗಮನಿಸಿ ಅದರ ಹೆಸರು ಬರೆಯಿರಿ.**

೧. ;  ೨. ‘......’  ೩. (.......)  ೪. “.......”  ೫. !

**ಭಾಷಾ ಆಟ.**

**ಅ. ಕೆಳಗಿನ ಅಕ್ಷರವೃಂದದಲ್ಲಿ ಹತ್ತು ಜನ ವಚನಕಾರರು ಅಡಗಿಕೊಂಡಿದ್ದಾರೆ ನಿಮಗೆ ಸಾಧ್ಯವಾದಷ್ಟು ಹೆಸರನ್ನು ಹುಡುಕಿ ಬರೆಯಿರಿ.**

| | | | | | | | |
|---|---|---|---|---|---|---|---|
| ಬ | ಸಿ | ದ್ದ | ಯ್ಯ | ಮಾ | ಕ | ಕ್ಕ | ಯ್ಯ |
| ಅ | ಸ | ಹಾ | ಪು | ದ | ಚೆ | ನ್ನ | ಯ್ಯ |
| ಕ್ಕ | ವ | ಣ್ಣ | ರಾ | ಣಿ | ಕ | ಸಿ | ಜ |
| ಮ | ಹಾ | ಮ | ಡಿ | ವಾ | ಳ | ದ್ಧ | ರ |
| ದಾ | ದೇ | ವಿ | ಪ್ರ | ಭು | ಮಾ | ರಾ | ಮ |
| ಸಿ | ಅ | ಲ್ಲ | ಮ | ಕ | ಚ | ಯ್ಯ | ಕ |
| ಮ | ಯ್ಯ | ಚ | ನ್ನ | ಬ | ಸ | ವ | ಣ್ಣ |

©KTBS Not to be republished

## ಯೋಜನೆ

- ಐದು ವಚನಗಳನ್ನು ಸಂಗ್ರಹಿಸಿರಿ. ಅವುಗಳ ಸಾರಾಂಶವನ್ನು ಬರೆಯಿರಿ.

## ಪೂರಕ ಓದು

- ಬಸವಣ್ಣ ಮತ್ತು ಅಕ್ಕಮಹಾದೇವಿಯವರ ವಚನಗಳನ್ನು ಓದಿರಿ.
- ಆಧುನಿಕ ವಚನಗಳನ್ನು ಸಂಗ್ರಹಿಸಿ ಓದಿರಿ.
- ಗ್ರಂಥಾಲಯದಲ್ಲಿರುವ ವಚನ ಸಾಹಿತ್ಯ ಕೃತಿಗಳನ್ನು ಓದಿರಿ.

## ಶುಭ ನುಡಿ

- ಹಿರಿಯರಿಂದ ಬಂದ ಅನುಭವದ ನುಡಿಗಳು ಯುವಜನಾಂಗಕ್ಕೆ ಅಮೂಲ್ಯ ಸೊತ್ತು.
- ಒಂದು ಹೃದಯವನ್ನು ಅರ್ಥಮಾಡಿಕೊಳ್ಳುವುದು ಇನ್ನೊಂದು ಹೃದಯದಿಂದ ಮಾತ್ರ ಸಾಧ್ಯ.
- ಪರಿಶುದ್ಧ ಹೃದಯವು ಬದುಕನ್ನು ರೂಪಿಸುತ್ತದೆ.

* * * * *

# ೧೬. ಕಿತ್ತೂರ ಕೇಸರಿ

X5C9M9

– ಪ.ಗು. ಸಿದ್ಧಾಪುರ

**ಪ್ರವೇಶ :** ನಮ್ಮ ದೇಶ ಪರಕೀಯರ ಆಡಳಿತದಲ್ಲಿದ್ದಾಗ, ನಮ್ಮ ನೆಲದ ಅನೇಕ ದೇಶಭಕ್ತರು, ನಾಡಭಕ್ತರು ಅವರ ವಿರುದ್ಧ ಹೋರಾಡಿದ್ದಾರೆ. ನಮ್ಮ ನಾಡನ್ನು ಸ್ವತಂತ್ರಗೊಳಿಸುವ ಬಗ್ಗೆ ತಮ್ಮದೇ ಆದ ಕಾರ್ಯತಂತ್ರವನ್ನು ರೂಪಿಸಿದ್ದಾರೆ. ಕೆಲವೊಮ್ಮೆ ಜಯಗಳಿಸಿದ್ದಾರೆ. ಕೆಲವೊಮ್ಮೆ ಸೋತಿದ್ದಾರೆ. ಅವರ ಹೋರಾಟದ ಹಾದಿಯನ್ನು ಮಕ್ಕಳು ಅರ್ಥ ಮಾಡಿಕೊಳ್ಳಬೇಕೆಂಬುದು ಇಲ್ಲಿನ ಆಶಯ.

ಕಟ್ಟುಕತೆ ಇದು ಅಲ್ಲ ದಿಟ್ಟ ಹೆಜ್ಜೆಯನಿಟ್ಟ
ವೀರವನಿತೆಯ ಚರಿತೆ ನೀವ್ ಕೇಳಿರಿಂದು
ಅನ್ನಕ್ಕೆ ಬಂದಿರುವ ಕುನ್ನಿಗಳ ಮನ್ನಿಸದೆ
ಸಮರ ಸಾರಿದ ರಾಣಿ ಜನಜನಿತವಿಂದು ॥೧॥

© KTBS Not to be republished




ಮಲ್ಲಸಜ್ಜನ ಮನಕೆ ನೋವಾಗದಿರಬಹುದೆ?
ಹೋದರೀ ಸಿರಿನಾಡು ಪರಕೀಯರಾ ವಶಕೆ!
ಮಂಚಕ್ಕೆ ಒರಗಿರುವ ಕಿರಿಯರಸಿ ಚೆನ್ನಮ್ಮ
ಕನವರಿಸಿ ಕಟಕಟನೆ ಹಲ್ ಕಡಿದಳಾಕೆ ॥೨॥

ತುತ್ತೂರಿ ಊದಿದಳು ಕಿತ್ತೂರು ಕಿರಿರಾಣಿ
ಬನ್ನಿರೈ ನನ್ನವರೆ ತಾಯ್ ಸೇವೆಗೆಂದು
ನಮ್ಮ ಅನ್ನವನುಂಡು ಕೊಬ್ಬಿರುವ ಕುನ್ನಿಗಳ
ಶಿರಮಾಲೆ ಕೊರಳೊಳಗೆ ಧರಿಸೋಣವೆಂದು ॥೩॥

ಗುಡುಗಿದಳು ಸಿಡಿಲಂತೆ ಸಿಂಹದಾ ಧ್ವನಿಯಂತೆ
ಏಳಿರೈ ಕೆಚ್ಚೆದೆಯ ಕಲಿಗಳೇ ನೀವು!
ಕರಿನೆಲದ ಗರಿಮೆಯನು ತೋರಿಸಲು ಬಿಳಿಯರಿಗೆ
ಛಲ ತೊಟ್ಟು ಹುಲಿಯಂತೆ ನುಗ್ಗೋಣ ನಾವು ॥೪॥

ಅಮಟೂರು ಬಾಳಪ್ಪ, ಸಂಗೊಳ್ಳಿ ರಾಯಣ್ಣ
ಸಿಡಿಲಿನಾ ಕಿಡಿಯಂತೆ ಸಿಡಿದೆದ್ದರೊಡನೆ
ನಾಡ ರಕ್ಷಣೆಗಾಗಿ ಪ್ರಾಣವನು ಪಣಕಿಟ್ಟು
ರಾಜಗುರು ಕೃಪೆ ಪಡೆದು ಕಟ್ಟಿದರು ಸೇನೆ ॥೫॥


©KTBS Not to be republished

ಆಕಾಶದೆತ್ತರಕೆ ಜಯಘೋಷ ಮೊಳಗಿಸುತ
ನುಗ್ಗಿದಳು ಚೆನ್ನಮ್ಮ ರಣಚಂಡಿಯಾಗಿ
ವೀರ ಯೋಧರ ಎದೆಗೆ ವಜ್ರಕವಚವ ಬಿಗಿದು
ಬೀಸುತ್ತಿದ್ದಳು ಖಡ್ಗ ತಾ ಮುಂದೆ ಸಾಗಿ ॥೬॥

ತನ್ನಾತ್ಮ ಛಲದಿಂದ ಧರಿಸಿದಳು ಜಯಮಾಲೆ
ಸೋಲಾಯ್ತು ಮರುಕ್ಷಣವೆ ದುರ್ಮತಿಯರಿಂದ
ಮಮ್ಮಲನೆ ಮರುಗಿದಳು ಮನನೊಂದು ಕೊರಗಿದಳು
ತಾಯ್ ನೆಲದ ರಕ್ಷಣೆಯು ಕೈ ಮೀರಿತೆಂದು! ॥೭॥



ಕಿತ್ತೂರ ಸಾಮ್ರಾಜ್ಯ ಕಟ್ಟುವೆನು ಇನ್ನೊಮ್ಮೆ
ದುಷ್ಟ ಅರಿಗಳ ಮೆಟ್ಟಿ ಈ ಮಾತು ಸತ್ಯ
ಸೆರೆಮನೆಯ ಸೇರಿದರು ಹಿಂಜರಿಯಲಿಲ್ಲೆನಿತು
ಕಲಿಗಳಿಗೆ ಕಿವಿಮಾತು ಹೇಳಿದಳು ನಿತ್ಯ ॥೮॥

ನಿನ್ನ ಋಣ ತೀರಿಸಲು ನನಗಾಗಲಿಲ್ಲಮ್ಮ!
ಈ ಒಂದೆ ಜನ್ಮದಲಿ ಕರುನಾಡ ಒಡತಿ !
'ಮರುಜನ್ಮ ನೀಡೆನಗೆ ಹೆಣ್ಣಾಗಿ ಈ ನೆಲದಿ'
ಕಣ್ಮುಚ್ಚಿ ಬೇಡಿದಳು ಕಿತ್ತೂರ ಕೇಸರಿ! ॥೯॥

**ಕ್ಷೇತ್ರ :** **ಆಲಿಸುವುದು**
**ಸಾಮರ್ಥ್ಯ :** **ವಿಷಯವನ್ನು ಆಲಿಸಿದ ಬಳಿಕ ಏಕೆ? ಹೇಗೆ? ಹಾಗಾದರೆ, ಹಾಗಾಗದಿದ್ದರೆ ಪ್ರಶ್ನೆಗಳಿಗೆ ಉತ್ತರಿಸುವುದು**

**ಕವಿ ಕೃತಿ ಪರಿಚಯ :**



**ಪರಗೊಂಡ ಗುರುಪಾದಪ್ಪ ಸಿದ್ದಾಪುರ** ಇವರ ಕಾವ್ಯನಾಮ **ಪ.ಗು.ಸಿದ್ದಾಪುರ.** ಇವರು **೦೧-೦೬-೧೯೫೮ರಲ್ಲಿ ವಿಜಯಪುರ (ಬಿಜಾಪುರ) ಜಿಲ್ಲೆಯ ಬಸವನಬಾಗೇವಾಡಿಯ ದಾಶಾಳ** ಎಂಬ ಊರಿನಲ್ಲಿ ಜನಿಸಿದರು. ಇವರ ತಂದೆ ಹೆಸರು ಗುರುಪಾದಪ್ಪ, ತಾಯಿ ಹೆಸರು ಯಮುನಾಬಾಯಿ. ಇವರು ಎಂ.ಎ, ಎ.ಎಂ.(ಆರ್ಟ್ ಮಾಸ್ಟರ್) ಪದವಿ ಪಡೆದಿದ್ದು, ಬಸವನ ಬಾಗೇವಾಡಿಯ ಮುಳವಾಡ ಪ್ರೌಢಶಾಲೆಯಲ್ಲಿ ಚಿತ್ರಕಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡದಲ್ಲಿ ನೂರಾರು ಮಕ್ಕಳ ಕವಿತೆಗಳು, ಕಥೆಗಳನ್ನು ರಚಿಸಿದ್ದಾರೆ. ಅನೇಕ ಕೃತಿಗಳನ್ನು ಸಂಪಾದನೆ ಮಾಡಿದ್ದಾರೆ. **ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ-೨೦೧೦ರಲ್ಲಿ ಪಡೆದುಕೊಂಡಿರುವ ಇವರು ಅನೇಕ ಸಾಹಿತ್ಯ ಕೃತಿಗಳನ್ನು** ನೀಡಿದ್ದಾರೆ. ಇವರ **'ಮಕ್ಕಳ ನೂರಾರು ಕವಿತೆಗಳು'** ಎಂಬ ಕೃತಿಯಿಂದ ಈ ಪದ್ಯವನ್ನು ಆರಿಸಿಕೊಳ್ಳಲಾಗಿದೆ.

© KTBS Not to be republished

## ಪದಗಳ ಅರ್ಥ

ದಿಟ್ಟಹೆಜ್ಜೆ-ಧೈರ್ಯದ ಹೆಜ್ಜೆ, ಸಾಹಸದ ನಡೆ. ಚರಿತ್ರೆ-ಇತಿಹಾಸ. ಕುನ್ನಿ-ನಾಯಿಮರಿ. ಜನಜನಿತ-ಪ್ರಸಿದ್ಧವಾದ. ಪರಕೀಯು-ವಿದೇಶಿಯು, ಅನ್ಯ. ಕನವರಿಕೆ-ನಿದ್ದೆಯಲ್ಲಿ ಮಾತಾಡಿಕೊಳ್ಳುವಿಕೆ, ಒಂದೇ ವಿಷಯವನ್ನು ಮತ್ತೆ ಮತ್ತೆ ಯೋಚಿಸುವಿಕೆ. ಕೆಚ್ಚೆದೆ-ಗಟ್ಟಿಯಾದ ಎದೆ, ಎದೆಗಾರಿಕೆ. ರಣಚಂಡಿ-ಯುದ್ಧದೇವತೆ, ದುರ್ಗೆ. ದುರ್ಮತಿ-ಕೆಟ್ಟ ಬುದ್ಧಿ, ದುಷ್ಟ ವ್ಯಕ್ತಿ. ಮಮ್ಮಲ ಮರುಗು-ಅತಿಶಯವಾಗಿ ಮರುಗು, ವಿಶೇಷವಾಗಿ ದುಃಖಪಡು. ಅರಿ-ಶತ್ರು. ಸೆರೆಮನೆ-ಕಾರಾಗೃಹ, ಬಂದೀಖಾನೆ. ಕಲಿ-ವೀರ, ಶೂರ. ಮರುಜನ್ಮ-ಪುನರ್ಜನ್ಮ.

## ಅಭ್ಯಾಸಗಳು

**ಅ. ಬಿಟ್ಟ ಸ್ಥಳ ತುಂಬಿರಿ.**

೧. ಅನ್ನಕ್ಕೆ ಬಂದಿರುವ ____________ ಮನ್ನಿಸದೆ.

೨. ಹೋದರೀ __________ ಪರಕೀಯರಾ ವಶಕೆ!

೩. ಕರಿನೆಲದ ಗರಿಮೆಯನು ತೋರಿಸಲು __________

೪. ಮಮ್ಮಲನೆ ಮರುಗಿದಳು ________ ಕೊರಗಿದಳು.

**ಆ. ಕೊಟ್ಟಿರುವ ಪದ ಬಳಸಿ ಸ್ವಂತ ವಾಕ್ಯ ಬರೆಯಿರಿ.**

೧. ಚರಿತ್ರೆ    ೨. ಜಯಮಾಲೆ    ೩. ಋಣ

**ಇ. ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ. ಚೆನ್ನಮ್ಮ ಏನೆಂದು ಕನವರಿಸಿ ಹಲ್ಲು ಕಡಿದಳು?

ಆ. ನಮ್ಮ ಅನ್ನವನ್ನು ಉಂಡು ಕೊಬ್ಬಿರುವವರು ಯಾರು?

ಇ. ಚೆನ್ನಮ್ಮ ಸೈನಿಕರನ್ನು ಕುರಿತು ಏನೆಂದು ಹೇಳಿದಳು?

ಈ. ಯಾರ ಕೃಪೆಯಿಂದ ಸೈನ್ಯವನ್ನು ಕಟ್ಟಲಾಯಿತು?

ಉ. ಮರುಜನ್ಮ ನೀಡೆಂದು ಚೆನ್ನಮ್ಮ ಯಾರಲ್ಲಿ, ಯಾಕೆ ಕೇಳಿದಳು?

**ಈ. ಕೆಳಗಿನ ಪ್ರಶ್ನೆಗಳಿಗೆ ೨-೩ ವಾಕ್ಯಗಳಲ್ಲಿ ಉತ್ತರಿಸಿರಿ.**

೧. ರಾಣಿ ಚೆನ್ನಮ್ಮ ಹಲ್ಲು ಕಡಿದದ್ದು ಯಾಕೆ?

೨. ಕೆಚ್ಚೆದೆಯ ಕಲಿಗಳಿಗೆ ಚೆನ್ನಮ್ಮ ಏನೆಂದು ಹೇಳಿದಳು?

೩. ಚೆನ್ನಮ್ಮನಿಗೆ ನೋವಾಗಲು ಕಾರಣವೇನು?

೪. ಕಿತ್ತೂರ ಕೇಸರಿ ಕಣ್ಮುಚ್ಚಿ ಏನೆಂದು ಬೇಡಿಕೊಂಡಳು?

**ಉ. ಪದ್ಯ ಪೂರ್ಣಗೊಳಿಸಿರಿ.**

೧. ಮಲ್ಲಸರ್ಜನ ________________

________________________

________________________

________________ ಹಲ್ ಕಡಿದಳಾಕೆ

©KTBS Not to be republished

೨. ನಿನ್ನ ಋಣ____________________

____________________

____________________

____________________ಕಿತ್ತೂರ ಕೇಸರಿ.

**ಊ. ಕೆಳಗಿನ ಪದಗಳನ್ನು ಅಚ್ಚಗನ್ನಡ, ಸಂಸ್ಕೃತ, ಇಂಗ್ಲಿಷ್, ಪೋರ್ಚ್‌ಗೀಸ್ ಭಾಷೆಯ ಪದಗಳಾಗಿ ವಿಂಗಡಿಸಿ ಬರೆಯಿರಿ.**

ರೋಡ್, ಅಲಮಾರು, ಛೇರ್‌ಮನ್, ಭೂಮಿ, ಮನೆ, ಕೋರ್ಟ್, ನದಿ, ಸ್ಕೂಲ್, ಸಾಬೂನು, ಸಂಧ್ಯಾ, ಬ್ಯಾಂಕ್, ಮೇಜು, ಆರ್ಯ, ಪಾದ್ರಿ, ರಾತ್ರಿ, ಹೊಲ, ಗದ್ದೆ, ಹಿತ್ತಿಲು, ತಿಳುವಳಿಕೆ, ಬಾಯಿ.

**ಋ. ಈ ಪದ್ಯದಲ್ಲಿರುವ ಪ್ರಾಸಪದಗಳನ್ನು ಆರಿಸಿ ಪಟ್ಟಿ ಮಾಡಿರಿ.**

**ಭಾಷಾ ಆಟಗಳು**

**ಅ.** ಇಲ್ಲಿ ದೇಶೀಯ ಮತ್ತು ಅನ್ಯದೇಶೀಯ ಪದಗಳನ್ನು ಒಂದು ಚೌಕದಲ್ಲಿ ಮಿಶ್ರಣಗೊಳಿಸಿ ನೀಡಿದೆ. ಜಾಣರಾದ ನೀವು ಅವುಗಳನ್ನು ಪ್ರತ್ಯೇಕಿಸಿ ಬರೆಯಿರಿ.

ದಿವಾನ, ಸೈಕಲ್, ಅನಾನಸು, ವಜಾ, ಜರೂರು, ಬೆಲ್ಲ, ಸರದಾರ, ಸಿನಿಮಾ, ಖಾನಾವಳಿ, ನೀರು, ಚೂಡ, ಶಿಫಾರಸ್ಸು, ಮೇಜು, ಹುಲ್ಲು, ಪಗಾರ, ಸಾಬೂನು, ಎಕರೆ, ಸರಕಾರ, ಹೊಲ, ಕಛೇರಿ,ಜಾನುವಾರು, ಆಟ, ಲಾವಣಿ, ಬಟಾಟೆ, ಅಮಲ್ದಾರ್,

**ಆ. ಈ ಪದ್ಯವನ್ನು ಓದಿ ಕೆಳಗಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಬಂತಪ್ಪ ಬಂತು ಮಳೆಗಾಲ
ಬೀಜವ ಬಿತ್ತುವ ಈ ಕಾಲ
ಬೆಳೆಯನು ಬೆಳೆಯುವ ಈ ಕಾಲ
ಕೊಡೆಯನು ಹಿಡಿಯುವ ಈ ಕಾಲ॥

ಬಂತಪ್ಪ ಬಂತು ಚಳಿಗಾಲ
ಎಲೆಗಳು ಉದುರುವ ಈ ಕಾಲ
ಗಡ ಗಡ ನಡುಗುವ ಈ ಕಾಲ
ಕಂಬಳಿ ಹೊದೆಯುವ ಈ ಕಾಲ॥

©KTBS Not to be republished

ಬಂತಪ್ಪ ಬಂತು ಬೇಸಿಗೆ ಕಾಲ
ನೀರನು ಕುಡಿಯುವ ಈ ಕಾಲ
ಮಾವು ಸಿಗುವ ಈ ಕಾಲ
ಬಿಸಿಲಿಗೆ ಒಣಗುವ ಈ ಕಾಲ॥

## ಪ್ರಶ್ನೆಗಳು

೧. ಕಾಲಗಳು ಯಾವುವು?
೨. ಭೂಮಿಯ ಮೇಲೆ ಕಾಲಗಳು ಹೇಗೆ ಉಂಟಾಗುತ್ತವೆ?
೩. ಮಳೆ ಬಾರದಿದ್ದರೆ ಏನಾಗಬಹುದು?
೪. ಚಳಿಗಾಲ ಅಗತ್ಯವಿದೆಯೆ?
೫. ಈಗ ಬಿಸಿಲಿನ ಪ್ರಮಾಣ ಹೆಚ್ಚಾಗಿದೆ ಕಾರಣವೇನು?
೬. ಕಾಲಗಳೇ ಇಲ್ಲದಿದ್ದರೆ ಏನಾಗುತ್ತಿತ್ತು?

## ಯೋಜನೆ

➢ ಬ್ರಿಟಿಷರ ವಿರುದ್ಧ ಹೋರಾಡಿದ ಕನ್ನಡಿಗರ ಭಾವ ಚಿತ್ರಗಳನ್ನು ಸಂಗ್ರಹಿಸಿರಿ ಮತ್ತು ಹೋರಾಟದ ಬಗ್ಗೆ ಮಾಹಿತಿ ಬರೆಯಿರಿ.

©KTBS Not to be republished

## ಪೂರಕ ಓದು

➢ ದೇಶಕ್ಕಾಗಿ ಹೋರಾಡಿದ ಮಹಾಪುರುಷರ, ವೀರ ಮಹಿಳೆಯರ ಕುರಿತ ಹಾಡುಗಳನ್ನು ಸಂಗ್ರಹಿಸಿ ರಾಗಬದ್ಧವಾಗಿ ಹಾಡಿರಿ.
➢ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆಗಳನ್ನು ಓದಿರಿ.
➢ ರಾಣಿ ಚೆನ್ನಮ್ಮ, ಅಬ್ಬಕ್ಕ, ಓಬವ್ವನಂತಹ ಅನೇಕ ಕನ್ನಡ ನಾಡಿನ ವೀರ ಮಹಿಳೆಯರ ಬಗ್ಗೆ ತಿಳಿದುಕೊಳ್ಳಿರಿ.

## ಶುಭ ನುಡಿ

➢ ತಾನೆಲ್ಲಿದ್ದರೂ ತನ್ನ ನಾಡನ್ನು ಮರೆಯಬಾರದು.
➢ ಹೆತ್ತ ತಾಯಿ ಹೊತ್ತ ಭೂಮಿ ಸ್ವರ್ಗಕ್ಕಿಂತ ಮಿಗಿಲು.
➢ ನಾವೆಲ್ಲ ದೇಶಕ್ಕಾಗಿ, ಒಂದಾಗಬೇಕು.

* * * * *

## ಪೂರಕ ಪಾಠಗಳು

# ೧. ನಾಟ್ಯಕಲಾ ದುರಂಧರ ಮಹಮ್ಮದ್ ಪೀರ್

– ಸಮಿತಿ ರಚನೆ



ನಮ್ಮ ಕನ್ನಡ ಸಾಹಿತ್ಯಕ್ಕೆ ಸುಮಾರು ೧೫೦೦ ವರ್ಷಗಳ ಇತಿಹಾಸವಿದೆ. ಜನಪದ ಗೀತೆ, ಕಥೆಗಳು, ಲಾವಣಿ ಹಾಗೂ ರಂಗಭೂಮಿ ಕನ್ನಡ ಸಾಹಿತ್ಯವನ್ನು ಜನಸಾಮಾನ್ಯರಿಗೆ ಮೌಖಿಕವಾಗಿ ತಲುಪಿಸುತ್ತ ಬಂದಿವೆ. ಪುರಾಣ, ಇತಿಹಾಸ ಮುಂತಾದ ಪ್ರಸಿದ್ಧವಾದ ಸಾಹಿತ್ಯವನ್ನು ಮನೋರಂಜನೆಯ ಜೊತೆಗೆ ರವಾನಿಸುವ ಕಾರ್ಯವನ್ನು ರಂಗಭೂಮಿ ವಹಿಸಿಕೊಂಡಿದೆ. ಶ್ರವ್ಯ ದೃಶ್ಯ ಸಾಧನವಾದ ರಂಗಭೂಮಿಯ ಪಾತ್ರಗಳು ಬಹು ಬೇಗನೆ ಜನರನ್ನು ತಲುಪುತ್ತವೆ. ರಂಗಭೂಮಿ ಕಲೆಯನ್ನು ಉಳಿಸಿ ಬೆಳೆಸುವುದರಲ್ಲಿ ಹಲವಾರು ಮಹನೀಯರು ತಮ್ಮ ಜೀವನವನ್ನೇ ಮುಡುಪಾಗಿರಿಸಿದ್ದಾರೆ. ಅಂತಹ ಮಹಾನ್ ಕಲಾವಿದರಲ್ಲಿ ಮಹಮ್ಮದ್ ಪೀರ್ ಒಬ್ಬರು.

ಮಹಮ್ಮದ್ ಪೀರ್ ಕನ್ನಡ ವೃತ್ತಿ ರಂಗಭೂಮಿಯ ಪ್ರಸಿದ್ಧ ನಟ. ಮೈಸೂರಿನ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಜನಿಸಿದರು. ಇವರ ತಂದೆ ಪೈಲ್ವಾನ್ ಮೊಹಿಯುದ್ದೀನ್. ತಾಯಿ ಮುಬಾರಕ್ಬಿ. ತಂದೆತಾಯಿಯರನ್ನು ಬಾಲ್ಯದಲ್ಲಿಯೆ ಕಳೆದುಕೊಂಡ ಪೀರ್ ಅವರು ಅನಂತರ ಸೋದರಮಾವನ ಆಶ್ರಯದಲ್ಲಿ ಬೆಳೆದರು. ಇವರು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಓದುತ್ತಿರುವಾಗಲೆ ನಾಟಕದಲ್ಲಿ ಅಭಿರುಚಿ ಹತ್ತಿತು. ಅವಕಾಶ ದೊರೆತಾಗಲೆಲ್ಲಾ ತಪ್ಪದೆ ನಾಟಕಗಳನ್ನು ನೋಡುತ್ತಿದ್ದ ಇವರ ಮೇಲೆ ವರದಾಚಾರ್ಯ, ಕೃಷ್ಣಮೂರ್ತಿರಾವ್, ಬಳ್ಳಾರಿ ರಾಘವ ಅವರ ಪ್ರಭಾವವಾಯಿತು. ನಾಟಕದ ಗೀಳಿನಿಂದಾಗಿ ವಿದ್ಯಾಭ್ಯಾಸ ಕುಂಠಿತಗೊಂಡಿತು. ೧೯೧೫ರಲ್ಲಿ ಮೈಸೂರಿನಲ್ಲಿಯೇ ಇದ್ದ ಗಿರಿಧರಲಾಲ್ ಕಂಪನಿ ಪ್ರವೇಶಿಸುವ ಮೂಲಕ ಇವರು ರಂಗಭೂಮಿಗೆ ಪದಾರ್ಪಣ ಮಾಡಿದರು.

©KTBS Not to be republished

ಕೃಷ್ಣಲೀಲಾ ಇವರು ಅಭಿನಯಿಸಿದ ಮೊದಲ ನಾಟಕ. ೧೯೨೦ರಲ್ಲಿ ಪೀರ್ ಅವರು ಈ ಸಂಸ್ಥೆಯನ್ನು ಬಿಟ್ಟು ಬೆಂಗಳೂರಿಗೆ ಹೋಗಿ ಗುರುಕಾರ್ ಕಂಪನಿ ಎಂದು ಪ್ರಸಿದ್ಧವಾಗಿದ್ದ ನಟಭಯಂಕರ ಗಂಗಾಧರರಾಯರ 'ಭಾರತ ಜನಮನೋಲ್ಲಾಸಿನಿ' ನಾಟಕ ಕಂಪನಿಗೆ ಸೇರಿದರು. ಇಲ್ಲಿ ಎಂಟು ವರ್ಷಗಳ ಕಾಲ ದುಡಿದರು. ಇಲ್ಲಿರುವಾಗ 'ಕಾಳಿದಾಸ'ದಲ್ಲಿ ಕುರುಬ, 'ಸದಾರಮೆ'ಯಲ್ಲಿ ಕಳ್ಳ, 'ಪ್ರಭಾಮಣಿ'ಯಲ್ಲಿ ವಿರೋಚನ, 'ಸುಭದ್ರಾ'ದಲ್ಲಿ ಬ್ರಾಹ್ಮಣ– ಇಂತಹ ಹಾಸ್ಯ ಪಾತ್ರಗಳು ಅವರ ಪಾಲಿನದಾದವು. ಬರುಬರುತ್ತಾ ಪೀರ್ ಅವರು ಕಂಪನಿಯ ನಟರಾಗಿಯಷ್ಟೇ ಅಲ್ಲದೆ ಆ ಕಂಪನಿಯ ಸಲಹೆಗಾರರಾಗಿ, ಕಾರ್ಯದರ್ಶಿಯಾಗಿ, ಸ್ಟೇಜ್ ಮ್ಯಾನೇಜರ್ ಆಗಿ ಕೊನೆಗೆ ಕಂಪನಿಯ ಮ್ಯಾನೇಜರ್ ಆದರು. ಕೆಲವು ಸಹ ನಟರ ಸಹಕಾರದಿಂದ ೧೯೩೨ರಲ್ಲಿ ಚಂದ್ರಕಲಾ ನಾಟಕ ಮಂಡಳಿಯನ್ನು ಸ್ಥಾಪಿಸಿದರು.

ಐದೂವರೆ ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಈ ಸಂಸ್ಥೆ ಪೀರ್‌ರವರ ನೇತೃತ್ವದಲ್ಲಿ ಸಾಧಿಸಿದ ಕಲಾಸಿದ್ಧಿ ಅಸಾಮಾನ್ಯ. ಈ ಕಂಪನಿಯ ಮೊದಲ ಪ್ರಯೋಗ ದ್ವಿಜೇಂದ್ರಲಾಲ್‌ರಾಯರ 'ಷಾಜಹಾನ' ಪ್ರಚಂಡ ಜನಪ್ರಿಯತೆ ಪಡೆಯಿತು. ಒಂದೇ ನಾಟಕ ಒಂಬತ್ತು ದಿನಗಳು ಸತತ ಪ್ರದರ್ಶಿತವಾದ ಕೀರ್ತಿ ಇದರದಾಯಿತು. ಎಚ್.ಎಲ್.ಎನ್.ಸಿಂಹ ಅವರ 'ಸಂಸಾರ ನೌಕೆ' (೧೯೩೨), ಪುಟ್ಟಸ್ವಾಮಯ್ಯನವರ 'ಗೌತಮ ಬುದ್ಧ' (೧೯೩೪) ಮುಂತಾದ ಹೊಸ ಬಗೆಯ ನಾಟಕಗಳನ್ನು ಈ ಮಂಡಳಿ ಆಡಿತು. ಈ ಮೂರು ವಿಶಿಷ್ಟ ನಾಟಕಗಳಲ್ಲದೆ ಪ್ರಭಾಮಣಿ ವಿಜಯ, ವೀರಸಿಂಹ ಚರಿತ್ರೆ, ಸದಾರಮೆ, ಸುಭದ್ರಾ ಪರಿಣಯ ಮೊದಲಾದ ನಾಟಕಗಳೂ ಈ ಮಂಡಳಿಯ ನಾಟಕಗಳಾದವು. 'ಸಂಸಾರ ನೌಕ'ದಲ್ಲಿ ಸುಂದರ, 'ಷಾಜಹಾನ್' ನಾಟಕದಲ್ಲಿ ದಾರಾ, 'ಗೌತಮಬುದ್ಧ'ದಲ್ಲಿ ಗೌತಮ ಈ ಪಾತ್ರಗಳ ಅಭಿನಯ ವಿಶೇಷ ಖ್ಯಾತಿಗೆ ಪಾತ್ರವಾಗಿ ಪೀರ್ ಅವರ ಹೆಸರು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಚಿರಸ್ಥಾಯಿಯಾಯಿತು. ವರದಾಚಾರ್ಯ, ರಾಘವರ ಅನಂತರ ರಂಗಾಭಿನಯ ಕಲೆ ಪ್ರಖರವಾದುದು ಪೀರ್ ಅವರಿಂದಲೇ ಎಂದರೆ ಅತಿಶಯೋಕ್ತಿಯಲ್ಲ. ಕನ್ನಡ ರಾಘವ ಎಂದೇ ಪ್ರಸಿದ್ಧರಾದ ಪೀರ್ ಅವರಿಗೆ ೧೯೩೫ರಲ್ಲಿ ಹುಬ್ಬಳ್ಳಿಯಲ್ಲಿ ಮುದವೀಡು ಕೃಷ್ಣರಾಯರ ನೇತೃತ್ವದಲ್ಲಿ ನಾಟ್ಯ ಕಲಾ ದುರಂಧರ ಪ್ರಶಸ್ತಿ ನೀಡಲಾಯಿತು.

©KTBS Not to be republished

ಐದೂವರೆ ಅಡಿ ಎತ್ತರ, ವಿಶಾಲ ಹಣೆ, ಅಗಲ ಕಣ್ಣುಗಳು, ಆಕರ್ಷಕ ಧ್ವನಿಯ ಪೀರ್ ಅವರದು ಸರಳ ಜೀವನ. ದಕ್ಷ ಅಭಿನಯ ಹಾಗೂ ಧ್ವನಿಪೂರ್ಣ ಸಂಭಾಷಣಾ ವೈಖರಿ ಇವರ ನಾಟಕಗಳ ಜೀವಾಳ. ಅಬ್ಬರದ ಸಂಗೀತ, ಹಾಡುಗಳಿಂದ ಅನೇಕ ವೇಳೆ ನಾಟಕದ ಓಟಕ್ಕೆ ಕುಂದು ಬರುತ್ತದೆ ಎಂಬುದು ಇವರ ಅಭಿಪ್ರಾಯ. ಸಂಗೀತ ಪ್ರಧಾನ ನಾಟಕಗಳ ಮಹತ್ವ ಕಡಿಮೆಯಾಗಿದ್ದಾಗ, ಜನಪ್ರಿಯತೆ ಕುಂದುತ್ತಿದ್ದಾಗ, ಸಾಹಿತ್ಯ ಮೌಲ್ಯವುಳ್ಳ ಗದ್ಯ ಕೃತಿಗಳೂ ಅಭಿನಯ ಯೋಗ್ಯ ಎಂದು ತೋರಿಸಿದ ಕೀರ್ತಿ ಪೀರ್ ಅವರಿಗೆ ಸಲ್ಲಬೇಕು.

**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

೧. ಕನ್ನಡ ರಾಘವ ಎಂದು ಪ್ರಸಿದ್ಧರಾದವರು ಯಾರು?

೨. ಮಹಮ್ಮದ್ ಪೀರ್ ಅವರು ಯಾರ ಆಶ್ರಯದಲ್ಲಿ ಬೆಳೆದರು?

೩. ಮಹಮ್ಮದ್ ಪೀರ್ ಅವರಿಗೆ ನಾಟಕದ ಅಭಿರುಚಿ ಯಾವಾಗ ಹತ್ತಿತು?

೪. ಮಹಮ್ಮದ್ ಪೀರ್ ಅವರ ಯಾವ ಪಾತ್ರಗಳು ವಿಶೇಷ ಖ್ಯಾತಿಗೆ ಪಾತ್ರವಾಗಿವೆ?

೫. ಮಹಮ್ಮದ್ ಪೀರ್‌ರವರ ತಂದೆ ತಾಯಿ ಹೆಸರೇನು?

©KTBS Not to be republished

* * * * *

# ೨. ಅವ್ವ

– ಲಲಿತಾ ಕೆ. ಹೊಸಪ್ಯಾಟಿ

ಬೊಗಸೆ ತುಂಬ ಹೂವ ತಂದು
ಪಾದಕಮಲಕೆರಗುವೆ
ನಿನ್ನ ಅಡಿಗೆ ಮಣಿದು ಮತ್ತೆ
ಭಾಗ್ಯವನ್ನೆ ಬೇಡುವೆ ॥೧॥

ಗರ್ಭದಲ್ಲಿ ಮಾಂಸ ಮುದ್ದೆ
ಅ ಆ ಇ ಈ ತಿಳಿಯದು
ಜನಿಸಿ ಧರೆಗೆ ಬಿದ್ದ ಕ್ಷಣವೆ
'ಅವ್ವ' ಅಂತು ಕೊರಳು ॥೨।



©KTBS Not to be republished

ನೋವ ನುಂಗಿ ನನ್ನ ನಂಬಿ
ಹಾಲ ನೀನು ಕುಡಿಸಿದೆ
ಕಣ್ಣ ನೀರ ಒರೆಸಿ ನೀನು
ಎದೆಗವಚಿ ರಮಿಸಿದೆ ॥೩॥

ಬಿದ್ದರಂತು ಓಡಿಬಂದು
ಎತ್ತಿಕೊಂಡು ರಮಿಸಿದೆ
ಗೆದ್ದರಂತು ಖುಷಿಯು ನಿನಗೆ
ಹೊತ್ತುಕೊಂಡು ಸಾರಿದೆ ॥೪॥

ವಿದ್ಯೆ ಕಲಿಸಿ ಬುದ್ಧಿನೀಡಿ
ಸಿದ್ಧಿಪಡೆಯೆ ಕಲಿಸಿದೆ
ಯಶದ ಹಿಂದೆ ಹರಕೆ ನೀಡಿ
ಜೀವತ್ಯಾಗ ಮಾಡಿದೆ ॥೫॥

ರೊಕ್ಕಕೆಲ್ಲ ಲೆಕ್ಕವಿಲ್ಲ
ನಿನ್ನ ಋಣ ಅಗಣಿತ.
ಪಾದಕಮಲಕೊಂದೆ ಹೂವು
ನನ್ನ ಪ್ರೀತಿ ಸೀಮಿತ ॥೬॥

ತಾಯಿ ಹರಕೆ ಮುಂದೆ ಜಗದಿ
ಯಾವುದಿಲ್ಲ ಮಿಗಿಲು ತಾನು
ಕಾಯೊ ಗುಣದ ದೇವರವ್ವ
ಅವ್ವ ನಿನ್ನ ಹೆಸರು ॥೭॥

**ಕವಿ ಕೃತಿ ಪರಿಚಯ :**



**ಲಲಿತಾ.ಕೊಟ್ರೆಪ್ಪ.ಹೊಸಪ್ಯಾಟಿ** **೧೯೬೪ರಲ್ಲಿ** ಜನಿಸಿದರು .ತಂದೆ ಕೊಟ್ರೆಪ್ಪ, ತಾಯಿ ನೀಲಮ್ಮ. ಸರ್ಕಾರಿ ಪ್ರೌಢಶಾಲೆ ಹಿರೇಬಾದವಾಡಗಿ ಹುನಗುಂದ ತಾ. ಬಾಗಲಕೋಟೆ ಜಿಲ್ಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು **ಕಲ್ಪನಾಳಿಗೊಂದು ಎದೆಹಾಡು,ಹೂ ಮಾರುವ ಹುಡುಗಿ** ಎಂಬ **ಮಕ್ಕಳ** ಕವನ ಸಂಕಲನ. **ಪಟ್ಟಣಕ್ಕೆ ಬಂದ ಪುಟ್ಟ ಗುಬ್ಬಿ (ಮಕ್ಕಳ ನಾಟಕ) ಮಳೆಯಾದಳು ನೀರಾ, ಗೆಳೆಕಾರ ಹಕ್ಕಿಗಳು ಚಂದ್ರ ಚುಕ್ಕಿಗಳು** ಎಂಬ ಮಕ್ಕಳ ಕಥಾ ಸಂಕಲನಗಳನ್ನು ರಚಿಸಿದ್ದಾರೆ.

©KTBS Not to be republished

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

೧. ಕವಯಿತ್ರಿಯು ತಾಯಿಯ ಪಾದಕ್ಕೆ ಏನು ತರುತ್ತಾಳೆ?
೨. ಜಗತ್ತಿನಲ್ಲಿ ಮಿಗಿಲಾದುದು ಯಾವುದು?
೩. ತಾಯಿ ಮಗುವಿಗೆ ಏನನ್ನು ಕಲಿಸುತ್ತಾಳೆ?
೪. ಮಗು ಬಿದ್ದಾಗ ತಾಯಿ ಹೇಗೆ ರಮಿಸುತ್ತಾಳೆ?
೫. ತಾಯಿ ಮಗುವಿಗೆ ಏನನ್ನು ಕುಡಿಸುತ್ತಾಳೆ?

* * * * *

# ೩. ಗಾಢ ಕತ್ತಲು ಮತ್ತು ಗುಮ್ಮಗಳು

**– ವಿಜಯಶ್ರೀ ಹಾಲಾಡಿ**

ವಿಜಿಯ ಕಲ್ಪನೆಯಲ್ಲಿ ಕತ್ತಲೆಂದರೆ ಗುಮ್ಮ; ಗುಮ್ಮ ಎಂದರೆ ಕತ್ತಲು. ಅವಳು ತೀರಾ ಸಣ್ಣವಳಿರುವಾಗ ಅಕ್ಕಂದಿರು, ಅಣ್ಣ "ಗುಮ್ಮನ ಚಿತ್ರ ಬಿಡಿಸು" ಎಂದರೆ ದೊಡ್ಡ ಕಣ್ಣು ಬಿಡಿಸಿ, ಮುಸುಕುಧಾರಿ ವೇಷವನ್ನು ಬರೆಯುತ್ತಿದ್ದಳು. ಗುಮ್ಮನಿಗೆ ಅದರ ಗೊಗ್ಗರು ಗಂಟಲ ತರಹವೇ ಭಯಾನಕ ಕಣ್ಣು, ದೇಹ ಇರುತ್ತದೆ ಎನ್ನುವುದು ಅವಳ ತಿಳಿವಳಿಕೆಯಾಗಿತ್ತು. 'ಗುಮ್ಮ' ಎಂದರೆ ಗೂಬೆ ಎನ್ನುವ ಒಂದು ಹಕ್ಕಿ ಎಂದು ಅವಳಿಗೆ ಗೊತ್ತಿರಲೇ ಇಲ್ಲ! ಕ್ರಮೇಣ ದೊಡ್ಡವಳಾದ ನಂತರವೇ ಆ ಸತ್ಯಸಂಗತಿ ಅವಳಿಗೆ ಅರಿವಾದದ್ದು. ಅವಳು ಚಿಕ್ಕವಳಿದ್ದಾಗ ಹಾಲು ಕುಡಿಯದಿದ್ದರೆ, ಊಟ ಮಾಡದಿದ್ದರೆ "ಗುಮ್ಮ ಬರುತ್ತದೆ ಬೇಗ ಬೇಗ ತಿನ್ನು" ಎಂದು ಹೆದರಿಸುವುದನ್ನು ಕೇಳಿ ಮತ್ತು ಅವರ ಮನೆಯ ಹತ್ತಿರವೇ ಮಳೆಗಾಲದ ರಾತ್ರಿಗಳಲ್ಲಿ ಗುಮ್ಮಗಳು 'ಊಂ ಹೂಂ' ಎಂದು ಸತತವಾಗಿ ಕೂಗುವುದು ಕೇಳಿ ಗುಮ್ಮನ ಕುರಿತು ಭೀತಿಯೊಂದು ಅವಳೊಳಗೆ ಇಳಿದಿತ್ತು.

ನಿಜವಾದ "ಕತ್ತಲು" ಎಂದರೆ ಏನೆಂದು ಹಳ್ಳಿಯಲ್ಲಿ ಬೆಳೆದ ಮಕ್ಕಳಿಗೆ ಚೆನ್ನಾಗಿ ಗೊತ್ತಿರುತ್ತದೆ. ವಿದ್ಯುತ್ತೇ ಇಲ್ಲದ ಊರಿನಲ್ಲಿ ಸುತ್ತಲೂ ದಟ್ಟ ಕಾಡು – ಗದ್ದೆ, ತೋಟ ಹೊಂದಿದ ಹಳ್ಳಿಮನೆಯಲ್ಲಿ ಬೆಳೆದವಳು ವಿಜಿ. ಮನೆಯೊಳಗೆ ಉರಿಯುವ ಚಿಮಣಿದೀಪ ಬಿಟ್ಟರೆ ಹೊರಗೆಲ್ಲ ದಟ್ಟ ಕತ್ತಲು. ಆ ಕತ್ತಲು ಹೇಗೆಂದರೆ ಜಗವೆಲ್ಲವೂ ಮಸಿಯಲ್ಲಿ ಅದ್ದಿಟ್ಟಂತೆ! ಕಣ್ಣಿಗೆ ಕಣ್ಣು ತಾಗಿಸಿದರೂ ಕತ್ತಲಲ್ಲದೆ ಬೇರೇನೂ ಕಾಣುವುದಿಲ್ಲ. ಅದರಲ್ಲೂ ಮೋಡಗಳು ತುಂಬಿದ ಮಳೆಗಾಲ ಮತ್ತು ಅಮಾವಾಸ್ಯೆಯ ಸಂದರ್ಭದಲ್ಲಿ ಕತ್ತಲು ಮತ್ತಷ್ಟು ಕಟುವಾಗಿರುತ್ತದೆ. ಹುಣ್ಣಿಮೆ ಮತ್ತು ಅದರ ಆಸುಪಾಸಿನ ದಿನಗಳಲ್ಲಿ; ಅದರಲ್ಲೂ ಬೇಸಿಗೆಯ ಸಮಯದಲ್ಲಾದರೆ ಒಳ್ಳೆ ತಿಂಗಳ ಬೆಳಕು ಚೆಲ್ಲಿಕೊಂಡು ಹೊರಗಿನ ಗದ್ದೆ, ಗಿಡಮರಗಳು ಕಾಣುತ್ತಿರುತ್ತವೆ. ಮಳೆಗಾಲದಲ್ಲಿ ಕೆಲವೊಮ್ಮೆ ಹಗಲಲ್ಲೇ ಪದರ ಪದರ ಮೋಡಗಳು ಕವುಚಿಕೊಂಡು ಕತ್ತಲಾಗಿಬಿಡುವ ಸನ್ನಿವೇಶವಂತೂ ಒಂಥರಾ ನಿಗೂಢ ಭಾವವನ್ನು ಬಿತ್ತುತ್ತದೆ.

©KTBS Not to be republished

ಸಂಜೆಯಾದೊಡನೆ ಚಿಮಣಿದೀಪಗಳು, ಒಂದೆರಡು ಲ್ಯಾಂಪುಗಳನ್ನು, ದೇವರ ದೀಪವನ್ನು ಹಚ್ಚಿಬಿಡುತ್ತಿದ್ದರು. ಉಪ್ಪರಿಗೆಗೋ, ಕೋಣೆಗೋ, ಬಚ್ಚಲುಮನೆಗೋ, ಬಾವಿಕಟ್ಟೆಗೋ, ಕೊಟ್ಟಿಗೆಗೋ ಹೋಗಬೇಕಾದರೆ ಚಿಮಣಿಯನ್ನೂ ಜೊತೆಗೆ ತೆಗೆದುಕೊಂಡು ಹೋಗಬೇಕಿತ್ತು. ತೋಟ ಅಥವಾ ದೂರ ಎಲ್ಲಾದರೂ ಹೋಗುವುದಿದ್ದರೆ ಮಾತ್ರ ಬ್ಯಾಟರಿಯನ್ನು ಬಳಸುತ್ತಿದ್ದರು. ಅದರಲ್ಲೂ ಎಲ್ಲರ ಮನೆಯಲ್ಲಿ ಬ್ಯಾಟರಿ ಇರಲಿಲ್ಲ. ಹೆಚ್ಚಿನವರು ದೂರದ ಪ್ರಯಾಣಕ್ಕೆ ಸೂಡಿಯನ್ನು ಬಳಸುತ್ತಿದ್ದರು. ಸೂಡಿಯನ್ನು ತೆಂಗು, ಅಡಿಕೆಯ ಗರಿಗಳಲ್ಲಿ ತಯಾರಿಸಲಾಗುತ್ತಿತ್ತು. ಗರಿಗಳನ್ನು ಕಡಿದು ಒಟ್ಟುಗೂಡಿಸಿ ಅಲ್ಲಲ್ಲಿ ಬಲವಾಗಿ ಬಾಳೆನಾರಿನಿಂದ ಕಟ್ಟಿ ಸೂಡಿ ತಯಾರಿಸುತ್ತಿದ್ದರು. ಮಾರುದ್ದ ಇರುತ್ತಿದ್ದ ಈ ಸೂಡಿಯ ತುದಿಗೆ ಬೆಂಕಿ ಹಚ್ಚಿಕೊಂಡರೆ ಅದನ್ನು ಬೀಸುತ್ತಾ ಸುಮಾರು ಮೈಲಿಗಟ್ಟಲೆ ಆ ಬೆಳಕಲ್ಲಿ ನಡೆಯಬಹುದಿತ್ತು! ಆಗೆಲ್ಲ ಮನೆಯೊಳಗೆ ಬಹುತೇಕ ಕತ್ತಲು. ಹಾಗಾಗಿಯೋ ಏನೋ, ರಾತ್ರಿ ಎಂಟು ಗಂಟೆಗೆಲ್ಲ ನಿದ್ದೆ ಬರುವ ಹಾಗಾಗುತ್ತಿತ್ತು. ವಿಜಿ ಮತ್ತು ಅವಳ ಅಜ್ಜಿ ಪ್ರತಿ ರಾತ್ರಿಯೂ ಮಲಗುತ್ತಿದ್ದುದು ಸರಿಯಾಗಿ ಒಂಬತ್ತು ಗಂಟೆಗೆ. ಇನ್ನೇನು

ಗಡಿಯಾರ ಒಂಬತ್ತು ಹೊಡೆಯುವುದರಲ್ಲಿ ಅಜ್ಜಿಯ ಪಕ್ಕ ಹಾಸಿಗೆಯಲ್ಲಿ ಮಲಗಿಬಿಡುತ್ತಿದ್ದಳು. ಇಲ್ಲವಾದರೆ ಅಜ್ಜಿಗೆ ಸಿಟ್ಟುಬರುತ್ತಿತ್ತು. ಬೆಳಿಗ್ಗೆ ಕೂಡಾ ಅಷ್ಟೇ; ಆರು ಗಂಟೆಗೆಲ್ಲ ಎದ್ದುಬಿಡುತ್ತಿದ್ದರು. ಅದಕ್ಕಿಂತ ಜಾಸ್ತಿ ಹೊತ್ತು ಅವರ ಮನೆಯಲ್ಲಿ ಯಾರೂ ಮಲಗುತ್ತಿರಲಿಲ್ಲ.


ಅಜ್ಜಿ ಹೇಳುತ್ತಿದ್ದರು... ಒಂದು ಸಲ ದಟ್ಟ ಕತ್ತಲಿನ ಅಮಾವಾಸ್ಯೆಯ ರಾತ್ರಿಯಲ್ಲಿ ಒಂದು ಗುಮ್ಮ ಮನೆ ಎದುರಿನ ತೆಂಗಿನಮರದಲ್ಲೇ ಕುಳಿತು ಕೂಗಲು ಶುರುಮಾಡಿತಂತೆ. ಆಗ ಮನೆಯಲ್ಲಿದ್ದದ್ದು ಅಜ್ಜಿಯೊಬ್ಬರೇ. 'ಈ ಗುಮ್ಮ ಮನೆಯ ಮೇಲೇ ಬಂದು ಕುಳಿತು ಕೂಗಿದರೆ...?' ಎಂದು ಯೋಚಿಸಿ ಅಜ್ಜಿಗೆ ಭಯವಾಯಿತು. ಹಾಗೆ ಮನೆ ಮೇಲೆ ಗುಮ್ಮ ಬಂದು ಕುಳಿತರೆ ಅದು ಅಪಶಕುನ ಎಂಬುದು ನಂಬಿಕೆ. ಆ ಗುಮ್ಮನನ್ನು ಓಡಿಸಿಬಿಡುವ ಎಂದರೆ ಆ ಕತ್ತಲಲ್ಲಿ ಅದು ಅಸಾಧ್ಯ. ಕೊನೆಗೆ ಗಟ್ಟಿ ನಿರ್ಧಾರ ಮಾಡಿದರಂತೆ; 'ಬೇಕಾದರೆ ಆ ಗುಮ್ಮ ಮನೆ ಮಾಡಿನ ಮೇಲ್ಲೇ ಕುಳಿತು ಕೂಗಲಿ, ತಾನೇನೂ ಹೆದರುವುದಿಲ್ಲ... ಅಪಶಕುನ ಮುಂತಾದುವೆಲ್ಲ ಸುಳ್ಳು, ನಮ್ಮ ನಡೆನುಡಿ ಸರಿಯಿದ್ದರೆ, ಒಳ್ಳೆತನವಿದ್ದರೆ ಯಾವ ಕೆಟ್ಟದ್ದೂ ಘಟಿಸುವುದಿಲ್ಲ' ಎಂದು ಧೈರ್ಯ ಮಾಡಿ ರಾತ್ರಿ ಕಳೆದರಂತೆ. ಇದನ್ನು ಕೇಳಿದಾಗ ವಿಜಿಗೆ ಪಕ್ಕದ ತೋಟದಲ್ಲಿ ಗುಮ್ಮ ಕೂಗಿದರೇ ಇಷ್ಟು ಭಯಾನಕವಾಗಿ ಕೇಳಿಸುತ್ತದೆ. ಇನ್ನು ಮನೆ ಮೇಲೆ ಕುಳಿತು ಕೂಗಿದರೆ ಏನು ಮಾಡುವುದಪ್ಪಾ ಎಂದು ಚಿಂತೆಯಾಯಿತು. ಅವಳಿಗೆ ತಡವಾಗಿ ತಿಳಿದ ಇನ್ನೊಂದು ಸ್ವಾರಸ್ಯದ ವಿಷಯವೆಂದರೆ ಆಚೆಮನೆ ದೊಡ್ಡಮ್ಮನೇ ಕೆಲವೊಮ್ಮೆ ಗುಮ್ಮನಾಗುತ್ತಿದ್ದರು ಎಂಬುದು! ವಿಜಿ ಅತ್ತು ಹಟ ಮಾಡಿದಾಗೆಲ್ಲ ಆಚೆಮನೆ ದೊಡ್ಡಮ್ಮ ಅವರ ಮನೆಯಿಂದಲೇ "ಮಕ್ಕಳು ಹಟ ಮಾಡಿದರೆ ಗುಮ್ಮ ಬರುತ್ತದೆ ಈಗ" ಎನ್ನುತ್ತಿದ್ದರು. ಅವರು ಹಾಗೆ ಹೇಳಿದ ತುಸು ಹೊತ್ತಿಗೇ ಗುಮ್ಮಗಳು ಕೂಗುತ್ತಿದ್ದವು. ವಿಜಿ ಹೆದರಿಕೊಂಡು ಮುಸುಕು ಹಾಕಿ ಮಲಗಿ ಅಲ್ಲೇ ನಿದ್ದೆ ಹೋಗುತ್ತಿದ್ದಳು. ಕೆಲವೊಮ್ಮೆ ದೊಡ್ಡಮ್ಮನೇ ಗುಮ್ಮನ ಹಾಗೆ "ಊಂ, ಹೂಂ" ಕೂಗುತ್ತಿದ್ದರು ಎಂದು ಸ್ವಲ್ಪ ದೊಡ್ಡವಳಾದ ಮೇಲೆ ವಿಜಿಗೆ ಸತ್ಯ ತಿಳಿಯಿತು!

ಸ್ವಲ್ಪ ಬೆಳೆದು ದೊಡ್ಡವಳಾಗಿ ಗುಮ್ಮನ ಹೆದರಿಕೆ ದೂರಾದ ನಂತರ ಕಗ್ಗತ್ತಲ ರಾತ್ರಿಗಳಲ್ಲಿ ಎಲ್ಲಿಗಾದರೂ ಹೋಗುವುದು ವಿಜಿಗೆ ಇಷ್ಟವಾಗತೊಡಗಿತು. ಅಮ್ಮ, ದೊಡ್ಡಮ್ಮ, ವಿಜಿ, ತಂಗಿ ನೀಲಿಮಾ ಕೆಲವೊಮ್ಮೆ ಯಕ್ಷಗಾನಗಳಿಗೆ ಹೋಗುವುದಿತ್ತು. ಅಕ್ಕಂದಿರು ಮನೆಗೆ ಬಂದಾಗಲೂ ಹೀಗೆ ರಾತ್ರಿ ಯಕ್ಷಗಾನಕ್ಕೆ ಹೋಗುತ್ತಿದ್ದರು. ಆಗಿನ ಖುಷಿ ವರ್ಣಿಸಲು ಅಸಾಧ್ಯ. ಆ ನೀರವ ರಾತ್ರಿಯಲ್ಲಿ ಬ್ಯಾಟರಿ ಹಿಡಿದು ಕಾಡುಗಳಲ್ಲಿ ನಡೆದುಹೋಗುವಾಗ ಕಾಡಿನ ಗಾಳಿಯನ್ನು ಹೀರಿಕೊಳ್ಳುತ್ತಿದ್ದಳು ವಿಜಿ. ಹಾಗೆ ಯಕ್ಷಗಾನಕ್ಕೆ ಹೋಗುವಾಗ 'ಅವತ್ತಿನ ಯಕ್ಷಗಾನ ಹೇಗಿರಬಹುದು?' ಎಂದು ಚರ್ಚೆಯಾದರೆ, ವಾಪಸ್ಸು ಬರುವಾಗ ನೋಡಿದ ಯಕ್ಷಗಾನದ ಕುರಿತು ವಿಮರ್ಶೆಗಳು, ಟೀಕೆ ಟಿಪ್ಪಣಿಗಳು ಇರುತ್ತಿದ್ದವು. ಕಾಡು ಮತ್ತು ಕತ್ತಲು ವಿಜಿಯನ್ನು ಹೆದರಿಸಲಿಲ್ಲ. ಅದೇ ವಾತಾವರಣದಲ್ಲಿ ಬಾಲ್ಯದಿಂದಲೂ ಬೆಳೆದದ್ದರಿಂದ ತೋಟದ ತನಕ ಕತ್ತಲಲ್ಲಿ ಒಬ್ಬಳೇ ಬ್ಯಾಟರಿ ಹಿಡಿದು ಹೋಗಿ ಬರುವ ಧೈರ್ಯ ಬೆಳೆಸಿಕೊಂಡಳು. ಒಂಬತ್ತನೆ ತರಗತಿಗೆ ಬಂದಾಗ ಅವಳು ರಾತ್ರಿ ಒಬ್ಬಳೇ ಉಪ್ಪರಿಗೆಯಲ್ಲಿ ಮಲಗುತ್ತಿದ್ದಳು. ನಿದ್ದೆ ಬರುವವರೆಗೆ ಕತ್ತಲನ್ನು ದಿಟ್ಟಿಸುತ್ತಾ ಮಲಗುವುದು ಅವಳ ಅಭ್ಯಾಸವಾಗಿತ್ತು. ಹೀಗೆ ಗಾಢಕತ್ತಲು, ರಾತ್ರಿ ಮತ್ತು ಮಳೆ ಇವೆಲ್ಲ ಅವಳಿಗೆ ಸದಾ ಇಷ್ಟವಾಗಿ ಹೋಯಿತು.

©KTBS Not to be republished

ಮಳೆಗಾಲದ ರಾತ್ರಿಗಳಂತೂ ವಿಜಿ – ನೀಲಿಮಾಗೆ ತುಂಬಾ ಇಷ್ಟ. ರಾತ್ರಿ ಮಲಗುವ ಹೊತ್ತಲ್ಲಿ ಅವರಿಬ್ಬರೂ "ಜೋರಾಗಿ ಮಳೆ ಬರಲಿ ದೇವರೇ" ಎಂದು ಪ್ರಾರ್ಥಿಸುತ್ತಿದ್ದರು. ಏಕೆಂದರೆ ಜೋಗುಳದಂತೆ ಸುರಿಯುವ ಆ ಮಳೆಗೆ ಒಳ್ಳೇ ಗಡದ್ದಾಗಿ ನಿದ್ದೆ ಬರುತ್ತಿತ್ತು. ಅದೂ ಅಲ್ಲದೆ ಮಳೆಯ ಸದ್ದನ್ನು ಕೇಳಿಸಿಕೊಳ್ಳುತ್ತಾ ಮಲಗುವುದೇ ಒಂದು ದೊಡ್ಡ ಸಂಭ್ರಮವಾಗಿತ್ತು ಆ ಮಕ್ಕಳಿಗೆ!

**ಕವಿ ಕೃತಿ ಪರಿಚಯ :**



**ವಿಜಯಶ್ರೀ ಹಾಲಾಡಿ (ಜನನ: 1975 ಎಪ್ರಿಲ್ 28) ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಹಾಲಾಡಿ ಗ್ರಾಮದ ಮುದೂರಿ** ಎಂಬ ಹಳ್ಳಿಯವರು. ತಂದೆ ಎಂ. ಬಾಬು ರಾವ್, ತಾಯಿ ರತ್ನಾವತಿ. ವೃತ್ತಿಯಲ್ಲಿ ಸರ್ಕಾರಿ ಪ್ರೌಢ ಶಾಲೆಯ ಕನ್ನಡ ಭಾಷಾ ಶಿಕ್ಷಕಿ. ಪ್ರೌಢ ಸಾಹಿತ್ಯ ಮತ್ತು ಮಕ್ಕಳ ಸಾಹಿತ್ಯಗಳೆರಡನ್ನೂ ಬರೆಯುತ್ತಿದ್ದಾರೆ. ಇದುವರೆಗೆ ಎಂಟು ಪುಸ್ತಕಗಳು ಪ್ರಕಟವಾಗಿದ್ದು ಅವುಗಳಲ್ಲಿ 5 ಮಕ್ಕಳ ಕೃತಿಗಳು – "**ಓತಿಕ್ಯಾತ ತಲೆಕುಣ್ಸಿ**", "**ಪಪ್ಪು ನಾಯಿಯ ಪೀಪಿ**", "**ಸೂರಕ್ಕಿ ಗೇಟ್**", "**ಜಂಬಿಕೊಳ್ಳಿ ಮತ್ತು ಪುಟ್ಟ ವಿಜಿ**", "**ಕಾಡಂಚಿನ ಊರಿನಲ್ಲಿ**". ಸದ್ಯ ಕನ್ನಡದಲ್ಲಿ ಮಕ್ಕಳಿಗಾಗಿ ಹೊಸತನದಿಂದ ಬರೆಯುತ್ತಿರುವ ಲೇಖಕರಲ್ಲಿ ವಿಜಯಶ್ರೀ ಹಾಲಾಡಿಯೂ ಒಬ್ಬರು. "**ಪಪ್ಪು ನಾಯಿಯ ಪೀಪಿ**" ಕೃತಿಗೆ 2015ನೇ ಸಾಲಿನ **ಕರ್ನಾಟಕ ಸಾಹಿತ್ಯ ಅಕಾಡಮಿ ಪುಸ್ತಕ** ಬಹುಮಾನ ಬಂದಿದೆ. ಜಿ.ಬಿ ಹೊಂಬಳ ಮಕ್ಕಳ **ಸಾಹಿತ್ಯ ರಾಜ್ಯ ಪ್ರಶಸ್ತಿ, ಡಿಸೋಜ – ಎಚ್ಚೆಸ್ವಿ ಪುಟಾಣಿ ಪುರಸ್ಕಾರ** ಮುಂತಾದವು ಇವರ ಕೃತಿಗಳಿಗೆ ಸಂದಿವೆ.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

೧. ವಿಜಿಗೆ ಗುಮ್ಮಗಳ ಬಗ್ಗೆ ಭಯ ಹುಟ್ಟಿದ್ದೇಕೆ?

೨. ಹಳ್ಳಿಯಲ್ಲಿ ರಾತ್ರಿಯ ಕತ್ತಲು ಹೇಗಿರುತ್ತದೆ?

೩. ರಾತ್ರಿಯ ಕತ್ತಲಿನಲ್ಲಿ ಬೆಳಕು ಹುಟ್ಟಿಸಿಕೊಳ್ಳಲು ಹಳ್ಳಿಗರು ಏನೇನು ಉಪಾಯಗಳನ್ನು ಮಾಡುತ್ತಾರೆ?

೪. ಯಕ್ಷಗಾನ ನೋಡಲು ಹೋಗಿಬರುವ ರಾತ್ರಿಗಳ ಅನುಭವಗಳೇನು?

೫. ವಿಜಿ ಕತ್ತಲಿನ ಭಯವನ್ನು ಹೇಗೆ ಗೆದ್ದಳು?

* * * * *

©KTBS Not to be republished

# ೪. 'ಹುಚ್ಚು ಹುರುಳು'

('ಬೀಚಿ'ಯವರ 'ಹುಚ್ಚು ಹುರುಳು' ನಗೆ ಬರಹದಿಂದ ಆಯ್ದ ಭಾಗ)

(೧)

**ಕರ್ನಾಟಕದಲ್ಲೊಂದೂರು.**

**ದಿನಾಂಕ :** ದಸರೆಯ ಮುಂದೊಂದು.

**ಮಾನ್ಯರೆ,**

ಅನಂತ ಪ್ರಣಾಮಗಳು. ಪ್ರತಿ ವರ್ಷದಂತೆ ಈ ವರ್ಷವೂ ನಮ್ಮೂರಲ್ಲಿ ಮುಂಬರುವ ದಸರೆಯಲ್ಲಿ ನಾಡಹಬ್ಬದ ಕಾರ್ಯಕ್ರಮವನ್ನು ನಡೆಸಬೇಕೆಂದು ನಿರ್ಧರಿಸಿದ್ದೇವೆ. ತಮ್ಮಂತಹ ಸುಪ್ರಸಿದ್ಧ ಸಾಹಿತಿಗಳು ಸಹಕರಿಸಿ ಸಹಾಯ ಮಾಡದಿದ್ದಲ್ಲಿ ನಮ್ಮ ನಿರ್ಧಾರವು ಫಲಕಾರಿಯಾಗಲು ಸಾಧ್ಯವೇ ಇಲ್ಲ. ತಾವು ಕೃಪೆಮಾಡಿ ನಮ್ಮ ಈ ಕರೆಗೆ ಓಗೊಟ್ಟು ಬಂದು ಭಾಗವಹಿಸಿ ಇಲ್ಲಿಯ ಪುರಜನರಿಗೆ ತಮ್ಮ ಭಾಷಣದಿಂದ ಜ್ಞಾನಾಮೃತ ಪಾನ ಮಾಡಿಸುವಿರೆಂದು ನಂಬುತ್ತೇವೆ. ತಮಗೆ ಅನುಕೂಲವಾಗುವ ದಿನವನ್ನೂ, ತಮ್ಮ ಭಾಷಣದ ವಿಷಯವನ್ನೂ ಆದಷ್ಟು ಜಾಗ್ರತೆ ತಿಳಿಸಿದರೆ ಆಮಂತ್ರಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾಗುತ್ತದೆ.

ನಿಮ್ಮ ಉತ್ತರದ ಹಾದಿಯನ್ನು ಕಾಯುತ್ತಿದ್ದೇನೆ,

**ಇತಿ ನಿಮ್ಮವ,**

**ಕಾರ್ಯದರ್ಶಿ, ನಾಡಹಬ್ಬ ಸಮಿತಿ.**

© KTBS Not to be republished

(೨)

**ಕನ್ನಡ ಭಾಷಣಕಾರರು**
**ಕನ್ನಡ ಭಾಷಣಕಾರರೂರು**
**ದಿನಾಂಕ** ॥ ಎರಡು ದಿನಗಳ ನಂತರ
**ನಾಡಹಬ್ಬ ಸಮಿತಿಯ ಕಾರ್ಯದರ್ಶಿಗಳಿಗೆ–**

ನಿಮ್ಮ ಪತ್ರವು ಕೈ ಸೇರಿತು. ಅಯ್ಯೋ! ನೀವು ಮಾಡುತ್ತಿರುವ ಕನ್ನಡಮಾತೆಯ ಸೇವೆಯಲ್ಲಿ ನಾನು ಸಹಕರಿಸಿ, ಸೇವೆ ಮಾಡಲು ಎಂದಾದರೂ ಆಗದು ಅಂದೇನೆಯೇ? ನನ್ನ ಅಲ್ಪ ಸೇವೆಯನ್ನು ಸಲ್ಲಿಸಲು ಸದಾ ಸಿದ್ಧನಿದ್ದೇನೆ. ನಿಮ್ಮ ಅಪ್ಪಣೆಯನ್ನು ಮೀರಲು ಸಾಧ್ಯವೇ ಸ್ವಾಮೀ ನನ್ನಿಂದ? ನನ್ನ ಭಾಷಣವನ್ನು ಅಗತ್ಯವಾಗಿ ....... ದಿನಾಂಕದಂದು ಏರ್ಪಡಿಸಿಬಿಡಿ.

ಚಿಕ್ಕದೊಂದು ವ್ಯಾವಹಾರಿಕ ವಿಷಯ. ಇಂದಿನ ರೈಲ್ವೆ ಪ್ರವಾಸದ ತೊಂದರೆ ನಿಮಗೆ ತಿಳಿಯದೆ ಇಲ್ಲ. ಎರಡನೆಯ ದರ್ಜೆ ಪ್ರವಾಸವಂತೂ ಸಾಧ್ಯವೇ ಇಲ್ಲ. ಅದಲ್ಲದೆ ನನ್ನಂತಹ ಪ್ರಸಿದ್ಧ ಪ್ರಖ್ಯಾತ ಪುರುಷನ ಸ್ಥಾನಮಾನಕ್ಕೆ ಗೌರವವೂ ಇಲ್ಲ ಅನ್ನಿ, ಕಾರಣ ಕನಿಷ್ಠಪಕ್ಷ ನೀವು ಮೊದಲನೆಯ ವರ್ಗದ ವೆಚ್ಚವನ್ನು ಭರಿಸುವುದಾದರೆ ಮಾತ್ರ ಬರಲು ಅನುಕೂಲ. ನಿಷ್ಠುರವಾಗಿ ತಿಳಿಸಿದ್ದೇನೆಂದು ಬೇರೆ ಏನೂ ತಿಳಿಯಬೇಡಿರಿ.

ಇನ್ನೊಂದು ಚಿಕ್ಕ ಮಾತು, ನನ್ನ ಮೂರನೆಯ ಮಗು –ಅವನಿಗೆ ರೈಲಿನಲ್ಲಿ ಅರ್ಧ ಚಾರ್ಜು ಮಾತ್ರ–ನನ್ನನ್ನು ಅರಗಳಿಗೆಯೂ ಬಿಟ್ಟಿರಲರಿಯನು. ಅನಿವಾರ್ಯವಾಗಿ ಅವನನ್ನೂ ನನ್ನೊಟ್ಟಿಗೆ ಕರೆತರಬೇಕಾಗಿದೆ. ನಿಮಗೆ ಅದೇನು ಮಹಾ ವೆಚ್ಚ ಬಿಡಿ, ಅನ್ಯಥಾ ಭಾವಿಸಬೇಡಿರಿ.

**ನಿಸ್ವಾರ್ಥ ಬುದ್ಧಿಯಿಂದ ಸೇವೆಗೈಯುವ,**

.....................

©KTBS Not to be republished

(೩)

**ಕರ್ನಾಟಕದಲ್ಲೊಂದೂರು.**
**ದಿನಾಂಕ**॥ ಮೂರು ದಿನಗಳ ನಂತರ.
**ಮಹನೀಯರೇ**

ಆಯಿತು. ಮೊದಲನೆಯ ವರ್ಗದ ಪ್ರಯಾಣದ ಖರ್ಚನ್ನು ಮತ್ತು ನಿಮ್ಮ ಮೂರನೆಯ ಮಗನ ಅರ್ಧ ಖರ್ಚನ್ನು ಭರಿಸಲು ನಮ್ಮ ಸಮಿತಿಯನ್ನು ಒಪ್ಪಿಸಿದ್ದೇನೆ. ನೀವು ಸೂಚಿಸಿದಂತೆ .................. ದಿನಾಂಕದಂದು ನಿಮ್ಮ ಭಾಷಣ ಏರ್ಪಡಿಸುತ್ತೇವೆ. ಅಂದಹಾಗೆ ನಿಮ್ಮ ಭಾಷಣದ ವಿಷಯ ತಿಳಿಸಲೆ ಇಲ್ಲ. ದಯವಿಟ್ಟು ತಿಳಿಸುವಿರಾ?

**ಇಂತು ಬೇಡುವ,**

..........................

**ಕಾರ್ಯದರ್ಶಿ, ನಾಡಹಬ್ಬ ಸಮಿತಿ.**

(೪)

**ಕನ್ನಡ ಭಾಷಣಕಾರರು**

**ಕನ್ನಡಭಾಷಣಕಾರರೂರು**

**ದಿನಾಂಕ**॥ ಎರಡು ದಿನಗಳ ಅನಂತರ

ನಾಡಹಬ್ಬ ಸಮಿತಿಯ ಕಾರ್ಯದರ್ಶಿ ಗೆಳೆಯರೆ–

ಎಷ್ಟು ಮರೆವು ನೋಡಿ ನನಗೆ? ನನ್ನ ವಿಚಾರ ಹೇಳುವ ಭರದಲ್ಲಿ ವಿಷಯವನ್ನು ಮರೆತಿದ್ದೆ. ನಾನು ಮನೆಯಿಂದ ಟ್ಯಾಕ್ಸಿಯಲ್ಲಿ ಹೊರಟು, ನಿಮ್ಮೂರಲ್ಲಿ ನೀವು ಏರ್ಪಡಿಸುವ ಬಿಡಾರ ಮುಟ್ಟುವವರೆಗೂ ಬರೀ ಚಿಲ್ಲರೆ ಖರ್ಚೇ ಹೇರಳವಾಗಿ ಬರುತ್ತೆ ಕಣ್ರೀ, ಕೂಲಿ ಅನ್ನಿ ಇನ್ನೊಂದು ಅನ್ನಿ, ಪ್ರವಾಸದಲ್ಲಿ ಹಣ್ಣು–ಹಂಪಲುಗಳನ್ನು ತಿನ್ನುವ ಅಭ್ಯಾಸ ಬೇರೆ. ಅದರ ಖರ್ಚಿನ ..........ರೂಪಾಯಿಗಳನ್ನು ತಾವು ನನಗೆ ಕೊಡಬೇಕಾಗುತ್ತಲ್ಲ? ನಿಮ್ಮ ಅನುಕೂಲವನ್ನು ತಿಳಿಸಿಬಿಡಿ. ನಿರ್ದಾಕ್ಷಿಣ್ಯವಾಗಿ ಬರೆದುದಕ್ಕೆ ಬೇಸರಪಡಬೇಡಿ

ಹೋ, ಅಂದ ಹಾಗೆ ನನ್ನ ಭಾಷಣದ ವಿಷಯ 'ನಮ್ಮ ಆರ್ಥಿಕ ದುಃಸ್ಥಿತಿ'

**ನಿಮ್ಮ ಜ್ಞಾನಾಮೃತಕ್ಕಾಗಿ ಹಾತೊರೆದ ಭಾಷಣಕಾರ**

..........................

©KTBS Not to be republished

(೫)

**ಕರ್ನಾಟಕದಲ್ಲೊಂದೂರು.**

**ದಿನಾಂಕ**॥ ಮೂರು ದಿನಗಳ ಅನಂತರ.

**ಮಹನೀಯರೇ**


ತಾವು ದಯವಿಟ್ಟು ಹೊರಡಬೇಡಿ; ತಮ್ಮ ಭಾಷಣದ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ.

ಇದಕ್ಕೆ ಕಾರಣ " ನಮ್ಮ ಆರ್ಥಿಕ ದುಃಸ್ಥಿತಿ"

ತಮ್ಮ ಭಾಷಣಾಮೃತವನ್ನು ಸವಿಯುವ ಪುಣ್ಯವಿಲ್ಲದ ನಿರ್ಭಾಗ್ಯ ಕಾರ್ಯದರ್ಶಿ.

ನಾಡಹಬ್ಬ ಸಮಿತಿ.

**ಕವಿ ಕೃತಿ ಪರಿಚಯ :**



**ಬೀಚಿ.** **ಬೀಚಿ ಕಾವ್ಯ ನಾಮದಿಂದ** ಮನೆಮಾತಾಗಿರುವ **'ರಾಯಸಂ' ಭೀಮಸೇನಾ ರಾವ್ ರವರು ೧೯೧೩ರಲ್ಲಿ ಹರಪನಹಳ್ಳಿಯಲ್ಲಿ** ಜನಿಸಿದರು. ಹಾಸ್ಯಕವಿಯಾಗಿ ಪ್ರಸಿದ್ಧರಾಗಿರುವ ಇವರು **ನಿರ್ಭಯಾಗ್ರಫಿ, ತಿಮ್ಮನ ತಲೆ, ತಿಮ್ಮರಸಾಯನ** ಮುಂತಾದ ಹಾಸ್ಯ ಕೃತಿಗಳನ್ನು ರಚಿಸಿದ್ದಾರೆ.

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

೧. ಮೊದಲನೆಯ ಪತ್ರದಲ್ಲಿ ಭಾಷಣಕಾರರು ಯಾವ ಸಮಸ್ಯೆಯನ್ನು ಹೇಳಿಕೊಳ್ಳುತ್ತಾರೆ?

೨. ಭಾಷಣಕಾರರ ಭಾಷಣದ ವಿಷಯವೇನು?

೩. ಭಾಷಣಕಾರರಿಗೆ ಪತ್ರ ಬರೆದವರು ಯಾರು?

೪. ಭಾಷಣಕಾರರ ಭಾಷಣ ರದ್ದು ಪಡಿಸಲು ಕಾರಣವೇನು?

೫. ಭಾಷಣಕಾರರ ಸಮಸ್ಯೆಗೆ ಕಾರ್ಯದರ್ಶಿಗಳ ಕೊನೆಯ ಉತ್ತರವೇನು?

©KTBS Not to be republished

* * * * *

# ೫. ಇರುವೆಯ ಪಯಣ

– ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ

ಇರುವೆ ಇರುವೆ ಬಾ ಇಲ್ಲಿ
ಯಾವ್ಯಾವ್ ಊರು ನೋಡಿದ್ದೀ?
ಯಾವ್ಯಾವ್ ಊರ್‌ನಲ್ ಏನೇನ್ ಕಂಡಿ,
ಈಗ ಎಲ್ಲಿಗ್ ಹೊರಟಿದ್ದೀ?



ಬಾಗಿಲ ಸಂದು, ಗೋಡೆ ಬಿರುಕು
ಬೆಲ್ಲದ ಡಬ್ಬ, ಹಿತ್ಲು
ತಿಂಡೀ ಇರೋ ಹುಡುಗನ ಜೇಬು,
ಹಾಲಿನ ಪಾತ್ರೇ ಸುತ್ಲೂ.


©KTBS Not to be republished

ಒಂದೊಂದ್ ಊರೂ ಒಂದೊಂದ್ ಥರ.
ಬಸ್ಸೇ ಇಲ್ಲದ ಊರ್ಗೆ
ನಡಕೊಂಡ್ಹೋಗೇ ಬಂದಿದೀನಿ
ಚಪ್ಲಿ ಇಲ್ದೇ ಕಾಲ್ಗೆ!



ಸಕ್ಕರೆ ಬಂಡೆ, ಬೆಲ್ಲದ ಬೆಟ್ಟ
ಹಾಲಿನ ಲೋಟದ ಬಾವಿ
ಸುತ್ತಿ ಈಗ ಹಿಡಿದಿದ್ದೀನಿ
ಮತ್ತೆ ಮನೇ ಹಾದಿ.

## ಕವಿ ಕೃತಿ ಪರಿಚಯ :



**ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ (ಜನನ: ೧೯೩೬, ಅಕ್ಟೋಬರ್ ೨೯, ಮರಣ: ೨೦೨೧, ಮಾರ್ಚ್ ೦೬)** ಅವರು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ನಿವೃತ್ತಿಹೊಂದಿದವರು. ಮೂಲತಃ ಶಿವಮೊಗ್ಗದವರಾದ ಅವರು ಬೆಂಗಳೂರು ನಗರದ ನಿವಾಸಿಗಳಾಗಿದ್ದರು. ತಂದೆ ಶಿವರಾಮ ಭಟ್ಟ, ತಾಯಿ ಮೂಕಾಂಬಿಕೆ. ಅವರ ಪೂರ್ಣ ಹೆಸರು ನೈಲಾಡಿ ಶಿವರಾಮ ಲಕ್ಷ್ಮೀನಾರಾಯಣ ಭಟ್ಟ. ಅವರು ಕವಿ ಮಾತ್ರವಲ್ಲದೆ ವಿಮರ್ಶಕ ಹಾಗೂ ವಾಗ್ಮಿ. ಅವರ ಭಾವಗೀತೆಗಳು ಕ್ಯಾಸೆಟ್‌ಗಳ ಮೂಲಕ ಜನಪ್ರಿಯಗೊಂಡಿವೆ. ಕವಿತೆ, ವಿಮರ್ಶೆ ಅನುವಾದ, ಮಕ್ಕಳ ಸಾಹಿತ್ಯ – ಹೀಗೆ ಅನೇಕ ಪ್ರಕಾರಗಳಲ್ಲಿ ಕೃಷಿ ಮಾಡಿರುವವರು.

**'ಶಿಶುಸಾಹಿತ್ಯ'** ಅವರಿಗೆ ಬಹು–ಪ್ರಿಯವಾದ ಪ್ರಕಾರಗಳಲ್ಲೊಂದು. ಮಕ್ಕಳ ಪದ್ಯಗಳ ಸಮಗ್ರ ಸಂಪುಟ **'ಕಿನ್ನರಲೋಕ', 'ಭಾಳ ಒಳ್ಳೇವ್ರು ನಂ ಮಿಸ್ಸು'** ಹಾಗೂ **'ಗೇರ್ ಗೇರ್ ಮಂಗಣ್ಣ'** ಅವರ ಇತರೆ ಕೃತಿಗಳು. **'ಕಿಶೋರಿ'** ಕವಿತಾ ಸಂಕಲನಕ್ಕೆ ಎನ್.ಸಿ.ಆರ್.ಟಿ.ಇ. ಬಾಲ ಸಾಹಿತ್ಯ ಪುರಸ್ಕಾರ, ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಪುರಸ್ಕಾರ ಲಭಿಸಿವೆ. ಮೂರು ಬಾರಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ರಾಷ್ಟ್ರೋತ್ಥಾನ ಸಾಹಿತ್ಯ ಮಕ್ಕಳಿಗಾಗಿ ಹೊರತಂದ ಭಾರತ ಭಾರತಿ ಪುಸ್ತಕ ಸಂಪದ ಮಾಲಿಕೆಯ ಹಲವಾರು ಪುಸ್ತಕಗಳನ್ನು ಭಟ್ಟರು ರಚಿಸಿದ್ದಾರೆ.

©KTBS Not to be republished

### ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

೧. ಇರುವೆ ಯಾವ ಯಾವ ಊರುಗಳನ್ನು ನೋಡಿ ಬಂದಿದೆ?

೨. ಬಸ್ಸೇ ಇಲ್ಲದ ಊರಿಗೆ ಇರುವೆ ಹೋಗಿ ಬಂದದ್ದು ಹೇಗೆ?

೩. ಹುಡುಗನ ಜೇಬಿನತ್ತ ಇರುವೆ ಹೋಗಿದ್ದೇಕೆ?

೪. ಹಾಲಿನ ಲೋಟವು ಇರುವೆಗೆ ಹೇಗೆ ಕಾಣಿಸುತ್ತದೆ?

೫. ಇರುವೆ ಯಾವುದನ್ನು ಬಂಡೆ, ಬೆಟ್ಟ ಎಂದು ಹೇಳುತ್ತಿದೆ?

೬. ಇರುವೆಯ ಕಣ್ಣಲ್ಲಿ ಸಣ್ಣ ಸಂಗತಿಗಳೂ ಹೇಗೆ ಬೃಹತ್ತಾಗಿ ಕಾಣುತ್ತವೆ ಎಂಬುದನ್ನು ಉದಾಹರಣೆ ಸಹಿತ ವಿವರಿಸಿ.

* * * * * * *